ಸಂಪುಟ: ೩೮ ಸಂಚಿಕೆ: 06 | ಆಗಸ್ಟ್ 2025
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ



"ಕಾರ್ಮಿಕರು ಮತ್ತು ಬಂಡವಾಳಿಗರ ನಡುವಿನ ಸೌಹಾರ್ದತೆಯನ್ನು ಕುರಿತ ಅಮೃತವಾಣಿಯನ್ನು ಸುಮಾರು 50 ವರ್ಷಗಳಿಂದಲೂ ಬೋಧಿಸಲಾಗುತ್ತಿದೆ ಹಾಗೂ ಬೃಹತ್ ಪ್ರಮಾಣದಲ್ಲಿ ಹಣವನ್ನು ವ್ಯಯಿಸಿ ಮಾದರಿ ಎನ್ನಿಸಿಕೊಳ್ಳುವಂತಹ ಸಂಸ್ಥೆಗಳನ್ನು ಕಟ್ಟುತ್ತಾ ತಮ್ಮೀರ್ವರ ಹಿತಾಸಕ್ತಿಗಳ ನಡುವಿನ ಸಾಮರಸ್ಯವನ್ನು ಸಾಬೀತುಪಡಿಸಲು ಬಂಡವಾಳಶಾಹಿ ಔದಾರ್ಯತೆಯು ಯತ್ನಿಸಿದೆ ಮತ್ತು ಇಷ್ಟು ಆದಾಗ್ಯೂ......ನಾವು 50 ವರ್ಷಗಳ ಹಿಂದೆ ಎಲ್ಲಿ ಇದ್ದೆವೋ ಇಂದೂ ಸಹ ಅಲ್ಲೇ ಇದ್ದೇವೆ......"

– ಫ್ರೆಡರಿಕ್ ಎಂಗೆಲ್ಸ್ (28-11-1820 ರಿಂದ 05-08-1895)
(ಮೂಲ: ದಿ ಹೌಸಿಂಗ್ ಕ್ವೆಷ್ಚನ್(ಸೂರಿನ ಪ್ರಶ್ನೆ)ದಿಂದ, 1872)

## ಒಳ ಪುಟಗಳಲ್ಲಿ.............

ವಿಮಾನ ಅಪಘಾತ: ವಿಮಾನಯಾನ ಸಚಿವಾಲಯದ ಜವಾಬ್ದಾರಿ ಏನು?------------------------2
ದೇವನಹಳ್ಳಿ: ರೈತರ ಸುದೀರ್ಘ ಹೋರಾಟಕ್ಕೆ ಸಿಕ್ಕ ಜಯ---------------------------3
ಕೃತಕ ಬುದ್ಧಿಮತ್ತೆಯ ಸವಾಲುಗಳು-------------7
ಗಾಜಾದಲ್ಲಿ ನಡೆಯುತ್ತಿರುವುದು ಭೀಕರ ನರಮೇಧ--------------------------8
ಯುದ್ಧವನ್ನು ನಿಲ್ಲಿಸಲು ಅಮೇರಿಕ-ಇಸ್ರೇಲ್ ಮೇಲೆ ಒತ್ತಡ-----------------------------9
ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಸಂಪೂರ್ಣ ಯಶಸ್ವಿ-------------------------10

## ಫ್ಯಾಸೀವಾದ: ಅಂದು-ಇಂದು

(1962, ಜೂನ್‌ನಲ್ಲಿ ಪ್ರಕಟವಾದ, ಶಿವದಾಸ್ ಘೋಷ್‌ರವರ 'ಘಳಿಗೆಯ ಕರೆ' ಕೃತಿಯಿಂದ, ಇಂದಿಗೂ ಪ್ರಸ್ತುತವಾದ 'ಫ್ಯಾಸೀವಾದ'ದ ಕುರಿತಾದ ಕೆಲ ಅಂಶಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.)



ಕಾಮ್ರೇಡ್ ಶಿವದಾಸ್ ಘೋಷ್
(05-08-1923 ರಿಂದ 05-08-1976)

### ಫ್ಯಾಸೀವಾದದ ವಿಶಿಷ್ಟ ಗುಣಲಕ್ಷಣಗಳು

ಫ್ಯಾಸೀವಾದವು ಚಾರಿತ್ರಿಕವಾಗಿ ಹದಗೊಂಡ ಪ್ರತಿಕ್ರಾಂತಿಯ ಒಂದು ಸ್ವರೂಪವಾಗಿದೆ; ಈ ಮೂಲಕ ಬಂಡವಾಳವಾದವು ಒಂದು ಮುಂಜಾಗ್ರತಾ ಕ್ರಮವಾಗಿ ಕ್ರಾಂತಿಯನ್ನು ತಡೆಯಲು ಪ್ರಯತ್ನಿಸುತ್ತದೆ. ಪ್ರಸಕ್ತ ಬಿಕ್ಕಟ್ಟು ಪೀಡಿತ, ಗೊಂದಲದ ಗೂಡಾಗಿರುವ ಹಾಗೂ ಕುಖ್ಯಾತವಾಗಿರುವ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಜನರಲ್ಲಿ ಹೆಚ್ಚುತ್ತಿರುವ ಅಸಮಾಧಾನದ ಸಮ್ಮುಖದಲ್ಲಿ, ಈ ವ್ಯವಸ್ಥೆಯನ್ನು ಕಾಪಾಡಲು ಅದನ್ನು ವಿನ್ಯಾಸಗೊಳಿಸಲಾಗಿದೆ. ಒಂದು ನಿರ್ದಿಷ್ಟ ಸನ್ನಿವೇಶಗಳ ಸಂದಿಗ್ಧ ಕಾಲದಲ್ಲಿ, ಬಂಡವಾಳಶಾಹಿ ಆರ್ಥಿಕ ಸಂಘಟನೆಯ, ರಾಜಕೀಯ ಸಂಸ್ಥೆಯ ಮತ್ತು ಆಡಳಿತ ವ್ಯವಸ್ಥೆಯ ಸಾಮಾನ್ಯ ಸ್ವರೂಪವು, ಉಲ್ಬಣಿಸುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟನ್ನು ನಿಭಾಯಿಸಲು ವಿಫಲವಾದಾಗ, ಅಲ್ಪಸ್ವಲ್ಪವಾದರೂ ಮಾರುಕಟ್ಟೆಯ ಸ್ಥಿರತೆಯನ್ನು ನಿರ್ವಹಿಸುವುದು ಮತ್ತು ಅತ್ಯಧಿಕ ಲಾಭಗಳಿಸುವುದು ಬಹುತೇಕವಾಗಿ ಅಸಾಧ್ಯವಾದಾಗ, ಬಿಕ್ಕಟ್ಟಿನ ಕಾರಣದಿಂದ ಜನಸಾಮಾನ್ಯರಿಗೆ ಜೀವನದಲ್ಲಿ ಅಭದ್ರತೆಯ ಭಾರಿ ಹೊಡೆತ ಬಿದ್ದು, ಪ್ರಸ್ತುತ ಪರಿಸ್ಥಿತಿಯನ್ನು ಬದಲಾಯಿಸುವ ಅವಶ್ಯಕತೆಯಿದೆಯೆಂದು ಬಂಡವಾಳಿಗರಿಗೆ ಅನಿಸಿದಾಗ, ಅಂತಹ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿ ಆರ್ಥಿಕತೆಯ ಅತ್ಯಧಿಕ ಲಾಭದ ಮೂಲ ನಿಯಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಚಾಲ್ತಿಯಲ್ಲಿರಿಸಲು, ಸಂಸದೀಯ ಪ್ರಜಾಸತ್ತೆಯು ವರ್ಗ ಸರ್ವಾಧಿಕಾರದ ಮೇಲೆ ಹೊದಿಸಿರುವ ಎಲ್ಲಾ ಮುಸುಕುಗಳನ್ನು ಬೂರ್ಜ್ವಾಜಿಯು ಕಿತ್ತೆಸೆಯುತ್ತದೆ. ಈ 4ನೇ ಪುಟಕ್ಕೆ

## "ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ ಕಡ್ಡಾಯವಲ್ಲ"
### ಸರ್ವೋಚ್ಚ ನ್ಯಾಯಾಲಯ

ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ಜಾರಿಗೆ ತರಲು ಯಾವುದೇ ರಾಜ್ಯವನ್ನೂ ಕೇಂದ್ರವು ಬಲವಂತಪಡಿಸುವಂತಿಲ್ಲ ಎಂದು 2024ರ ಮೇ 9ರಂದು ಸರ್ವೋಚ್ಚ ನ್ಯಾಯಾಲಯವು ತನ್ನ ಮಹತ್ವದ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. ಶಿಕ್ಷಣವು ಭಾರತದ ಸಂವಿಧಾನದ ವಿಧಿ 32ರ ವ್ಯಾಪ್ತಿಯ ಹೊರಗೆ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ಈ ವಿಷಯದಲ್ಲಿ ನಿರ್ದೇಶನ ನೀಡುವ ಅಧಿಕಾರವಿಲ್ಲ ಎಂದು ನ್ಯಾಯಾಲಯ ಹೇಳಿದೆ. ಇದೇ ಸಂದರ್ಭದಲ್ಲಿ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಮತ್ತು ಇತರ ರಾಜ್ಯಗಳಲ್ಲಿ ತ್ರಿಭಾಷಾ ನೀತಿಯನ್ನು ಜಾರಿಗೆ ತರಬೇಕೆಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಸಹ ನ್ಯಾಯಾಲಯವು ಪುರಸ್ಕರಿಸಿಲ್ಲ. ಎನ್‌ಇಪಿ-2020ನ್ನು ಜಾರಿಯನ್ನು ವಿರೋಧಿಸಿ ದೇಶವ್ಯಾಪಿ ನಡೆಯುತ್ತಿರುವ 'ಸಾರ್ವಜನಿಕ ಶಿಕ್ಷಣ ಉಳಿಸಿ' ಹೋರಾಟಕ್ಕೆ ಸಂದ ಜಯ ಇದಾಗಿದೆ!

ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿ ಇಡೀ ದೇಶವು ಸಂಪೂರ್ಣ ಲಾಕ್‌ಡೌನ್‌ನಲ್ಲಿದ್ದ ಅತ್ಯಂತ ಸಂಕಷ್ಟದ ಸಮಯದಲ್ಲಿ ಎನ್‌ಇಪಿ-2020ನ್ನು ಜಾರಿಗೊಳಿಸಲಾಯಿತು. ಶಿಕ್ಷಣತಜ್ಞರು, ಬುದ್ಧಿಜೀವಿಗಳು ಹಾಗೂ ಶಿಕ್ಷಣಪ್ರಿಯ ಜನತೆಯನ್ನು ತೊಡಗಿಸಿಕೊಂಡು ಯಾವುದೇ ದೇಶವ್ಯಾಪಿ ಚರ್ಚೆ, ಸಂವಾದ, ಅಭಿಪ್ರಾಯ ಸಂಗ್ರಹ, ಚಿಂತನೆಗಳನ್ನೂ ನಡೆಸದೆ ಸಂಪುಟದ ಏಕಪಕ್ಷೀಯ ನಿರ್ಧಾರವನ್ನು ದಿಢೀರನೆ ಹೇರಲಾದ ಶಿಕ್ಷಣ ನೀತಿ ಇದು. ಪ್ರಸ್ತಾವನೆಯನ್ನು ಸಂಸತ್ತಿನಲ್ಲಿ ಮಂಡಿಸುವ ಗೋಜಿಗೂ ಸರ್ಕಾರವು ಹೋಗಲಿಲ್ಲ. ಶಿಕ್ಷಣವು ಸಂಯುಕ್ತ ಪಟ್ಟಿಗೆ ಸೇರುತ್ತದೆಯಾದರೂ ಕೇಂದ್ರ ಸರ್ಕಾರವು ಈ ಕುರಿತಾಗಿ ರಾಜ್ಯಗಳ ಅಭಿಪ್ರಾಯವನ್ನೂ ಪಡೆಯಲಿಲ್ಲ. ಜನಗಳ ಅಭಿಪ್ರಾಯಗಳನ್ನು ಪಡೆಯುವ ಅಧಿಕೃತ ಪ್ರಹಸನ ನಡೆಸಿತು. ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಣ ತಜ್ಞರು ನೀಡಿದ ಅಭಿಪ್ರಾಯಗಳೆಲ್ಲಾ ಕಸದ ಬುಟ್ಟಿಯನ್ನು ಸೇರಿದವು. 5ನೇ ಪುಟಕ್ಕೆ

## "ಎಸ್‌ಐಟಿ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ" - ಎಸ್‌ಯುಸಿಐ(ಸಿ)

ಬೆಳ್ತಂಗಡಿ ತಾಲೂಕಿನಲ್ಲಿ ನಡೆದಿವೆ ಎನ್ನಲಾದ ನೂರಾರು ಅಸಹಜ ಸಾವುಗಳ ಕುರಿತು ನಿಷ್ಪಕ್ಷಪಾತ ತನಿಖೆಯಾಗಲಿ ಎಂದು ಆಗ್ರಹಿಸಿ ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ.ಉಮಾ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

ಬೆಳ್ತಂಗಡಿ ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವೊಂದರ ಸುತ್ತಮುತ್ತ ಕಳೆದೆರಡು ದಶಕಗಳಲ್ಲಿ ನೂರಾರು ಅಸಹಜ ಸಾವುಗಳು ಸಂಭವಿಸಿವೆ ಎಂಬ ಆರೋಪ ನಿರಂತರವಾಗಿ ಕೇಳಿಬರುತ್ತಲೇ ಇದೆ. ಅನನ್ಯಾ ಭಟ್, ಸೌಜನ್ಯ ಮೊದಲಾದ ಎಳೆಯ ಹುಡುಗಿಯರ ಸಾವಿನ ತನಿಖೆ ಕೊನೆ ಮುಟ್ಟಲೇ ಇಲ್ಲ, ತಪ್ಪಿತಸ್ಥರು ಯಾರೆಂಬುದು ಹೊರ ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿನ ಧಾರ್ಮಿಕ ಕ್ಷೇತ್ರದಲ್ಲಿ ಕೆಲಸ ಮಾಡಿದ ಪೌರಕಾರ್ಮಿಕನೊಬ್ಬ ಮೈ ನಡುಕ ಹುಟ್ಟಿಸುವಂತಹ ಆರೋಪ ಮಾಡಿದ್ದಾರೆ. ತಾನು ನೂರಾರು ಎಳೆಯ ಬಾಲಕಿಯರ ಮತ್ತು ವಯಸ್ಕ ಹೆಣ್ಣುಮಕ್ಕಳ ಶವಗಳನ್ನು ಹೂತಿರುವುದಾಗಿ ದೂರು ದಾಖಲಿಸಿದ್ದೇ ಅಲ್ಲದೆ ಅದರ ಪರಿಣಾಮವಾಗಿ ರಾಜ್ಯ ಸರ್ಕಾರವು ವಿಶೇಷ ತನಿಖಾ ದಳ(ಎಸ್‌ಐಟಿ)ವನ್ನು ಕೂಡ ನೇಮಕ ಮಾಡಿದೆ.

ಇಡೀ ದೇಶದ ಗಮನ ಸೆಳೆದಿರುವ ಈ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ಮುಂದಾಗಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಯಾವುದೇ ರಾಜಕೀಯ ಅಥವಾ ಧಾರ್ಮಿಕ ಪ್ರಭಾವಗಳಿಗೆ ಒಳಗಾಗದೆ ಎಸ್‌ಐಟಿ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಅಪರಾಧಿಗಳು ಎಷ್ಟೇ ಪ್ರಭಾವಿಯಾಗಿದ್ದು, ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಎಸ್‌ಯುಸಿಐ(ಸಿ) ಒತ್ತಾಯಿಸುತ್ತದೆ. ನಿಗೂಢವಾಗಿರುವ ಈ ನಾಪತ್ತೆ ಮತ್ತು ಸಾವಿನ ಪ್ರಕರಣಗಳ ಸತ್ಯಾಂಶವೇನೆಂದು ಹೊರಬರಬೇಕು ಮತ್ತು ಈ ಅಪರಾಧಗಳ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕೆಂಬುದು ಜನಸಾಮಾನ್ಯರ ಒತ್ತಾಸೆಯಾಗಿದೆ. ಆದ್ದರಿಂದ ಜನರ ನಿರೀಕ್ಷೆಗೆ ತಕ್ಕಂತೆ ಸರ್ಕಾರ ಮತ್ತು ತನಿಖಾ ದಳ ಕೆಲಸ ಮಾಡಬೇಕು ಹಾಗೂ ತನಿಖೆ ಮತ್ತೆ ಹಳ್ಳ ಹಿಡಿಯದಂತೆ ಜನತೆ ಜಾಗರೂಕರಾಗಿರಬೇಕು ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಕರೆ ನೀಡುತ್ತದೆ.

## 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಕರಾಳ ಮುಖ

ನೀತಿ ಆಯೋಗದ ಮುಖ್ಯಸ್ಥರು ಐಎಂಎಫ್‌ನ ಭಾರತದ ಜಿಡಿಪಿ ಬೆಳವಣಿಗೆಯ ಅಂದಾಜುಗಳನ್ನು ಉಲ್ಲೇಖಿಸಿ, ಭಾರತವು ಈಗಾಗಲೇ ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದು ಹೇಳಿಕೊಂಡಿದ್ದಾರೆ. ಆದರೆ, ಇದು ಕೇವಲ ಊಹಾತ್ಮಕ ಅಂದಾಜು ಎಂಬುದು ವಾಸ್ತವ. ಈ ಅಂದಾಜುಗಳು ಬಿಜೆಪಿ ಸರ್ಕಾರಕ್ಕೆ ಆತ್ಮ-ವೈಭವದ ಭ್ರಮೆಯನ್ನು ಸೃಷ್ಟಿಸಲು ಸಹಾಯ ಮಾಡಬಹುದಾದರೂ, ಐಎಂಎಫ್ ಪ್ರತಿನಿಧಿಯು ಭಾರತವು 2025 ರ ಅಂತ್ಯದ ವೇಳೆಗೆ ಕೇವಲ $4 ಟ್ರಿಲಿಯನ್ ಆರ್ಥಿಕತೆಯ ಗುರಿಯನ್ನು ತಲುಪುವ ಸಾಧ್ಯತೆಯಿದೆ ಎಂದು ಘೋಷಿಸಿದಾಗ ಈ ಭ್ರಮೆ ಒಡೆದುಹೋಯಿತು.

ದೇಶದಲ್ಲಿ ಸೃಷ್ಟಿಯಾಗುವ ಸಂಪತ್ತಿನ ಹಂಚಿಕೆಯ ಮಾದರಿಯು ಜಿಡಿಪಿ ಬೆಳವಣಿಗೆಯಲ್ಲಿ ಪ್ರತಿಫಲಿಸುವುದಿಲ್ಲ ಎಂದು ನಾವು ಪದೇ ಪದೇ ಹೇಳಿದ್ದೇವೆ. ಅಸಮಾನತೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ದೇಶದ ಒಟ್ಟು ಸಂಪತ್ತಿನ 77% ಅನ್ನು 10% ಅಗ್ರ ಶ್ರೀಮಂತರು ಹೊಂದಿದ್ದಾರೆ. ಆದರೆ, 67 ಕೋಟಿ ಬಡ ಜನರು ತಮ್ಮ ಸಂಪತ್ತಿನಲ್ಲಿ ಕೇವಲ 1% ಏರಿಕೆಯನ್ನು ಕಂಡಿದ್ದಾರೆ. ಹೀಗಾಗಿ, ಜಿಡಿಪಿ ಆಧಾರಿತ ಬೆಳವಣಿಗೆಯು ತಪ್ಪು ಕಲ್ಪನೆಯಾಗಿದೆ.

ಅದೇ ರೀತಿ, ತಲಾ ಆದಾಯ (Per Capita Income) ಕೂಡಾ ಅಷ್ಟೇ 5ನೇ ಪುಟಕ್ಕೆ

ಅಹಮದಾಬಾದ್

# ವಿಮಾನ ಅಪಘಾತ: ವಿಮಾನಯಾನ ಸಚಿವಾಲಯದ ಜವಾಬ್ದಾರಿ ಏನು?

ಜೂನ್ 12 ರಂದು ಮಧ್ಯಾಹ್ನ ಅಹಮದಾಬಾದ್ ವಿಮಾನ ನಿಲ್ದಾಣದ ಹೊರಗೆ ಏರ್ ಇಂಡಿಯಾ ವಿಮಾನವು ಪತನಗೊಂಡಿತು. ಸಿಬ್ಬಂದಿಗಳೂ ಸೇರಿದಂತೆ 276 ಅಮೂಲ್ಯ ಜೀವಗಳು ಬಲಿಯಾದವು! ಏರ್ ಇಂಡಿಯಾ ವಿಮಾನ–171 ಅಂತರರಾಷ್ಟ್ರೀಯ ವಿಮಾನವಾಗಿದ್ದು ಅಹಮದಾಬಾದಿನಿಂದ ಲಂಡನ್ ಗ್ಯಾಟ್ವಿಕ್ ವಿಮಾನ ನಿಲ್ದಾಣದ ಮಧ್ಯೆ ಹಾರುತ್ತಿತ್ತು. ಅಪಘಾತದಿಂದ ವಿಮಾನ ತುಂಡಾಗಿ ಬಿಜೆ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಕ್ಯಾಂಟೀನ್ ಮೇಲೆ ಬಿದ್ದಿತು. ಈ ಅಪಘಾತವು ಜನರಿಗೆ ಸಿಡಿಲಿನಂತೆ ಬಡಿಯಿತು. ಆದರೆ, ಮೋದಿ ಸರ್ಕಾರದಲ್ಲಿ ಎರಡನೇ ಸ್ಥಾನದಲ್ಲಿರುವ ಶ್ರೀ ಅಮಿತ್ ಶಾ ಈ ಅನಾಹುತಕ್ಕೆ ಯಾವುದೇ ವಿಷಾದ ವ್ಯಕ್ತಪಡಿಸದೆ, "ಇದು ಒಂದು ದುರಂತ. ಯಾರೂ ಇದನ್ನು ತಡೆಯಲಾಗುವುದಿಲ್ಲ" ಎಂದರು.

ಇಂತಹ ಘೋರ! ವಿಮಾನ ದುರಂತದ ಸಂಪೂರ್ಣ ತನಿಖೆ ಆಗುವ ಮೊದಲೇ ಕೇಂದ್ರ ಗೃಹ ಸಚಿವರು ಹೀಗೆ ಹೇಳಬಹುದೇ? ಕೇಂದ್ರ ಗೃಹ ಸಚಿವರು, ಸರ್ಕಾರ ಮತ್ತು ವಿಮಾನಯಾನ ಇಲಾಖೆಯು ದುರಂತದ ಜವಾಬ್ದಾರಿಯನ್ನು ವಿಧಿಯ ತಲೆಗೆ ಕಟ್ಟುವುದು ಎಷ್ಟು ಸರಿ? ವಾಸ್ತವದ ದಾಖಲೆಗಳು ಬೇರೆ ಸತ್ಯವನ್ನೇ ಹೇಳುತ್ತಿವೆ. ಈ ಅವಘಡವನ್ನು ತಡೆಯಲಾಗಲಿಲ್ಲವೇ? ಮಾನವನಿಂದಾದ ತಪ್ಪುಗಳು ಏನಾದರೂ ಇವೆಯೇ? ಈ ಪ್ರಶ್ನೆಗಳು ಜನರ ಮನಸ್ಸಿನಲ್ಲಿ ಮೂಡುತ್ತಿವೆ.

### ಹಿಂದೆಯೂ ಬೋಯಿಂಗ್ ವಿಮಾನಗಳು ಎದುರಿಸಿದ್ದ ಸಮಸ್ಯೆಗಳು

2011 ರಲ್ಲಿ, ಬೋಯಿಂಗ್ "787 ಡ್ರೀಮ್‌ಲೈನರ್" ಅನ್ನು ವಾಣಿಜ್ಯ ವಿಮಾನಯಾನ ಮಾರುಕಟ್ಟೆಗೆ ಪರಿಚಯಿಸಲಾಯಿತು. ವಿಮಾನದ ಕಡಿಮೆ ತೂಕ, ದೀರ್ಘಾವಧಿ ಸಾಮರ್ಥ್ಯ, ಹೆಚ್ಚಿನ ಇಂಧನ ದಕ್ಷತೆ, ಪ್ರಯಾಣಿಕರ ಸೌಕರ್ಯ ಮತ್ತು ವ್ಯಾಪ್ತಿಯನ್ನು ಹೊಂದಿರುವ ಒಂದು 'ಅತ್ಯಾಧುನಿಕ' ವಿಮಾನ, 'ಕನಸಿನ' ವಿಮಾನವೆಂದು ಅದನ್ನು ಬಣ್ಣಿಸಲಾಯಿತು. ನಂತರ ಏರ್ ಇಂಡಿಯಾ ಇದನ್ನು ತನ್ನದಾಗಿಸಿಕೊಂಡಿತು. ಆದರೆ "ದಿ ಡ್ರೀಮ್‌ಲೈನರ್" ತನ್ನ ವಾಣಿಜ್ಯ ಹಾರಾಟದ ಆರಂಭ ದಿನದಿಂದಲೂ ತಾಂತ್ರಿಕ ಸಮಸ್ಯೆಗಳ ವಿವಾದದ ಕೇಂದ್ರದಲ್ಲಿದೆ ಎಂಬುದನ್ನು ನಾವು ಮರೆಯಬಾರದು.

ಕಳೆದ ದಶಕದಲ್ಲಿ ಹಲವು ಆರೋಪಗಳು ಬಂದಿದ್ದವು. 2013ರ ಆರಂಭದಲ್ಲಿ ಜಪಾನೀಸ್ ಏರ್ಲೈನ್ಸ್ ಒಡೆತನದ ಎರಡು ಡ್ರೀಮ್‌ಲೈನರ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಒಂದು ವಿಮಾನವು ಬೋಸ್ಟನ್‌ನ ಲೋಗನ್ ಏರ್‌ಪೋರ್ಟ್‌ಗೆ ಬಂದಿಳಿದಿತ್ತು. ಮತ್ತೊಂದು ವಿಮಾನವು ಜಪಾನ್ ವಿಮಾನ ನಿಲ್ದಾಣ ಬಿಟ್ಟ ಕೂಡಲೇ ಹಿಂತಿರುಗಬೇಕಾಯಿತು. ಎರಡೂ ವಿಮಾನಗಳಲ್ಲಿ ಬೆಂಕಿ ಹತ್ತಿಕೊಂಡಿರುವುದಕ್ಕೆ, ಲಿಥಿಯಂ–ಐಯಾನ್ ಬ್ಯಾಟರಿಗಳು ಅಧಿಕವಾಗಿ ಬಿಸಿಯಾಗಿರುವುದೇ ಕಾರಣ ಎಂದು ಆಗ ಪತ್ತೆಹಚ್ಚಲಾಗಿತ್ತು. ಬೋಯಿಂಗ್–787 ವಿಮಾನಗಳಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ಹಲವಾರು ಬಾರಿ ತೊಂದರೆಗಳು ಪ್ರಪಂಚದಾದ್ಯಂತ ವರದಿಯಾಗಿವೆ." (ಟೈಂ ಮ್ಯಾಗಜೀನ್: 13–06–2025)

ಅಕ್ಟೋಬರ್ 2018ರಲ್ಲಿ "ಲಯನ್–737 ಮ್ಯಾಕ್ಸ್" ವಿಮಾನದಲ್ಲಿ ಅಳವಡಿಸಲಾದ ಒಂದು ಪ್ರೋಗ್ರಾಮ್‌ನ ಅಸಮರ್ಪಕ ಕಾರ್ಯದಿಂದಾಗಿ ವಿಮಾನವು ಅಪಘಾತಕ್ಕೀಡಾಯಿತು. ಆ ಅಪಘಾತದಲ್ಲಿ ವಿಮಾನದಲ್ಲಿದ್ದ ಎಲ್ಲಾ 189 ಜನರು ಸಾವನ್ನಪ್ಪಿದರು. ಕೆಲವೇ ತಿಂಗಳುಗಳ ನಂತರ, ಮಾರ್ಚ್ 2019ರಲ್ಲಿ, ಇದೇ ವಿಮಾನ ಮಾದರಿಯನ್ನು ಬಳಸುತ್ತಿದ್ದ ಇಥಿಯೋಪಿಯನ್ ಏರ್ಲೈನ್ಸ್ ವಿಮಾನವು ಪ್ರೋಗ್ರಾಮಿಂಗ್ ನಲ್ಲಾದ ದೋಷದಿಂದಾಗಿ ಅಪಘಾತಕ್ಕೀಡಾಗಿ, ಎಲ್ಲಾ 157 ಜನರು ಸಾವನ್ನಪ್ಪಿದರು. ಹೀಗೆ, ಬೋಯಿಂಗ್ ವಿಮಾನದ ಹೊಸ ಮಾದರಿಯನ್ನು ಬಳಸುವಾಗ, 346 ಜನರು ತಮ್ಮ ಪ್ರಾಣವನ್ನು ಕಳೆದುಕೊಂಡರು. ಈ ವಿಮಾನಗಳ ಹಾರಾಟವನ್ನು ನಿಯಂತ್ರಿಸುವ ಸಾಫ್ಟ್‌ವೇರ್‌ನ ಅಸಮರ್ಪಕ ಕಾರ್ಯಾಚರಣೆ, ಎರಡೂ ಭೀಕರ ಅಪಘಾತಗಳಿಗೆ ಕಾರಣವಾಗಿದ್ದು, ಪೈಲಟ್‌ಗಳಿಗೆ ಇದನ್ನು ತಡೆಯಲು ಆಗಲಿಲ್ಲ. ಅಮೇರಿಕದ ಶಾಸಕಾಂಗದ ಮುಂದೆ ಸಾಕ್ಷ್ಯ ಹೇಳುವಾಗ ಅಮೇರಿಕದ ಫೆಡರಲ್ ಏವಿಯೇಷನ್ ಆಡಳಿತದ ಮುಖ್ಯಸ್ಥ ಮೈಕ್ ವಿಟೇಕರ್, 737 ಮ್ಯಾಕ್ಸ್–9 ವಿಮಾನದ ತಪಾಸಣೆಯಿಂದ, 'ಬೋಯಿಂಗ್‌ನಲ್ಲಿನ ಗುಣಮಟ್ಟದ ಸಮಸ್ಯೆಗಳು ಒಪ್ಪತಕ್ಕವಲ್ಲ, ಅಲ್ಲಿ ಇನ್ನು ಹೆಚ್ಚಿನ ಪರಿಶೀಲನೆಯ ಅಗತ್ಯವಿತ್ತು ಎಂದು ತಿಳಿದುಬಂದಿದೆ' ಎಂದಿದ್ದಾರೆ. ಜನವರಿ 2024ರಲ್ಲಿ ಒರೆಗಾನ್‌ನ ಪೋರ್ಟ್ಲ್ಯಾಂಡ್‌ನಿಂದ ಅಲಾಸ್ಕಾ ಏರ್‌ಲೈನ್ಸ್‌ನ ಬೋಯಿಂಗ್–737 ಮ್ಯಾಕ್ಸ್–9 ವಿಮಾನವು ಉಡಾವಣೆಯಾದ ಸ್ವಲ್ಪ ಸಮಯದಲ್ಲೇ ಬಾಗಿಲು ಹಾರಿಹೋದ ಸುದ್ದಿ ವರದಿಯಾಗಿತ್ತು. ಕಾಣೆಯಾದ ಬೋಲ್ಟ್‌ಗಳ ಕಾರಣದಿಂದಾಗಿಯೇ ಬಾಗಿಲು ಮುರಿದು ಹೋಗಿರಬೇಕು. ಏರೋಇನ್‌ಸೈಡ್ ಪ್ರಕಾರ ಈ ವರ್ಷ ಬೋಯಿಂಗ್–787 ವಿಮಾನಗಳಲ್ಲಿ ಎಂಜಿನ್‌ಗಳು, ಗೇರ್‌ಗಳು, ಫ್ಲಾಪ್‌ಗಳು, ಕ್ಯಾಬಿನ್‌ನಲ್ಲಿ ಗಾಳಿಯ ಒತ್ತಡದ ಇಳಿಕೆ ಮತ್ತು ಎತ್ತರದಲ್ಲಿನ ಸಮಸ್ಯೆಗಳ ಐದು ಅವಘಡಗಳು ವರದಿಯಾಗಿವೆ. ಏರ್ ಇಂಡಿಯಾ ಸ್ವತಃ ಒಂದು ದಶಕಕ್ಕೂ ಹೆಚ್ಚು ಕಾಲ ಈ ವಿಮಾನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಎದುರಿಸುತ್ತಿದೆ. ತೀರಾ ಇತ್ತೀಚಿನದೆಂದರೆ ಡಿಸೆಂಬರ್ 13, 2024ರಂದು ನವದೆಹಲಿಯಿಂದ ಬರ್ಮಿಂಗ್‌ಹ್ಯಾಮ್‌ಗೆ ಪ್ರಯಾಣಿಸುವ ವಿಮಾನ ಎಐ–113 ಬರ್ಮಿಂಗ್‌ಹ್ಯಾಮ್‌ನ ರನ್‌ವೇ 15ಅನ್ನು ಸಮೀಪಿಸುವಾಗ ನೋಸ್ ಗೇರ್‌ನಲ್ಲಿ ಹೈಡ್ರಾಲಿಕ್ ತೈಲದ ಸೋರಿಕೆಯನ್ನು ವರದಿ ಮಾಡಿದೆ. ಹಾಗಾಗಿ, ಅಮೇರಿಕ ಮೂಲದ ಬೋಯಿಂಗ್ ಸಂಬಂಧಿಸಿದಂತೆ ಮತ್ತೆ ಮತ್ತೆ ದೂರುಗಳು ಬಂದಿದ್ದರಿಂದ 2021 ಮತ್ತು 2022ರ ನಡುವೆ 787 ಬೋಯಿಂಗ್ ವಿಮಾನಗಳ ವಿತರಣೆಗಳನ್ನು ನಿಲ್ಲಿಸಬೇಕಾಯಿತು. ವಿಶ್ವ ಮಾರುಕಟ್ಟೆಯಲ್ಲಿ ಫ್ರಾನ್ಸ್ ಮೂಲದ ಏರ್‌ಬಸ್ ಕಂಪನಿಯೊಂದಿಗಿನ ಅದರ ತೀವ್ರ ಸ್ಪರ್ಧೆಯೇ ಇದಕ್ಕೆ ಕಾರಣ ಎಂಬುದು ಸುಸ್ಪಷ್ಟ.

### ಬೋಯಿಂಗ್ 787 ಡ್ರೀಮ್‌ಲೈನರ್‌ನ ಸುರಕ್ಷತಾ ಸಂಬಂಧಿ ಗುಟ್ಟು ರಟ್ಟು

2017 ರಲ್ಲಿ ನಿವೃತ್ತರಾದ ಮಾಜಿ ಗುಣಮಟ್ಟ ನಿಯಂತ್ರಣ ಎಂಜಿನಿಯರ್ ಜಾನ್ ಬಾರ್ನೆಟ್. 2019 ರಲ್ಲಿ ಕೆಲವು ಸಮಸ್ಯೆಗಳನ್ನು ಗುರುತಿಸಿದ್ದರು. ಉತ್ಪಾದನೆಯ ಒತ್ತಡಕ್ಕೆ ಸಿಲುಕಿ ಕಾರ್ಮಿಕರು ಅಸೆಂಬ್ಲಿ ಲೈನ್‌ನಲ್ಲಿ ಗುಣಮಟ್ಟವಿಲ್ಲದ ಭಾಗಗಳನ್ನು ಹಾಕುತ್ತಿದ್ದಾರೆ ಎಂದ ಅವರು ವಿಮಾನದ ಆಮ್ಲಜನಕ ವ್ಯವಸ್ಥೆಗಳಲ್ಲಿ ದೋಷಗಳನ್ನು ಗುರುತಿಸಿದ್ದು, ಇದರಿಂದಾಗಿ, ತುರ್ತು ಪರಿಸ್ಥಿತಿಯಲ್ಲಿ ತುರ್ತು ಉಸಿರಾಟದ ಮುಖವಾಡಗಳಲ್ಲಿ ನಾಲ್ಕರಲ್ಲಿ ಒಂದು ವಿಫಲಗೊಳ್ಳುವ ಸಾಧ್ಯತೆ ಇದೆ ಎಂದು ಅವರು ಆಕ್ಷೇಪಿಸಿದ್ದರು. ಆದರೆ, ಬೋಯಿಂಗ್ ಅವರ ಮಾತುಗಳನ್ನು ತಳ್ಳಿಹಾಕಿತ್ತು. ಆದಾಗ್ಯೂ, ಅಮೇರಿಕದ ನಿಯಂತ್ರಕ, ಎಫ್‌ಎಎ 2017ರಲ್ಲಿ ನಡೆಸಿದ ಪರಿಶೀಲನೆಯಲ್ಲಿ ಬಾರ್ನೆಟ್ ಅಭಿಪ್ರಾಯಗಳನ್ನು ಒಪ್ಪಿಕೊಂಡಿದ್ದರೂ ಸಹ ಅವರನ್ನು ಅವರ ಸ್ಥಾನದಿಂದ ಕೆಳಗಿಳಿಸಲಾಯಿತು ಮತ್ತು ಅವರನ್ನು ಹೊರಹಾಕಲಾಯಿತು. ಕಂಪನಿಯ ವಿರುದ್ಧ ಗುಟ್ಟುರಟ್ಟು ಮಾಡಿ, ಮೊಕದ್ದಮೆಯಲ್ಲಿ ಸಾಕ್ಷ್ಯ ನೀಡಿದ ಮರುದಿನವೇ ಅವರು ತಮ್ಮ ಕಾರಿನಲ್ಲಿ ಸತ್ತು ಬಿದ್ದಿರುವುದು ಕಂಡು ಬಂದಿದೆ! 2010ರಲ್ಲಿ 787 ಪರೀಕ್ಷಾ ಹಾರಾಟದಲ್ಲಿ ಸಂಭವಿಸಿದ ಭಾರಿ ಎಂಜಿನ್ ಬೆಂಕಿಯಲ್ಲಿ ಮತ್ತು 2016ರಲ್ಲಿ ಚಾರ್ಲ್‌ಟನ್‌ನಲ್ಲಿ ನಡೆದ ಮತ್ತೊಂದು ಪರೀಕ್ಷಾ ಹಾರಾಟದಲ್ಲಿ ವಿದೇಶಿ ವಸ್ತುವಿನ ಅವಶೇಷ ಸಿಕ್ಕಿತ್ತು. ಆದರೆ ಬೋಯಿಂಗ್ ಅಧಿಕಾರಿಗಳು ಅದನ್ನು ಮುಚ್ಚಿಹಾಕಿದ್ದರು.

ಬೋಯಿಂಗ್ ಪೂರೈಕೆದಾರ ಸ್ಪಿರಿಟ್ ಏರೋಸಿಸ್ಟಮ್ಸ್‌ನ ಮಾಜಿ ಗುಣಮಟ್ಟದ ಲೆಕ್ಕಪರಿಶೋಧಕ ಜೋಶುವಾ ಡೀನ್, ಸ್ಪಿರಿಟ್‌ನಲ್ಲಿ "737 ಉತ್ಪಾದನೆಯಲ್ಲಿ ಗುಣಮಟ್ಟದ ನಿರ್ವಹಣೆಯಲ್ಲಿ ಗಂಭೀರ ದೋಷವಿದೆ" ಎಂದು ಫೆಡರಲ್ ವಿಮಾನಯಾನ ಆಡಳಿತ (ಎಫ್‌ಎಎ)ಕ್ಕೆ ದೂರು ಸಲ್ಲಿಸಿದರು. ಸ್ಪಿರಿಟ್ ಡೀನ್ ಅವರನ್ನು ವಜಾಗೊಳಿಸಿತು. ನಂತರ ಅವರೂ ಸಹ ನಿಗೂಢವಾಗಿ ಸಾವನ್ನಪ್ಪಿದರು.

ಸ್ಪಿರಿಟ್ ಏರೋಸಿಸ್ಟಮ್ಸ್‌ನ ಗುತ್ತಿಗೆದಾರರಾದ ಸ್ಟ್ರೋಮ್‌ನಿಂದ ನೇಮಕಗೊಂಡ ಮೆಕ್ಯಾನಿಕ್ ರಿಚರ್ಡ್ ಕ್ಯುವಾಸ್, 2023ರಲ್ಲಿ 787 ವಿಮಾನಗಳ ಫಾರ್ವರ್ಡ್ ಪ್ರೆಶರ್ ಬಲ್ಕ್ ಹೆಡ್‌ಗಳಲ್ಲಿ ಅಸಮರ್ಪಕ ರಂಧ್ರಗಳನ್ನು ಕೊರೆದಿರುವುದಾಗಿ ಹೇಳಿದ್ದರು. ಅಕ್ಟೋಬರ್ 2023ರಲ್ಲಿ ಅವರು "ಗುಣಮಟ್ಟದ ಉತ್ಪಾದನೆ ಮತ್ತು ನಿರ್ವಹಣೆ ಪ್ರಕ್ರಿಯೆಗಳು ಅತ್ಯಂತ ಕಳಪೆ ಗುಣಮಟ್ಟದ್ದಾಗಿವೆ" ಎಂದು ಬೋಯಿಂಗ್ ಮತ್ತು ಸ್ಪಿರಿಟ್ ಎರಡಕ್ಕೂ ದೂರು ಸಲ್ಲಿಸಿದರು. ಕೆಲವು ತಿಂಗಳುಗಳ ನಂತರ ಅವರನ್ನು ವಜಾ ಮಾಡಲಾಯಿತು.

ಏಪ್ರಿಲ್ 2024ರಲ್ಲಿ, ಬೋಯಿಂಗ್ ಎಂಜಿನಿಯರ್ ಸ್ಯಾಮ್ ಸಲೆಹ್‌ಪೋರ್, ಅಮೇರಿಕನ್ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್(ಎಫ್‌ಎಎ)ಗೆ ನೀಡಿದ ಅಧಿಕೃತ ದೂರಿನಲ್ಲಿ 787 ಡ್ರೀಮ್‌ಲೈನರ್ "ಉತ್ಪಾದನೆಯನ್ನು ಹೆಚ್ಚಿಸುವ ಆತುರದಿಂದಾಗಿ ಉತ್ಪಾದನೆ ಹಾಗೂ ವಿವಿಧ ಪ್ರೋಗ್ರಾಂಗಳ ಕಾರ್ಯಾಚರಣೆಯ ದೋಷಗಳಿಗೆ ಕಾರಣವೆಂದು" ಅವರು ಗುರುತಿಸಿದ್ದರು. ಬೋಯಿಂಗ್ ಪ್ರಮುಖ ತಪಾಸಣೆಗಳನ್ನು ಬಿಟ್ಟುಬಿಟ್ಟಿದೆ, ಫ್ಯೂಸ್‌ಲೇಜ್ ವಿಭಾಗಗಳನ್ನು ತಪ್ಪಾಗಿ ಜೋಡಿಸಿದೆ ಮತ್ತು ಆಂತರಿಕ ಕಾಳಜಿಗಳನ್ನು ನಿರ್ಲಕ್ಷಿಸಿದೆ ಎಂದು ಅವರು ಆರೋಪಿಸಿದ್ದಾರೆ. ವಿಮಾನವು ಹಳೆಯದಾದಂತೆ ಅದರಲ್ಲಿನ ಲೋಪಗಳನ್ನು ಸರಿಪಡಿಸದಿದ್ದರೆ ಅದೊಂದು "ಸಜೀವ ಟೈಮ್ ಬಾಂಬ್"ನಂತೆ ಎಂದು ಸಲೆಹ್‌ಪೋರ್ ಹೇಳಿದ್ದಾರೆ.

ಇಂತಹ ಸುಮಾರು ಸಾವಿರ ವಿಮಾನಗಳು ದೋಷಪೂರಿತವಾಗಿವೆ. ಆದರೆ, ಮಾಹಿತಿ ಸೋರಿಕೆ ಮಾಡಿದವರ ಆತಂಕಗಳ ಬಗ್ಗೆ ಮತ್ತು ಯಾವುದೇ ಉತ್ಪಾದನಾ ದೋಷಗಳ ಬಗ್ಗೆ ಸರಿಯಾದ ತಪಾಸಣೆ ಮತ್ತು ದೃಢೀಕರಣವಿಲ್ಲದೆ ವಿಮಾನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ವಿಮಾನಗಳ ಗುಣಮಟ್ಟದ ಬಗ್ಗೆ ಸರಿಯಾದ ಗಮನ ಹರಿಸಲಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

### ಏರ್ ಇಂಡಿಯಾದ ಪ್ರಶ್ನಾರ್ಹ ಪಾತ್ರ

1953 ರಲ್ಲಿ ರಾಷ್ಟ್ರೀಕರಣಗೊಂಡ ಏರ್ ಇಂಡಿಯಾವನ್ನು 2021 ರಲ್ಲಿ 1800 ಕೋಟಿ ರೂ. ಮೊತ್ತಕ್ಕೆ ಟಾಟಾ ಸಮೂಹದ ಒಡೆತನಕ್ಕೆ ಹಸ್ತಾಂತರಿಸಲಾಯಿತು. ಆಗ ಏರ್ ಇಂಡಿಯಾ ಒಟ್ಟು 61,562 ಕೋಟಿ ರೂ. ಸಾಲವನ್ನು ಹೊಂದಿತ್ತು. ಟಾಟಾ ಗ್ರೂಪ್ ಏರ್ ಇಂಡಿಯಾದ ಸಾಲದಲ್ಲಿ 15,300 ಕೋಟಿ ರೂ.ಗಳನ್ನು ವಹಿಸಿಕೊಂಡಿತು, ಉಳಿದ 46,262 ಕೋಟಿ ರೂ.ಗಳನ್ನು ಸರ್ಕಾರದ ಏರ್ ಇಂಡಿಯಾ ಅಸೆಟ್ ಹೋಲ್ಡಿಂಗ್ ಲಿಮಿಟೆಡ್(ಎಐಎಎಚ್‌ಎಲ್) ವಹಿಸಿಕೊಂಡಿತು.

1990ರ ದಶಕದ ಆರಂಭದಲ್ಲಿ ಬಂಡವಾಳಶಾಹಿ ಜಾಗತೀಕರಣವನ್ನು ಜಾರಿಗೊಳಿಸಲಾಯಿತು. ಆ ನಂತರ, ಉತ್ತಮ ನಿರ್ವಹಣೆ ಮತ್ತು ಪರಿಣಾಮಕಾರಿ ಸೇವೆಯ ನೆಪದಲ್ಲಿ ಎಲ್ಲಾ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ದೇಶಗಳಲ್ಲಿ ಸೇವಾ ಕೈಗಾರಿಕೆಗಳು ಸೇರಿದಂತೆ ಎಲ್ಲಾ ಕೈಗಾರಿಕೆಗಳ ಖಾಸಗೀಕರಣದ ಭರಾಟೆ ನಡೆಯಿತು. ಸಾರ್ವಜನಿಕ ಹಣದಿಂದ ಸ್ಥಾಪನೆಯಾದ ಸರ್ಕಾರಿ ಸ್ವಾಮ್ಯದ ವಲಯಗಳನ್ನು ಖಾಸಗಿ ಹೂಡಿಕೆದಾರರಿಗೆ ಮಾರುವ ಖಾಸಗೀಕರಣದ ಶಕೆ ಆರಂಭವಾಯಿತು. ರೈಲ್ವೆ, ರಸ್ತೆ ಸಾರಿಗೆ, ವಿಮಾನಯಾನ ಮುಂತಾದ ಅಗತ್ಯ ಸಾರ್ವಜನಿಕ ಸೇವೆಗಳನ್ನು ಸಹ ಪುಡಿಗಾಸಿಗೆ ಮಾರಾಟ ಮಾಡಲಾಯಿತು. ಬಂಡವಾಳಶಾಹಿ ಮಾಲೀಕರು, ಈ ಸೇವೆಗಳನ್ನೂ ಕೂಡ ಸರಕುಗಳಾಗಿ ಮಾರಾಟ ಮಾಡಲು ಪ್ರಾರಂಭಿಸಿದರು. ಸರ್ಕಾರದ ಕೆಳಗೆ ಸಾರ್ವಜನಿಕ ಉದ್ದಿಮೆಗಳು ಹದಗೆಟ್ಟಿದ್ದವು ಎಂಬ ನೆಪ ನೀಡುತ್ತಾ ತಾವು ಉತ್ತಮ ಸೇವೆ ನೀಡುವ ಭರವಸೆ ಕೊಡುತ್ತಾ ಸಾರ್ವಜನಿಕ ಹಣವನ್ನು ಲಪಟಾಯಿಸಿದರು. ವಾಸ್ತವದಲ್ಲಿ ಖಾಸಗಿ ವಲಯದಲ್ಲಿ ಗುಣಮಟ್ಟ ಕುಗ್ಗಿದೆ. ದರಗಳು ಗಗನಕ್ಕೇರಿವೆ. ಪ್ರಯಾಣಿಕರ ಸುರಕ್ಷತೆ, ಸೌಲಭ್ಯಗಳು ಮತ್ತು ಸಮಯಪಾಲನೆ ಕಡೆಗಣಿಸ್ಪಟ್ಟಿವೆ. ದೇಶೀಯ ವಿಮಾನಗಳಲ್ಲಿ, ಆಹಾರ ಪ್ಯಾಕೆಟ್‌ಗಳನ್ನು ಪೂರೈಸುವುದನ್ನು ರದ್ದುಗೊಳಿಸಲಾಗಿದೆ. ಆಹಾರವನ್ನು ಹೆಚ್ಚಿನ ಬೆಲೆಗೆ ಪಾವತಿಸುವ ಮೂಲಕ ಖರೀದಿಸಬೇಕು. ಈ ಹಿಂದೆ, ಯಾವುದೇ ವಿಮಾನ ಒಂದು ಗಂಟೆಗಿಂತ ಹೆಚ್ಚು ವಿಳಂಬವಾದರೆ, ಪ್ರಯಾಣಿಕರಿಗೆ ವಿಮಾನ ನಿಲ್ದಾಣದ ಲಾಂಜ್‌ನಲ್ಲಿ ಊಟ ನೀಡಲಾಗುತ್ತಿತ್ತು. ಅದನ್ನೂ ಸಹ ನಿಲ್ಲಿಸಲಾಗಿದೆ. ಬಿಸಿನೆಸ್ ಕ್ಲಾಸ್ ಮತ್ತು ಎಕಾನಮಿ ಕ್ಲಾಸ್ ನಡುವಿನ ದರದಲ್ಲಿನ ವ್ಯತ್ಯಾಸವು ಪ್ರತಿದಿನ ಹೆಚ್ಚುತ್ತಿದೆ. ರೈಲು ಪ್ರಯಾಣದಲ್ಲಿಯೂ ಸಹ, ಪ್ಯಾಸೆಂಜರ್ ರೈಲುಗಳನ್ನು ಎಕ್ಸ್‌ಪ್ರೆಸ್ ರೈಲುಗಳೆಂದು ಮರುನಾಮಕರಣ ಮಾಡಲಾಗಿದೆ. ರೈಲು ಬೋಗಿಗಳು ಶಿಥಿಲಗೊಂಡಿವೆ, ಶೌಚಾಲಯಗಳು ಬಳಸಲು ಯೋಗ್ಯವಲ್ಲ ದಷ್ಟು ಗಲೀಜಾಗಿರುತ್ತವೆ. ಸಾಮಾನ್ಯ ಬೋಗಿಗಳ ಸಂಖ್ಯೆಯನ್ನು ವ್ಯವಸ್ಥಿತವಾಗಿ ಕಡಿಮೆ ಮಾಡಲಾಗುತ್ತಿದೆ. ಸರಿಯಾದ ನಿರ್ವಹಣೆ ಇಲ್ಲದ ಕಾರಣ ರೈಲು ಅಪಘಾತಗಳು ಆಗಾಗ್ಗೆ ಸಂಭವಿಸುತ್ತಿವೆ. ಪೈಲಟ್‌ಗಳು ಮತ್ತು ಲೋಕೋ ಚಾಲಕರ ಕೊರತೆಯಿಂದಾಗಿ, ಕಾರ್ಯ ನಿರ್ವಹಿಸುತ್ತಿರುವವರು ಹೆಚ್ಚುವರಿ ಗಂಟೆಗಳ ಕಾಲ ಕೆಲಸ ಮಾಡುವ ಒತ್ತಾಯಕ್ಕೆ ಒಳಗಾಗಿದ್ದಾರೆ. ಭ್ರಷ್ಟಾಚಾರವು ಅತಿರೇಕವಾಗಿದೆ. ವಿಮಾನ ಸಿಬ್ಬಂದಿ ನೀಡುವ ಸೇವಾ ಗುಣಮಟ್ಟ ಕುಸಿದಿದೆ. ರಸ್ತೆ ಸಾರಿಗೆ ಕೂಡ ಇದೇ ದಾರಿಯಲ್ಲಿ ಸಾಗುತ್ತಿದೆ. ಇದಕ್ಕೂ ಮೊದಲು, ಒಂದು ದೊಡ್ಡ ರೈಲು ಅಪಘಾತ ಅಥವಾ ವಿಮಾನ ಅಪಘಾತ ಸಂಭವಿಸಿದಲ್ಲಿ, ಜವಾಬ್ದಾರಿಯುತತೆಯ ಪ್ರಜ್ಞೆ ಇದ್ದ ಸಂಬಂಧಪಟ್ಟ ಸಚಿವರು ರಾಜೀನಾಮೆ ನೀಡುತ್ತಿದ್ದರು. ಈಗ ಸಚಿವ ಸ್ಥಾನವೆಂದರೆ ಖಾಸಗಿಯವರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುವ ಲಾಭದಾಯಕ ಹುದ್ದೆಯಾಗಿ ಮಾರ್ಪಟ್ಟಿದೆ. 2018 ಮತ್ತು 2019ರಲ್ಲಿ ಬೋಯಿಂಗ್ ತನ್ನ 737 ಮ್ಯಾಕ್ಸ್ ವಿಮಾನದ ಎರಡು ಮಾರಕ ಅಪಘಾತಗಳ ಬಗ್ಗೆ ಕಾನೂನು ಸಂಘರ್ಷವನ್ನು ಎದುರಿಸುತ್ತಿರುವಾಗ ಇತ್ತೀಚಿನ ಏರ್ ಇಂಡಿಯಾ ವಿಮಾನ ಅಪಘಾತ ಸಂಭವಿಸಿದೆ.

### ಅಹಮದಾಬಾದ್ ಅಪಘಾತದ ಹಿಂದಿನ ಕಾರಣ ನಿಗೂಢ

ಅತ್ಯಂತ ಬಿಗಿಯಾದ ವೇಳಾಪಟ್ಟಿಯಿಂದಾಗಿ, ವಿಮಾನದ ಎಲ್ಲಾ ಉಪಕರಣಗಳ ಅಗತ್ಯ ಪರಿಶೀಲನೆಯನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ವಿಮಾನಯಾನ ಸಿಬ್ಬಂದಿ ವಲಯದಲ್ಲಿ ಆಗಾಗ್ಗೆ ಗೊಣಗಾಟ ಕೇಳಿ ಬಂದಿದೆ. ಎಲ್ಲವೂ ಸರಿಯಾಗಿರಬಹುದು ಎಂಬ

6ನೇ ಪುಟಕ್ಕೆ

# ದೇವನಹಳ್ಳಿ: ರೈತರ ಸುದೀರ್ಘ ಹೋರಾಟಕ್ಕೆ ಸಿಕ್ಕ ಜಯ

## ಭೂಸ್ವಾಧೀನ ಪ್ರಕ್ರಿಯೆ ಹಿಂದಕ್ಕೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ರೈತರು ಮಹತ್ವಪೂರ್ಣ ವಿಜಯವನ್ನು ಸಾಧಿಸಿದ್ದಾರೆ. ಸರ್ಕಾರದ ಭೂಸ್ವಾಧೀನದ ಆಕ್ರಮಣಕಾರಿ ನಾಗಾಲೋಟಕ್ಕೆ ಒಂದು ತಡೆ ಬಿದ್ದಿದೆ. ರೈತರ ಬದುಕನ್ನೇ ಬಲಿಕೊಟ್ಟು ಕಾರ್ಪೊರೇಟ್ ಕಂಪೆನಿಗಳಿಗೆ ಭೂಮಿಕೊಡುವ ಸರ್ಕಾರದ ನಿರಂಕುಶ ಧೋರಣೆಗೆ ಅಂಕುಶವೊಂದು ಬಿದ್ದಿದೆ. ದಮನಕಾರಿ ಸರ್ಕಾರಗಳ ವಿರುದ್ಧ ರೈತ ಸಮುದಾಯ ಒಂದಾಗಿ, ಎಲ್ಲಾ ದುಡಿಯುವ ಜನತೆಯ ಸಹಯೋಗದೊಂದಿಗೆ, ಪ್ರಗತಿಪರ ಆಶಯಗಳುಳ್ಳ ಜನರ ಜೊತೆ ನಡೆಸುವ ದೀರ್ಘಕಾಲದ ಮತ್ತು ರಾಜಿರಹಿತ ಹೋರಾಟ ಗೆಲುವನ್ನು ತರಬಲ್ಲುದು ಎನ್ನುವುದನ್ನು (ಚನ್ನರಾಯಪಟ್ಟಣ ಹೋಬಳಿ) ದೇವನಹಳ್ಳಿ ಹೋರಾಟ ಸಾಬೀತುಪಡಿಸಿದೆ. ಆ ಚಳುವಳಿಗೆ ಪಶ್ಚಿಮ ಬಂಗಾಳದ ನಂದಿಗ್ರಾಮ ಹಾಗೂ ಸಿಂಗೂರಿನಲ್ಲಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಮಾರ್ಗದರ್ಶನದಲ್ಲಿ ನಡೆದ ಯಶಸ್ವಿ ಧೀರೋದಾತ್ತ ಹೋರಾಟ, ದೆಹಲಿಯಲ್ಲಿ, 750 ಕ್ಕೂ ಹೆಚ್ಚು ರೈತರನ್ನು ಕಳೆದುಕೊಂಡು ಒಂದು ವರ್ಷ ಕಾಲ ನಡೆಸಿದ ಸುದೀರ್ಘ ರೈತ ಹೋರಾಟ ಇತ್ಯಾದಿಗಳು ಸ್ಫೂರ್ತಿಯ ಸೆಲೆ. ಸುಮಾರು ಮೂರು ವರ್ಷಗಳ ಕಾಲ ಅವಿರತವಾಗಿ ಸರ್ಕಾರದ ಬಲವಂತದ ಭೂಸ್ವಾಧೀನವನ್ನು ಪ್ರತಿರೋಧಿಸಿಕೊಂಡು ಬಂದ ದೇವನಹಳ್ಳಿ ರೈತರು ಅಂತಿಮ ಗೆಲುವಿನ ನಗೆಯನ್ನು ಬೀರಿದರು.

### ಈ ಹೋರಾಟ ಇಷ್ಟು ದೀರ್ಘಕಾಲ ನಡೆಯಲು ಕಾರಣವೇನು?

ರಾಜ್ಯ ಸರ್ಕಾರವು ಡಿಫೆನ್ಸ್ ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿ ಪಡಿಸಲೆಂದು ಕೆಐಎಡಿಬಿ ಮೂಲಕ ದೇವನಹಳ್ಳಿ ತಾಲೂಕಿನ 13 ಹಳ್ಳಿಗಳ 1777 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಏಪ್ರಿಲ್ 2022 ರಲ್ಲಿ ಆದೇಶ ಹೊರಡಿಸಿತು. ಅದನ್ನು ತೀವ್ರವಾಗಿ ವಿರೋಧಿಸಲು ಕಾರಣವೇನೆಂದರೆ, ಈ ಸ್ವಾಧೀನದ ಅಧಿಸೂಚನೆಗೆ ಒಳಪಟ್ಟಿರುವ ಭೂಮಿಯಲ್ಲಿ ಸಾವಿರಾರು ಟನ್ ರಾಗಿ, ದ್ರಾಕ್ಷಿ, ಹೂ, ತರಕಾರಿಯನ್ನು ಬೆಳೆಯಲಾಗುತ್ತಿದ್ದು, ಪಶು ಸಂಗೋಪನೆಯಿಂದ ಪ್ರತಿದಿನ 6000–8000 ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಉತ್ತಮ ಗುಣಮಟ್ಟದ ರೇಷ್ಮೆಗೂಡು ಮತ್ತು ಬೆಂಗಳೂರು ದ್ರಾಕ್ಷಿ ಉತ್ಪಾದನೆ ಕೂಡ ಇಲ್ಲಿನ ವಿಶೇಷವಾಗಿದ್ದು, ಕೃಷಿ ಮತ್ತು ಪೂರಕ ಉದ್ದಿಮೆಗಳಲ್ಲಿ ಇಲ್ಲಿನ ಜನ ತೊಡಗಿದ್ದಾರೆ.

ಇದು ಸಮೃದ್ಧ ಕೃಷಿ ಭೂಮಿಯಾಗಿರುವುದರಿಂದ, ಅದನ್ನು ನಂಬಿ ಸಾವಿರಾರು ಮಂದಿಯ ಜೀವನೋಪಾಯ ನಡೆಯುತ್ತಿದೆ. ಈ ವ್ಯಾಪ್ತಿಯಲ್ಲಿ ಬರುವ ಬಹುತೇಕರು ಸಣ್ಣ ಹಿಡುವಳಿದಾರರು. ಈ ಭೂ ಸ್ವಾಧೀನ 600 ಕುಟುಂಬಗಳ ಮೇಲೆ ಪರಿಣಾಮ ಬೀರಲಿದ್ದು, 387 ಕುಟುಂಬಗಳು ಸಂಪೂರ್ಣ ಭೂರಹಿತವಾಗಲಿವೆ. ಈ ಭೂಮಿಯನ್ನು ಅವಲಂಬಿಸಿ ಬದುಕುತ್ತಿರುವವರ ಬದುಕು ಬೀದಿಗೆ ಬೀಳುತ್ತದೆ. ಇದರಲ್ಲಿ ಬಡರೈತರು, ದಲಿತರು, ಕೃಷಿ ಕೂಲಿ ಕಾರ್ಮಿಕರೂ ಸೇರಿದಂತೆ ಅನಕ್ಷರಸ್ಥರು, ಕಡಿಮೆ ವಿದ್ಯಾರ್ಹತೆ ಹೊಂದಿದವರು ಹೆಚ್ಚಾಗಿದ್ದಾರೆ.

ನಿಜಕ್ಕೂ ಇಡೀ ಜನ ಸಮುದಾಯದ ಹಿತಕ್ಕಾಗಿ ಭೂಸ್ವಾಧೀನವಾಗಿದ್ದರೆ ಜನರು ವಿರೋಧಿಸುತ್ತಿರಲಿಲ್ಲ. ಆದರೆ ಇಂದಿನ ಸರ್ಕಾರಗಳ ಅಭಿವೃದ್ಧಿಯೆಂದರೆ ಅದು ಬಂಡವಾಳಿಗರ ಅಭಿವೃದ್ಧಿ. ಬಂಡವಾಳಿಗರು ಮತ್ತು ದುಡಿಯುವ ಜನತೆ ಏಕಕಾಲದಲ್ಲಿ ಅಭಿವೃದ್ಧಿಯಾಗುವುದಿಲ್ಲ. ಇದು ಬಂಡವಾಳಶಾಹಿ ಆರ್ಥಿಕತೆಯ ನಿಯಮ. ಬಂಡವಾಳಿಗರಿಗೆ ಲಾಭವೆಂದರೆ ಕಾರ್ಮಿಕರ ಶ್ರಮದ ಶೋಷಣೆ ಮತ್ತು ಸ್ವಾಭಾವಿಕ ಸಂಪನ್ಮೂಲಗಳ ಶೋಷಣೆ. ಹಿಂದೆ ಸರ್ಕಾರಗಳು ಶಾಲೆ, ಆಸ್ಪತ್ರೆ, ಮುಂತಾದ ಜನೋಪಯೋಗಿ ಕಾರ್ಯಗಳಿಗೆ ಭೂಮಿಯನ್ನು ಕೇಳಿದಾಗ ಎಲ್ಲಾ ವಿಭಾಗದ ಜನರು ತಾ ಮುಂದು ನಾ ಮುಂದು ಎಂದು ಭೂಮಿಯನ್ನು ಕೊಟ್ಟಿದ್ದಾರೆ. ಹಿಂದಿನ ಕಾಲದ ಹೆಚ್ಚಿನ ಸರ್ಕಾರಿ ಶಾಲಾ ಕಾಲೇಜುಗಳು, ಆಸ್ಪತ್ರೆಗಳಿಗೆ ಭೂಮಿ ಅಂತಹ ಭೂದಾನಗಳಿಂದಲೇ ಬಂದಿದೆ. ಆದರೆ ಈಗ ಸರ್ಕಾರ ಭೂಸ್ವಾಧೀನ ಮಾಡಿಕೊಳ್ಳುತ್ತಿರುವುದು ಬಂಡವಾಳಿಗರಿಗೆ ಯಥೇಚ್ಛ ಲಾಭ ಮಾಡಿಕೊಡುವುದಕ್ಕೆ. ಭೂಮಿಯನ್ನು ನಂಬಿ ಬದುಕುತ್ತಿರುವವರ ಕೈಯಿಂದ ಸರ್ಕಾರ ಪುಡಿಗಾಸಿಗೆ ಭೂಮಿ ಕಸಿದುಕೊಂಡು ಬಂಡವಾಳಶಾಹಿ ತಿಮಿಂಗಿಲಗಳ ಬಾಯಿಗೆ ಹಾಕುತ್ತಿದೆ. ಕೈಗಾರಿಕೆ ಸ್ಥಾಪನೆಯಾದರೆ ಜನರಿಗೆ ಉದ್ಯೋಗ ದೊರೆಯುತ್ತದೆಯೆಂದು ಕಥೆಯನ್ನು ಹೇಳಲಾಗುತ್ತದೆ. ಆದರೆ ವಾಸ್ತವವೇನು?

ರೈತರ ಫಲವತ್ತಾದ ಭೂಮಿ ಕಿತ್ತುಕೊಂಡು ಕೈಗಾರಿಕೆಗಳನ್ನು ಸ್ಥಾಪಿಸಿ, ಆ ಭಾಗದ ಜನರಿಗೆ ಉದ್ಯೋಗ ನೀಡುತ್ತೇವೆ ಎನ್ನುವ ಸರ್ಕಾರ ಮತ್ತು ಕಂಪನಿಗಳ ಭರವಸೆಗಳು ಇಂದು ಉಪಯೋಗಕ್ಕೆ ಇಲ್ಲದಂತಾಗಿವೆ. ಕೈಗಾರಿಕಾ ಎಸ್ಟೇಟ್ ಅಭಿವೃದ್ಧಿಗೆಂದು ಸ್ವಾಧೀನಪಡಿಸಿಕೊಂಡ ಎಷ್ಟೋ ಕಡೆ ಕೈಗಾರಿಕೆಗಳು ಸ್ಥಾಪನೆಯಾಗದೆ ಬಿಕೋ ಎನ್ನುತ್ತಿವೆ. ಬೆಳೆಯನ್ನು ಬೆಳೆಯಲೂ ಸಹ ಆ ಭೂಮಿ ಸಿಗದೆ ಇರುವಂತಹ ಸ್ಥಿತಿ ಒಂದು ಕಡೆ. ಇನ್ನೊಂದು ಕಡೆ, ಸರ್ಕಾರದ ಕಾನೂನಿನ ಪ್ರಕಾರವೇ ಕಾರ್ಖಾನೆ ಸ್ಥಾಪಿಸಿದ ಮೇಲೆ ಭೂಸಂತ್ರಸ್ರರಿಗೆ ಉದ್ಯೋಗ ನೀಡಬೇಕು. ಅದರೆ ಉದ್ಯೋಗ ನೀಡದೆ ಜನರನ್ನು ವಂಚಿಸಿದ ಮತ್ತು ವಂಚಿಸುತ್ತಿರುವ ಎಷ್ಟೋ ಉದಾಹರಣೆಗಳು ಕಣ್ಮುಂದೆ ನಡೆಯುತ್ತಿವೆ. ಇತ್ತೀಚಿಗೆ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಯು (ಎಐಕೆಕೆಎಂಎಸ್) ಮೈಸೂರಿನ ನಂಜನಗೂಡು ತಾಲೂಕಿನಲ್ಲಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಕಾರ್ಖಾನೆಗೆಂದು ಸ್ವಾಧೀನ ಮಾಡಿಕೊಂಡ ಮೇಲೆ ಭೂಸಂತ್ರಸ್ತರಿಗೆ ಉದ್ಯೋಗ ನೀಡದೆ ಸತಾಯಿಸುತ್ತಿದ್ದ ಕಾರ್ಖಾನೆಗಳ ವಿರುದ್ಧ ಒಂದು ವರ್ಷಕ್ಕೂ ಹೆಚ್ಚು ಕಾಲ ಹೋರಾಟ ನಡೆಸಿ ನೂರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕೊಡುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

### ಸಮರಶೀಲ ಹೋರಾಟ

ಅಂತೆಯೇ ಭೂ ಸ್ವಾಧೀನವನ್ನು ವಿರೋಧಿಸಿ ಅಲ್ಲಿನ ರೈತರು 2022ರ ಏಪ್ರಿಲ್ 4 ರಿಂದ ಚನ್ನರಾಯಪಟ್ಟಣ ಹೋಬಳಿ (ದೇವನಹಳ್ಳಿ ತಾಲೂಕ್) ನಾಡಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಿದರು. ಸತತ ಮೂರು ವರ್ಷಗಳ ಕಾಲ ರೈತರು ಪಟ್ಟು ಬಿಡದೆ ಹೋರಾಟ ಮುಂದುವರೆಸಿದರು. ನ್ಯಾಯಬದ್ಧ ಹೋರಾಟದಲ್ಲಿ ನಿರತರಾದ ರೈತರನ್ನು ಕರೆದು ಸಮಸ್ಯೆ ಬಗೆಹರಿಸುವುದು ಪ್ರಜಾತಂತ್ರದಲ್ಲಿ ಸರ್ಕಾರದ ಕರ್ತವ್ಯ. ಆದರೆ ಜನ ವಿರೋಧಿ, ಪ್ರಜಾತಂತ್ರ ವಿರೋಧಿ ಸರ್ಕಾರ ಪ್ರತಿಭಟನಾ ನಿರತ ರೈತರ ಮೇಲೆ ದೇವನಹಳ್ಳಿ ಟೌನ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಿತು, ರೈತ ಮಹಿಳೆಯರು ತಮ್ಮ ಭೂಮಿ ತಮ್ಮ ಹಕ್ಕು ಎಂದಿದ್ದಕ್ಕೆ ನ್ಯಾಯಾಲಯದ ಸುತ್ತ ಅಲೆಯುವಂತಾಗಿದೆ. ಇಷ್ಟೇ ಅಲ್ಲ, 75ನೇ ಸ್ವಾತಂತ್ರ್ಯೋತ್ಸವ ಸಮಾರಂಭದ ದಿನ ಪ್ರತಿಭಟನೆ ಮಾಡುತ್ತಿದ್ದ ರೈತರ ಮೇಲೆ ಲಾಠಿಚಾರ್ಜ್ ಮಾಡಲಾಗಿತ್ತು. 1947ಕ್ಕೆ ಮುಂಚೆ ಬ್ರಿಟಿಷ್ ಸರ್ಕಾರ ಪ್ರತಿಭಟನೆಯ ಹಕ್ಕನ್ನು ದಮನ ಮಾಡಿತ್ತು. ಇಂದು ಸ್ವತಂತ್ರ ಭಾರತದ ಸರ್ಕಾರ ಪ್ರತಿಭಟನೆಯ ಹಕ್ಕನ್ನು ದಮನ ಮಾಡುತ್ತಿದೆ. ಇಂತಹ ಎಷ್ಟೋ ಅನೇಕ ಘಟನೆಗಳು ನಡೆದಿವೆ, ನಡೆಯುತ್ತಲೇ ಇವೆ. ಸರ್ಕಾರ ಸಾಧ್ಯವಿರುವ ಎಲ್ಲಾ ರೀತಿಯಿಂದಲೂ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ ಎಂಬುದು ಇಂತಹ ಘಟನೆಗಳಿಂದ ಸ್ಪಷ್ಟವಾಗಿ ಗೋಚರವಾಗುತ್ತಿದೆ. ಆದರೆ ಅಲ್ಲಿನ ರೈತರು ಎಷ್ಟೇ ದಮನ, ದಬ್ಬಾಳಿಕೆ ಮಾಡಿದರೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎನ್ನುವ ಗಟ್ಟಿ ನಿರ್ಧಾರದಿಂದ ಹೋರಾಟ ನಡೆಸಿದರು.

ಈ ಹೋರಾಟ ಶಾಂತಿಯುತವಾಗಿ ನಡೆಯುತ್ತಲೇ ಇತ್ತು. ಇತ್ತೀಚೆಗೆ ಸರ್ಕಾರ ಭೂ ಸ್ವಾಧೀನದ ಬಗ್ಗೆ ಅಂತಿಮ ಅಧಿಸೂಚನೆ ಹೊರಡಿಸಿದಾಗ, ಅಲ್ಲಿನ ರೈತರು ತಮ್ಮ ಹೋರಾಟವನ್ನು ತೀವ್ರಗೊಳಿಸಬಹುದು ಎಂಬುದನ್ನು ಗ್ರಹಿಸಿ, ದೇವನಹಳ್ಳಿಯಲ್ಲಿ ಹೋರಾಟ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ ಎಂಬ ಕುಂಟು ನೆಪವೊಡ್ಡಿ, ಜೂನ್ 25 ರಂದು ರೈತರ ಹೋರಾಟವನ್ನು ಹತ್ತಿಕ್ಕಲು ಹೋರಾಟ ನಿರತ ರೈತರು, ರೈತ ಮುಖಂಡರನ್ನು ಬಂಧಿಸಿದರು. ಇದು ಹೋರಾಟದ ಕಿಡಿಜ್ವಾಲೆಯಾಗಿ ಬೆಳೆಯಲು ಕಾರಣವಾಯಿತು. ಅಂದು ಎಐಕೆಕೆಎಂಎಸ್ ಸೇರಿದಂತೆ ಎಲ್ಲಾ ರೈತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಪ್ರಗತಿಪರರು ಭಾಗವಹಿಸಿದ್ದರು.

ಮರುದಿನದಿಂದ ಹೋರಾಟ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನಕ್ಕೆ ಸ್ಥಳಾಂತರವಾಯಿತು. ಈ ಭೂಸ್ವಾಧೀನದ ಆರಂಭದಿಂದಲೂ ಯಾವುದೇ ರೀತಿಯ ಕಾನೂನನ್ನು ಪಾಲಿಸದ ಸರ್ಕಾರ ತಮ್ಮ ಹಕ್ಕಿಗಾಗಿ ಹೋರಾಡುತ್ತಿರುವ ರೈತರು ಕಾನೂನು ಬಾಹಿರವಾಗಿ ನಡೆದುಕೊಳ್ಳುತ್ತಿದ್ದಾರೆ ಎನ್ನುತ್ತಿರುವುದು ಸೋಜಿಗವೆನಿಸಿತ್ತು. ಆದರೂ ರೈತರು ಅಲ್ಲಿಯೂ ಸಹ ಶಾಂತಿಯುತ ಹೋರಾಟವನ್ನು ಮುಂದುವರೆಸಿದರು. ನಂತರ ಹೋರಾಟವು ರಾಷ್ಟ್ರೀಯ ಸ್ವರೂಪ ಪಡೆದು, ರಾಷ್ಟ್ರ ಮಟ್ಟದ ರೈತ ಸಂಘಟನೆಗಳ ಒಕ್ಕೂಟ ವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾದ ಬೆಂಬಲವನ್ನು ಸಹ ಪಡೆಯಿತು. ಜುಲೈ 4 ರಂದು ಎಸ್‌ಕೆಎಂ ನೇತೃತ್ವದಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು. ಸಂಯುಕ್ತ ಕಿಸಾನ್ ಮೋರ್ಚಾದ ಅಖಿಲ ಭಾರತ ನಾಯಕರು ಭಾಗಿಯಾಗಿ ಈ ಹೋರಾಟವನ್ನು ಸಂಪೂರ್ಣವಾಗಿ ಬೆಂಬಲಿಸಿದರು, ಈ ಸಂದರ್ಭದಲ್ಲಿ ಎಐಕೆಕೆಎಂಎಸ್ ರೈತ ಸಂಘಟನೆಯ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಭಗವಾನ್‌ರೆಡ್ಡಿ ಮತ್ತು ರಾಜ್ಯ ಉಪಾಧ್ಯಕ್ಷರಲ್ಲೊಬ್ಬರಾದ ಕಾಮ್ರೇಡ್ ಎಚ್.ಪಿ.ಶಿವಪ್ರಕಾಶ್ ಅವರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಯ ನಾಯಕರು, ಪದಾಧಿಕಾರಿಗಳು ಭಾಗಿಯಾಗಿದ್ದರು. ಜುಲೈ 4 ರ ಹೋರಾಟ ಬೃಹತ್ತಾಗಿ ಬೆಳೆದಿದ್ದರಿಂದ ರಾಜ್ಯದ ಮುಖ್ಯಮಂತ್ರಿಗಳು ಅದೇ ದಿನ ರೈತರ ಸಭೆ ಕರೆದರು. ಭೂಸ್ವಾಧೀನದ ವಿಷಯದಲ್ಲಿ ರೈತರ ಪರವಾಗಿ ನಿರ್ಧಾರ ತೆಗೆದುಕೊಳ್ಳುವುದಾಗಿ 10 ದಿನಗಳ ಗಡುವು ಕೇಳಿದರು. ಈ ಮಧ್ಯೆ ಭೂಸ್ವಾಧೀನದಿಂದ ಜಮೀನು ಕಳೆದುಕೊಳ್ಳುವ ಕೆಲವು ಪುಡಾರಿಗಳು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಭೂಸ್ವಾಧೀನಕ್ಕೆ ತಮ್ಮ ಒಪ್ಪಿಗೆಯನ್ನು ಬಹಿರಂಗಪಡಿಸಿದರು. ಹೀಗೆ ಚಳುವಳಿಯ ಹಾದಿಯನ್ನು ತಪ್ಪಿಸಲು ಪ್ರಯತ್ನ ನಡೆಸಿದರು. ಆದರೆ ರೈತರು ದಾರಿತಪ್ಪಲಿಲ್ಲ, ಅಷ್ಟೇ ಅಲ್ಲ ಅವರು ರೈತರಿಗಿಂತ ಹೆಚ್ಚಾಗಿ ರಿಯಲ್ ಎಸ್ಟೇಟ್ ದಂಧೆಯಲ್ಲಿರುವವರು ಎನ್ನುವುದನ್ನು ಜಗಜ್ಜಾಹೀರುಗೊಳಿಸಿದರು. ತಮ್ಮ ಹಳ್ಳಿಗಳಲ್ಲಿಯೇ ಹೋರಾಟ ಮುಂದುವರೆಸಿದರು.

ಅಂತಿಮವಾಗಿ ಸರ್ಕಾರ ರೈತರ ಜೊತೆ ನಡೆದ ಜುಲೈ 15ರ ಸಭೆಯಲ್ಲಿ ಭೂಸ್ವಾಧೀನವನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳುವುದೆಂದು ಘೋಷಿಸಿತು. ಒಟ್ಟಾರೆ ಈ ಭಾಗದ ಭೂಮಿಯನ್ನು ಕಿತ್ತು, ಬೃಹತ್ ಕಂಪನಿಗಳ ಕೈಗಿಟ್ಟು, ಈ ದೇಶದ ಬಂಡವಾಳಶಾಹಿಗಳ ಸೇವೆಗೈಯಲು ಸದಾ ಸಿದ್ಧ ಎನ್ನುವ ಸಂದೇಶವನ್ನು ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಪಕ್ಷ ಮತ್ತು ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷಗಳು ನೀಡುತ್ತಿವೆ. ಇದರಿಂದ ಈ ದೇಶದ ಆಳ್ವಿಕೆ ಶ್ರೀಮಂತ ಬಂಡವಾಳಶಾಹಿಗಳ ಪರವಾಗಿ ನಡೆಯುತ್ತಿದೆಯೇ ಹೊರತು, ದುಡಿಯುವ ಮತ್ತು ತಮ್ಮ ಬೆವರು, ರಕ್ತ ಸುರಿಸಿ ದೇಶ ಕಟ್ಟುವ ರೈತ – ಕಾರ್ಮಿಕರ ಪರವಾಗಿ ಅಲ್ಲ ಎಂಬುದನ್ನು ತೋರಿಸಿವೆ. ಆದ್ದರಿಂದಲೇ ಸರ್ಕಾರ ಭೂ ಸ್ವಾಧೀನವನ್ನು ಕೈಬಿಡುತ್ತಿರುವಾಗಲೇ ತನ್ನ ಅನುಯಾಯಿಗಳನ್ನು ಮುಂದಿಟ್ಟುಕೊಂಡು ತಾವಾಗಿಯೇ ಭೂಮಿಯನ್ನು ಕೊಡುವವರಿಗೆ ಹೆಚ್ಚಿನ ಪರಿಹಾರ ಹಾಗೂ ಅಭಿವೃದ್ಧಿಪಡಿಸಿದ ಭೂಮಿಯನ್ನು ಕೊಡುತ್ತೇವೆಂದು ಘೋಷಿಸಿದೆ. ಹೀಗೆ ಹಿಂಬಾಗಿಲಿನಿಂದ, ರೈತರಿಗೆ ಆಮಿಷಗಳನ್ನು ಒಡ್ಡಿ ಭೂಸ್ವಾಧೀನಕ್ಕೆ ಮುಂದಾಗುತ್ತಿದೆ. ಸರ್ಕಾರದ ಈ ಹುನ್ನಾರವನ್ನು ಸೋಲಿಸಬೇಕು.

### ಬೇಕು ಸಮಾಜವಾದಿ ಕೃಷಿ ಪದ್ಧತಿ

ಅದಕ್ಕಾಗಿ ರೈತರು ಯಾವುದೇ ಕಾರಣಕ್ಕೂ ಮರುಳಾಗಬಾರದು. ತಮ್ಮದೇ ಆದ ರಾಜಿರಹಿತ ಸಂಘಟನೆಯನ್ನು ಕಟ್ಟಿಕೊಳ್ಳಬೇಕು. ಅವರು ಸರ್ಕಾರದ ಎಲ್ಲಾ ರೈತ ವಿರೋಧಿ ಹೋರಾಟಗಳಲ್ಲಿ ಭಾಗವಹಿಸಬೇಕು. ಜೊತೆಗೆ ಕೃಷಿಯನ್ನು ಉಳಿಸಿಕೊಳ್ಳಲು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿರುವ ರೈತ ವಿರೋಧಿ ನೀತಿಗಳ ವಿರುದ್ಧ ಸಮರಶೀಲ ಹೋರಾಟವನ್ನು ಕಟ್ಟಬೇಕು. ತಮ್ಮ ಹೋರಾಟಗಳನ್ನು ಅಂತಿಮವಾಗಿ ಇಂತಹ ನೀತಿಗಳಿಗೆ ಕಾರಣವಾದ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ತಿರುಗಿಸಬೇಕು. ಅವರು ಕಾರ್ಮಿಕರ ಜೊತೆ ಸೇರಿಕೊಂಡು ಭೂಹೀನ, ಬಡ ಮತ್ತು ಮಧ್ಯಮ ರೈತರಿಗೆ ನಿಜವಾದ ಆದಾಯವನ್ನು ತಂದುಕೊಡಬಲ್ಲ, ಸುಸ್ಥಿರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿಸುವ ಸಮಾಜವಾದಿ ಕೃಷಿ ಪದ್ಧತಿಗಾಗಿ ಹೋರಾಡಬೇಕು!

## ಆಗಸ್ಟ್ 12ರಿಂದ ರಾಜ್ಯದಾದ್ಯಂತ ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ

ನ್ಯಾಯಬದ್ಧವಾಗಿ ತಮಗೆ ದೊರಕಬೇಕಾಗಿರುವ ಗೌರವಧನ ಮತ್ತಿತರ ಸೌಲಭ್ಯಗಳಿಗಾಗಿ ಆಗ್ರಹಿಸಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಶಾ ಕಾರ್ಯಕರ್ತೆಯರು ಹಗಲು–ರಾತ್ರಿ ಧರಣಿ ಆರಂಭಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಒಟ್ಟಾರೆ ಪ್ರೋತ್ಸಾಹಧನ ಸೇರಿ ರೂ. 10,000 ನಿಗದಿ ಮಾಡಲಾಗುವುದೆಂದು 7 ತಿಂಗಳ ಹಿಂದೆ ಮುಖ್ಯಮಂತ್ರಿಗಳು ಕೊಟ್ಟ ಮಾತನ್ನು ಉಳಿಸಿಕೊಳ್ಳಿ ಎಂದು ಒತ್ತಾಯಿಸುತ್ತಿದ್ದಾರೆ. 5ನೇ ಪುಟಕ್ಕೆ



ಬೆಂಗಳೂರಿನಲ್ಲಿ ಧಾರಾಕಾರ ಮಳೆಯಲ್ಲಿ ಕೊಡೆ ಹಿಡಿದು ಆಶಾ ಕಾರ್ಯಕರ್ತೆಯರ ಪ್ರತಿಭಟನೆ

# ಫ್ಯಾಸೀವಾದ: ಅಂದು–ಇಂದು

1ನೇ ಪುಟದಿಂದ ಚಾರಿತ್ರಿಕ ಸಂದರ್ಭಗಳು ಫ್ಯಾಸೀವಾದಕ್ಕೆ ಕೆಲವೊಂದು ಸಾರ್ವತ್ರಿಕ ಗುಣಲಕ್ಷಣಗಳನ್ನು ಕೊಡಮಾಡುತ್ತವೆ; ಅವುಗಳೇ ಫ್ಯಾಸೀವಾದದ ವಿಶಿಷ್ಟ ಗುಣಲಕ್ಷಣಗಳು. ಅವು ಪ್ರಮುಖವಾಗಿ, ಆರ್ಥಿಕ ಕೇಂದ್ರೀಕರಣ, ಪ್ರಭುತ್ವದ ಕೈಯಲ್ಲಿ ರಾಜಕೀಯ ಅಧಿಕಾರದ ಗರಿಷ್ಠ ಕ್ರೋಢೀಕರಣ, ಆಡಳಿತದಲ್ಲಿ ಕಠೋರ ದೃಢತೆ, ಇವೇ ಆಗಿವೆ. ಅವುಗಳ ಮೂಲಕ ಪ್ರಭುತ್ವದ ಹಿತಾಸಕ್ತಿಯೊಂದಿಗೆ ಏಕಸ್ವಾಮ್ಯ ಬಂಡವಾಳಿಗರ ಹಿತಾಸಕ್ತಿಯನ್ನು ಹೆಚ್ಚೆಚ್ಚು ಬೆಸೆಯಲು ಮತ್ತು ಅದರೊಂದಿಗೆ ಸಾಂಸ್ಕೃತಿಕ ಅಂಧಶಿಸ್ತು(cultural regimentation) ಅನ್ನು ಬೆಳೆಸಲು ಸಾಧ್ಯವಾಗುತ್ತದೆ. ಕೇಂದ್ರೀಕರಣ, ಕ್ರೋಢೀಕರಣ, ಆಡಳಿತದಲ್ಲಿನ ಕಠೋರತೆ, ಅಂಧಶಿಸ್ತು ಹೇರಿಕೆ ಮತ್ತು ಎರಡೂ ಹಿತಾಸಕ್ತಿಗಳ ವಿಲೀನ – ಇವೆಲ್ಲವುಗಳ ಮಟ್ಟವು ಎಲ್ಲಾ ದೇಶಗಳಲ್ಲೂ ಒಂದೇ ರೀತಿಯಲ್ಲಿರುವುದಿಲ್ಲ. ಅವುಗಳು ನಿರ್ದಿಷ್ಟ ದೇಶದ ಆಂತರಿಕ ಪರಿಸ್ಥಿತಿಗಳು ಹೇಗಿದೆಯೋ ಅವುಗಳ ಮೇಲೆ ನಿಂತಿರುವುದರಿಂದ, ಸಹಜವಾಗಿಯೇ ದೇಶದಿಂದ ದೇಶಕ್ಕೆ ವ್ಯತ್ಯಾಸಗಳು ಇರುತ್ತವೆ.

ಸ್ವರೂಪದ ವಿಷಯದಲ್ಲೂ ಸಹ, ಫ್ಯಾಸೀವಾದದಲ್ಲಿ ಸಿದ್ಧ ಮಾದರಿಗಳಿಲ್ಲ. ಬೇರೆ ಬೇರೆ ದೇಶಗಳಲ್ಲಿ ಅದು ಅಲ್ಲಿಯ ಸ್ಥಳೀಯ ಪರಿಸ್ಥಿತಿಗಳಿಗೆ ಸರಿ ಹೊಂದುವಂತೆ ಬೇರೆ ಬೇರೆ ಸ್ವರೂಪಗಳನ್ನು ಪಡೆದುಕೊಂಡಿದೆ. ಕೆಲವೆಡೆ ಅದು ವ್ಯಕ್ತಿಯ ಸರ್ವಾಧಿಕಾರದ ಸ್ವರೂಪವನ್ನು ಅಳವಡಿಸಿಕೊಂಡಿದೆ; ಇನ್ನೂ ಕೆಲವೆಡೆ ಮಿಲಿಟರಿ ಕೂಟದ ನಿರಂಕುಶ ಆಳ್ವಿಕೆಯ ಸ್ವರೂಪವನ್ನು ಪಡೆದಿದೆ; ಇನ್ನೂ ಕೆಲವು ದೇಶಗಳಲ್ಲಿ ಸಂಸತ್ತನ್ನು ಜೀವಂತವಾಗಿರಿಸಿಕೊಂಡರೂ, ಆರ್ಥಿಕ ಹಾಗೂ ರಾಜಕೀಯ ಕೇಂದ್ರೀಕರಣದ ಮೂಲಕ ಅದರ ಅಧಿಕಾರವನ್ನು ಮೊಟಕುಗೊಳಿಸಿ ಪ್ರಜಾಪ್ರಭುತ್ವದ ಮುಖವಾಡವನ್ನು ಧರಿಸಿದೆ. ದ್ವಿಪಕ್ಷೀಯ ಸಂಸದೀಯ ವ್ಯವಸ್ಥೆಯ ಸರ್ಕಾರದ ಮೂಲಕ 'ಪ್ರಜಾತಂತ್ರ'ದ ಸ್ವರೂಪದಲ್ಲಿ ಫ್ಯಾಸೀವಾದ ಕಾಣಿಸಿಕೊಂಡಿರುವುದು ಖಂಡಿತವಾಗಿಯೂ ಯುದ್ಧ ನಂತರದ ವಿದ್ಯಮಾನ; ಅದಕ್ಕೆ ಚರಿತ್ರೆಯಲ್ಲಿ ಯಾವ ಪೂರ್ವ ನಿದರ್ಶನವೇನೂ ಇಲ್ಲ. ಏಕೆಂದರೆ, ಮೇಲ್ನೋಟದಲ್ಲಿ ಅದು ಪ್ರಜಾತಂತ್ರದಂತೆ ಕಾಣಿಸುವುದರಿಂದ, ಅದೇ ಸಮಯದಲ್ಲಿ ಅದು ಅತ್ಯಧಿಕವಾಗಿ ವಂಚನೆಯನ್ನು ಮಾಡುವಂಥಾದ್ದು. ಹಾಗಾಗಿ, ವಾಸ್ತವದಲ್ಲಿ, ಫ್ಯಾಸೀವಾದವನ್ನು ಅದರ ಸತ್ವದಿಂದಲ್ಲದೆ ಅಥವಾ ಅದರ ವಿಶಿಷ್ಟ ಗುಣಲಕ್ಷಣದಿಂದಲ್ಲದೆ, ಅದರ ಸ್ವರೂಪದಿಂದ ಮಾತ್ರ ಗುರುತಿಸಲು ಪ್ರಯತ್ನಿಸುವ ಬುದ್ಧಿಜೀವಿಗಳು ಎನಿಸಿಕೊಂಡ ಹಲವರನ್ನು ವಂಚಿಸಲು ಅದಕ್ಕೆ ಸಾಧ್ಯವಾಗಿದೆ.

### ಫ್ಯಾಸೀವಾದದ ಹಳೆಯ ಪರಿಕಲ್ಪನೆ

ಫ್ಯಾಸೀವಾದದ ವಿಶಿಷ್ಟ ಗುಣಲಕ್ಷಣಗಳು, ಅಂದರೆ, ಆರ್ಥಿಕ ಕೇಂದ್ರೀಕರಣ, ಪ್ರಭುತ್ವದ ಹಿಡಿತದಲ್ಲಿ ರಾಜಕೀಯ ಅಧಿಕಾರದ ಅತ್ಯಧಿಕ ಕ್ರೋಢೀಕರಣ, ಆಡಳಿತದ ಕಠೋರತೆ, ಸಾಂಸ್ಕೃತಿಕ ಅಂಧಶಿಸ್ತು ಮತ್ತು ಏಕಸ್ವಾಮ್ಯ ಬಂಡವಾಳಿಗರ ಹಿತಾಸಕ್ತಿಯೊಂದಿಗೆ ಪ್ರಭುತ್ವದ ಹಿತಾಸಕ್ತಿಯ ವಿಲೀನ – ಇವುಗಳು ಏಷಿಯಾ ಮತ್ತು ಆಫ್ರಿಕಾದ ಹಿಂದುಳಿದ ರಾಷ್ಟ್ರಗಳೂ ಸೇರಿದಂತೆ, ಪ್ರಪಂಚದ ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ವಿವಿಧ ಮಟ್ಟಗಳಲ್ಲಿ ಗೋಚರವಾಗುತ್ತಿರುವುದರಲ್ಲಿ ಅನುಮಾನವೇ ಇಲ್ಲ. ಹಾಗಾಗಿ, ಈ ಕಾಲಘಟ್ಟದ ಚಾರಿತ್ರಿಕ ಅನುಭವದಿಂದ ಫ್ಯಾಸೀವಾದದ ಬಗ್ಗೆಯಿರುವ ರೂಢಿಗತ ಪರಿಕಲ್ಪನೆಯನ್ನು ಪರಿಷ್ಕರಿಸಬೇಕಾಗುತ್ತದೆ. ಯುದ್ಧಪೂರ್ವ ದಿನಗಳಲ್ಲಿ, ಇಟಲಿ ಮತ್ತು ಜರ್ಮನಿ ದೇಶಗಳೆರಡೂ ವಸ್ತುಶಃ ವಸಾಹತುಗಳಿಲ್ಲದ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಾಗಿದ್ದವು; ಅಲ್ಲಿ ಫ್ಯಾಸೀವಾದ ಸ್ಥಾಪನೆಯಾದ ಮೇಲೆ, ಪ್ರಬಲ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮಾತ್ರ ಫ್ಯಾಸೀವಾದವು ಬೆಳೆದು ವೃದ್ಧಿಹೊಂದಲು ಸಾಧ್ಯ ಎನ್ನುವ ವಿಚಾರವು ನೆಲೆಗೊಂಡಿತು. ತೀವ್ರ ಮಾರುಕಟ್ಟೆ ಅಭಾವಕ್ಕೆ ಒಳಗಾಗಿದ್ದು, ಬಲಿಷ್ಠ ಮಿಲಿಟರಿ ಬಲ ಹೊಂದಿದ್ದು, ಬಹಳವೇ ಅಭಿವೃದ್ಧಿಗೊಂಡಿರುವ ಬಂಡವಾಳಶಾಹಿ ಆರ್ಥಿಕತೆ ಫ್ಯಾಸೀವಾದವನ್ನು ಸ್ಥಾಪಿಸಲು ಪ್ರಮುಖ ಅವಶ್ಯಕತೆಯೆಂದು ಪರಿಗಣಿಸಲಾಗಿತ್ತು. ಏಷಿಯಾ ಮತ್ತು ಆಫ್ರಿಕಾಗಳಲ್ಲಿ ಆರ್ಥಿಕವಾಗಿ ಹಾಗೂ ಮಿಲಿಟರಿಯಲ್ಲಿ ದುರ್ಬಲವಾದ ಕೆಲವು ದೇಶಗಳಲ್ಲಿ ಹೆಚ್ಚುತ್ತಿರುವ ಫ್ಯಾಸೀವಾದೀಕರಣದ ಪ್ರವೃತ್ತಿ ಮತ್ತು ಅಂತಹ ಬೇರೆ ಕೆಲವು ದೇಶಗಳಲ್ಲಿ ಮಿಲಿಟರಿ ಹಾಗೂ ಫ್ಯಾಸೀವಾದಿ ಸರ್ವಾಧಿಕಾರದ ಸ್ಥಾಪನೆ, ಇವು, ಈ ಹಳೆಯ ವ್ಯಾಖ್ಯಾನವು ಇಂದಿಗೆ ಸರಿಹೊಂದುವುದಿಲ್ಲ ಎಂಬುದನ್ನು ಸಾಬೀತುಪಡಿಸಿವೆ.

### ಫ್ಯಾಸೀವಾದ, ಜನತೆ ಮತ್ತು ಜನ ಚಳುವಳಿ

ಫ್ಯಾಸೀವಾದವು ಬಂಡವಾಳಶಾಹಿ ವರ್ಗದ ನಗ್ನ ಸರ್ವಾಧಿಕಾರ; ಈ ವ್ಯಾಖ್ಯಾನದಿಂದ, ಫ್ಯಾಸೀವಾದಕ್ಕೆ

> **ಆಧ್ಯಾತ್ಮಿಕವಾದ, ಅಂಧಾನುಕರಣೆ ಮತ್ತು ವಿವೇಚನಾರಹಿತ ಮನೋಧರ್ಮಗಳ ಜೊತೆಯಲ್ಲಿ ವಿಜ್ಞಾನದ ತಾಂತ್ರಿಕ ಅಂಶಗಳ ವಿಚಿತ್ರ ಸಮ್ಮಿಶ್ರಣವೇ ಫ್ಯಾಸೀವಾದ.**

ಅಧಿಕಾರದಲ್ಲಿ ಉಳಿಯಲು ಇರುವ ಒಂದೇ ಒಂದು ಮಾರ್ಗವೆಂದರೆ, ಜನಸಮೂಹದ ನಿರ್ದಯ ದಮನ ಎಂದು ಕೆಲವರು ತೀರ್ಮಾನಿಸುತ್ತಾರೆ.

ಮೊದಲನೇ ವಿಶ್ವಯುದ್ಧದ ಸಮಯದಲ್ಲಿ ಮತ್ತು ಆನಂತರದ ಕಾಲಘಟ್ಟದಲ್ಲಿ, ಫ್ಯಾಸೀವಾದವು ವಿಶ್ವದಲ್ಲೇ ಮೊಟ್ಟಮೊದಲ ಬಾರಿಗೆ ಇಟಲಿ ಹಾಗೂ ಜರ್ಮನಿಯಲ್ಲಿ ತಲೆಯೆತ್ತಲು ಪ್ರಯತ್ನಿಸುತ್ತಿದ್ದ ಪ್ರಾರಂಭಿಕ ಹಂತದಲ್ಲಿ ಅಂತಹ ವಿಚಾರ ವಾಸ್ತವದಲ್ಲಿ ಪ್ರಚಲಿತವಾಗಿತ್ತು. ಆಗ ಫ್ಯಾಸೀವಾದಿಗಳನ್ನು ಹಿಂಸಾನಂದದಿಂದ ಜನರನ್ನು ತುಳಿಯುವ ರಕ್ತಪಿಶಾಚಿಗಳು ಎನ್ನುವಂತೆ ಚಿತ್ರಿಸಲಾಗಿತ್ತು. ಆದರೆ ವಾಸ್ತವ ಸಂಗತಿಗಳು ಇದಕ್ಕೆ ವಿರುದ್ಧವೆಂದು ಸಾಬೀತಾದಾಗ, ಪ್ರಜ್ಞಾವಂತಿಕೆಯಿಲ್ಲದ ಜನರು ಇದು ಫ್ಯಾಸೀವಾದಿಗಳ ಬಗ್ಗೆ ಕಮ್ಯುನಿಸ್ಟರ ದೂಷಣೆಯೆಂದು ತಿಳಿದು, ಅದಕ್ಕೆ ಕೋಪದಿಂದಲೇ ಪ್ರತಿಕ್ರಿಯಿಸಿದರು. ಅವರ ಕೋಪವನ್ನು ಕಮ್ಯುನಿಸ್ಟರ ವಿರುದ್ಧ ಬಳಸಿಕೊಂಡ ಫ್ಯಾಸೀವಾದಿಗಳು, ಕಮ್ಯುನಿಸ್ಟರನ್ನು ದೈಹಿಕವಾಗಿ ಮುಗಿಸಲು ತಮ್ಮ ಅಚ್ಚುಕಟ್ಟಾದ ಯೋಜನೆಯೊಂದಿಗೆ ಮುನ್ನಡೆದರು.

ಫ್ಯಾಸೀವಾದವು ಯಾವಾಗಲೂ ಮತ್ತು ಎಲ್ಲಾ ಕಡೆಯೂ ದಮನ ಹಾಗೂ ಮನವೊಲಿಸುವ ಅಥವಾ ವಂಚನೆಯ ದ್ವಿಮುಖ ನೀತಿಯನ್ನು ಅಳವಡಿಸಿಕೊಳ್ಳುತ್ತದೆ. ಜನತೆಯ ನಿರ್ದಯ ದಮನಕ್ಕಿಂತಲೂ, 'ರಾಷ್ಟ್ರೀಯ ಮರುನಿರ್ಮಾಣ'ಕ್ಕಾಗಿ ಫ್ಯಾಸೀವಾದಿ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಿದ್ಧರಿರುವವರನ್ನು ಸ್ವಯಂಸೇವಕರಾಗಿ ತನ್ನೆಡೆಗೆ ಗೆದ್ದುಕೊಳ್ಳುವುದೇ ಅದರ ಗುರಿ. ತನ್ನ ಬೆಂಬಲಕ್ಕೆ ತನ್ನೊಡನೆ ಸಹಕರಿಸುವ ಜನಶಕ್ತಿಯಲ್ಲದಿದ್ದರೆ ಫ್ಯಾಸೀವಾದ ಉಳಿಯಲಾರದು. ಹಾಗಾಗಿ, ಫ್ಯಾಸೀವಾದವು ಸೋಷಲ್ ಡೆಮಾಕ್ರೆಟಿಕ್ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತದೆ, ಜನರಿಗೆ ಸಣ್ಣಪುಟ್ಟ ಆರ್ಥಿಕ ರಿಯಾಯಿತಿಗಳನ್ನು ಕೊಡುತ್ತದೆ, ಬಂಡವಾಳಶಾಹಿ ಆರ್ಥಿಕತೆಯಲ್ಲಿರುವ ಅರಾಜಕತೆಯನ್ನು ಮತ್ತು ಅಲ್ಲಿಂದ ಹರಿದು ಬರುವ ಜೀವನದ ಅಭದ್ರತೆಯನ್ನು–ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು–ನಿಯಂತ್ರಿಸಲು ಪ್ರಯತ್ನಿಸುತ್ತದೆ. ಬಂಡವಾಳಶಾಹಿ ವರ್ಗದ ಒಟ್ಟಾರೆ ಹಿತಾಸಕ್ತಿಯನ್ನು ಕಾಪಾಡುವ ಪ್ರಯತ್ನದಲ್ಲಿ, ಒಬ್ಬೊಬ್ಬ ಬಂಡವಾಳಶಾಹಿಯ ಮೇಲೆ ಮತ್ತು ಅವರ ಅರಾಜಕ ಉತ್ಪಾದನೆಯ ಸ್ವಾತಂತ್ರ್ಯದ ಮೇಲೆ ಅದು ನಿರ್ಬಂಧವನ್ನೂ ಹೇರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಫ್ಯಾಸೀವಾದಿ ಪ್ರಭುತ್ವವು ನಾಮಕಾವಾಸ್ತೆ ಬೂರ್ಜ್ವಾ ಕಲ್ಯಾಣ ರಾಜ್ಯದ ಸ್ಥಾನವನ್ನೂ ಪಡೆದುಕೊಳ್ಳುತ್ತದೆ. ಇಂತಹ ನಾಮಕಾವಸ್ತೆ ಕಲ್ಯಾಣ ಕಾರ್ಯಗಳ ಜೊತೆಗೆ, ಕ್ರಾಂತಿಕಾರಿ ವಿಚಾರಗಳನ್ನು ನಿರ್ಮೂಲನೆ ಮಾಡಲೆಂದು ಅದು ಅವಿರತವಾಗಿ ವೈಚಾರಿಕ ಸಮರಗಳನ್ನು ನಡೆಸುತ್ತದೆ. ಮತ್ತೆ, ಇಂತಹ ಕ್ರಮಗಳನ್ನು ಬಂಡವಾಳಶಾಹಿ ವಿರೋಧಿ ಹಾಗೂ ಜನಪರವೆಂದು ಭಾವಿಸಿಕೊಂಡು, ಫ್ಯಾಸೀವಾದಿಗಳಿಗೆ ತಮ್ಮ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಲು, ಪ್ರಜ್ಞಾವಂತಿಕೆಯಿಲ್ಲದ ಜನರು ತಮ್ಮ ಉತ್ಸಾಹಭರಿತ ಬೆಂಬಲ ನೀಡುತ್ತಾರೆ; ಆಗ ಫ್ಯಾಸೀವಾದಿಗಳು ಕಮ್ಯುನಿಸಂ ಅನ್ನು ವೈಚಾರಿಕವಾಗಿ ಮತ್ತು ಕಮ್ಯುನಿಸ್ಟರನ್ನು ದೈಹಿಕವಾಗಿ ನಿರ್ಮೂಲನೆ ಮಾಡಲು ತಮ್ಮೆಲ್ಲಾ ಶಕ್ತಿಯನ್ನು ಒಗ್ಗೂಡಿಸುತ್ತಾರೆ. ಕಮ್ಯುನಿಸಂ ವಿರುದ್ಧದ ತನ್ನ ಯುದ್ಧದಲ್ಲಿ ಫ್ಯಾಸೀವಾದವು ಸೋಷಲ್ ಡೆಮಾಕ್ರೆಸಿ, ರಾಷ್ಟ್ರೀಯ ಅಂಧಾಭಿಮಾನ ಮತ್ತು ನಿಗೂಢತಾವಾದಗಳ ವಿಚಿತ್ರ ಸಮ್ಮಿಶ್ರಣವಾದ ತನ್ನದೇ ಆದ ಫ್ಯಾಸೀವಾದಿ ಸಂಸ್ಕೃತಿಯನ್ನು ಪ್ರತಿಪಾದಿಸುತ್ತದೆ.

### ಫ್ಯಾಸೀವಾದ ಮತ್ತು ಸಂಸ್ಕೃತಿ

ಫ್ಯಾಸೀವಾದವು ಆಧ್ಯಾತ್ಮಿಕತೆ ಹಾಗೂ ವಿಜ್ಞಾನದ ಒಂದು ವಿಚಿತ್ರ ಸಮ್ಮಿಶ್ರಣ. ಫ್ಯಾಸೀವಾದಿ ಪ್ರಭುತ್ವ, ತನ್ನ ಆರ್ಥಿಕ ಹಾಗೂ ಮಿಲಿಟರಿ ಶಕ್ತಿಯನ್ನು ಬೆಳೆಸುವ ಪ್ರಯತ್ನದಲ್ಲಿ ವಿಜ್ಞಾನದ ತಾಂತ್ರಿಕ ಅಂಶಗಳನ್ನು ಅಳವಡಿಸಿಕೊಳ್ಳುವುದು ಮತ್ತು ಶೋಷಕ ಬಂಡವಾಳಶಾಹಿ ವ್ಯವಸ್ಥೆ ಹಾಗೂ ಇಂದಿನ ಸಮಾಜದೊಂದಿಗೆ ಅಂಟಿಕೊಂಡಿರುವ ಕೆಡುಕುಗಳಾದ ಎಲ್ಲಾ ಅನಿಷ್ಟಗಳಿಗೂ, ಸರ್ವರೋಗ ಸಂಹಾರಕ ಎನ್ನುವಂತೆ ವಿಜ್ಞಾನ ವಿರೋಧಿ ಮತಾಂಧತೆ ಹಾಗೂ ಭಾವನಾವಾದಿ ಆಚರಣೆಗಳನ್ನು ಹರಡುವುದು – ಇವೆರಡೂ ಜೊತೆಜೊತೆಯಾಗಿ ರಾಷ್ಟ್ರೀಯ ಸಂಸ್ಕೃತಿ ಹಾಗೂ ಪರಂಪರೆಯ ಹೆಸರಿನಲ್ಲಿ ಇರುತ್ತವೆ. ಹೀಗೆ, ಫ್ಯಾಸೀವಾದಿ ಸಂಸ್ಕೃತಿಯು ವೈಜ್ಞಾನಿಕ ಸತ್ಯ ಮತ್ತು ಭ್ರಾಮಕ ಅಂಶಗಳ ವಿಚಿತ್ರ ಸಮ್ಮಿಶ್ರಣ. ಪ್ರಾಕೃತಿಕ ಪ್ರಕ್ರಿಯೆಗಳ ಕುರಿತಾದ ಫ್ಯಾಸೀವಾದದ ಅಭಿಪ್ರಾಯಗಳಲ್ಲಿ ವೈಜ್ಞಾನಿಕ ಅಂಶ ಬಲವಾಗಿದ್ದರೆ, ಸಾಮಾಜಿಕ ಪ್ರಕ್ರಿಯೆಗಳ ಬಗ್ಗೆ ಅದರ ಅಭಿಪ್ರಾಯಗಳಲ್ಲಿ ಭ್ರಾಮಕ ಅಂಶ ಬಲವಾಗಿರುತ್ತದೆ. ಜನತೆಯ ಮಾನಸಿಕತೆಯನ್ನು ಕಾರ್ಯಕಾರಣ ಸಂಬಂಧದ ವೈಜ್ಞಾನಿಕ ಪಥದಿಂದ ಕುರುಡು ನಂಬಿಕೆ, ಪೂರ್ವಕಲ್ಪನೆ ಹಾಗೂ ನಿಗೂಢತಾವಾದದ ಕುರುಡುಗಲ್ಲಿಯೆಡೆಗೆ ತಿರುಗಿಸುತ್ತಾ, ಅಂತಿಮವಾಗಿ ಸಾಮಾಜಿಕ ಕ್ರಿಯೆಯ ಬಗ್ಗೆ ತಿರಸ್ಕಾರ ಬೆಳೆಸುವುದೇ ಅದರ ಗುರಿ. ತನ್ನ ಅವೈಜ್ಞಾನಿಕ, ಭ್ರಾಮಕ ಸಾಮಾಜಿಕ ದೃಷ್ಟಿಕೋನಕ್ಕೆ ಅನುಗುಣವಾಗಿ ಫ್ಯಾಸೀವಾದವು, ಸಮಾಜದ ಬೆಳವಣಿಗೆಯ ಮೂಲ ಚಾಲಕ ಶಕ್ತಿಯಾಗಿರುವ ವರ್ಗ ಸಂಘರ್ಷದ ಸಾಮಾಜಿಕ–ವೈಜ್ಞಾನಿಕ ನಿಯಮವನ್ನು ತಿರಸ್ಕರಿಸುತ್ತದೆ.

> **ವರ್ಗ ಸಂಘರ್ಷದ ವೈಚಾರಿಕತೆ ಮತ್ತು ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ವಿರುದ್ಧ ಜನಸಾಮಾನ್ಯರ ಮನಸ್ಸಿನಲ್ಲಿ ವಿಷ ತುಂಬಲು ಸದಾ ಬೂರ್ಜ್ವಾಜಿಗಳ ಕೈಯಲ್ಲಿರುವ ಪ್ರಬಲ ಅಸ್ತ್ರವೆಂದರೆ ರಾಷ್ಟ್ರೀಯ ಅಂಧಾಭಿಮಾನ. ಫ್ಯಾಸೀವಾದಿಗಳು ತಮ್ಮ ಗುರಿಯನ್ನು ಮುಟ್ಟಲು ಇದನ್ನು ತುಂಬಾ ಚೆನ್ನಾಗಿ ಬಳಸಿಕೊಳ್ಳುತ್ತಾರೆ.**

ಮತ್ತದರ ಬದಲಿಗೆ, ವರ್ಗ ಸೌಹಾರ್ದತೆ ಹಾಗೂ ವರ್ಗ ಸಹಯೋಗದ ತತ್ವವನ್ನು ಪ್ರತಿಪಾದಿಸುತ್ತದೆ. ನಿಜಾರ್ಥದಲ್ಲಿ, ಫ್ಯಾಸೀವಾದಿ ಸಂಸ್ಕೃತಿಯಲ್ಲಿ ವರ್ಗರಹಿತ ಮತ್ತು ವರ್ಗಮೀರಿದ ವಿಚಾರಗಳು ಪ್ರಬಲವಾಗಿರುತ್ತವೆ.

ವರ್ಗ ಸಂಘರ್ಷದ ವೈಚಾರಿಕತೆ ಮತ್ತು ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ವಿರುದ್ಧ ಜನ ಸಾಮಾನ್ಯರ ಮನಸ್ಸಿನಲ್ಲಿ ವಿಷ ತುಂಬಲು ಸದಾ ಬೂರ್ಜ್ವಾಜಿಗಳ ಕೈಯಲ್ಲಿರುವ ಪ್ರಬಲ ಅಸ್ತ್ರವೆಂದರೆ ರಾಷ್ಟ್ರೀಯ ಅಂಧಾಭಿಮಾನ. ಫ್ಯಾಸೀವಾದಿಗಳು ತಮ್ಮ ಗುರಿಯನ್ನು ಮುಟ್ಟಲು ಇದನ್ನು ತುಂಬಾ ಚೆನ್ನಾಗಿ ಬಳಸಿಕೊಳ್ಳುತ್ತಾರೆ.

ಬೂರ್ಜ್ವಾಜಿಗಳು ಬೋಧಿಸುವ ಪ್ರತಿಗಾಮಿ ರಾಷ್ಟ್ರವಾದ ಮತ್ತು ಜನತೆಯ ದೇಶಪ್ರೇಮಗಳೆರಡೂ ಒಂದೇ ಅಲ್ಲ ಎನ್ನುವುದನ್ನು ನೆನಪಿನಲ್ಲಿಡಬೇಕು. ಅವುಗಳು ಸತ್ವ ಮತ್ತು ಗುಣಗಳಲ್ಲಿ ವಿಭಿನ್ನ. ಜನತೆಯ ದೇಶಪ್ರೇಮಕ್ಕೆ ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ವೈಚಾರಿಕತೆಯೊಂದಿಗೆ ಯಾವ ಘರ್ಷಣೆಯೂ ಇಲ್ಲ; ಬದಲಿಗೆ, ಇಂದು ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದವನ್ನು ಎತ್ತಿ ಹಿಡಿಯದವರು ನಿಜವಾದ ದೇಶಪ್ರೇಮಿಯಾಗಲು ಸಾಧ್ಯವಿಲ್ಲ.

ಆದರೆ, ಪ್ರತಿಗಾಮಿ ಬೂರ್ಜ್ವಾ ರಾಷ್ಟ್ರವಾದವು ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ವೈಚಾರಿಕತೆಯೊಂದಿಗೆ ಹೊಂದಿಕೆಯಾಗುವುದಿಲ್ಲ. ಜೊತೆಗೆ, ಪ್ರತಿಗಾಮಿ ಬೂರ್ಜ್ವಾ ರಾಷ್ಟ್ರವಾದವು ಬೂರ್ಜ್ವಾ ವಿಶ್ವ ದೃಷ್ಟಿಕೋನದ ಅಭಿವ್ಯಕ್ತಿಯಾಗಿದ್ದು, ಬೂರ್ಜ್ವಾಜಿಯ ಹಿತಾಸಕ್ತಿಯಲ್ಲಿ ಜನತೆಯ ದೇಶಪ್ರೇಮದ ಭಾವನೆಗಳನ್ನು ದುರ್ಬಳಕೆ ಮಾಡಿಕೊಳ್ಳಲು ಶೋಷಕರ ಕೈಯಲ್ಲಿರುವ ಅಸ್ತ್ರ; ಆದರೆ, ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ವೈಚಾರಿಕತೆಯಿಂದ ಮಾರ್ಗದರ್ಶನ ಪಡೆದ ದೇಶಪ್ರೇಮವು ಬಂಡವಾಳವಾದ–ಸಾಮ್ರಾಜ್ಯವಾದದ ಶೋಷಕ ವ್ಯವಸ್ಥೆಯಿಂದ ವಿಮುಕ್ತರಾಗಲು ಶೋಷಿತ ಜನತೆಯ ಕೈಯಲ್ಲಿರುವ ಪ್ರಬಲ ಅಸ್ತ್ರ. ಪ್ರತಿಗಾಮಿ ಬೂರ್ಜ್ವಾ ರಾಷ್ಟ್ರವಾದವು ಸಾಮಾಜಿಕ ಪ್ರಗತಿಗೆ ಅಡ್ಡಗೋಡೆಯಾದ ಅಳಿಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಮುಂದುವರೆಸುವ ಸ್ವಾರ್ಥಪರ ಬೂರ್ಜ್ವಾ ಹಿತಾಸಕ್ತಿಯಿಂದ ಹುಟ್ಟಿದರೆ, ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ವೈಚಾರಿಕತೆಯಿಂದ ಬಲ ಪಡೆದುಕೊಂಡ ದೇಶಪ್ರೇಮವು ಜನರೆಡೆಗಿನ ನಿಜವಾದ ಪ್ರೀತಿಯ ಚಿಲುಮೆಯಿಂದ ಚಿಮ್ಮಿ ಬರುತ್ತದೆ ಮತ್ತು ಸಾಮಾಜಿಕ ಪ್ರಗತಿಯ ಎಲ್ಲಾ ಅಡ್ಡಗೋಡೆಗಳನ್ನು ಧ್ವಂಸ ಮಾಡುವ ಗುರಿ ಹೊಂದಿರುತ್ತದೆ. ಹಾಗಾಗಿ, ಫ್ಯಾಸೀವಾದಕ್ಕೆ ಜನರ ನೈಜ ದೇಶಪ್ರೇಮಿ ಭಾವನೆಗಳನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ.

ಫ್ಯಾಸೀವಾದಿಗಳು ಜನರ ಮುಂದಿಡಲು ಪ್ರತಿಪಾದಿಸುತ್ತಿರುವ ವರ್ಗ ಸೌಹಾರ್ದತೆ, ಎಲ್ಲಾ ವರ್ಗಗಳ ಒಗ್ಗಟ್ಟು ಅಥವಾ ವರ್ಗಗಳನ್ನು ಮೀರಿದ ರಾಷ್ಟ್ರೀಯ ಹಿತಾಸಕ್ತಿಯ ವಿಚಾರಗಳಿಗೊಂದು ಮೂರ್ತ ಅಭಿವ್ಯಕ್ತಿ ಬೇಕು. ಅದಕ್ಕಾಗಿಯೇ ಫ್ಯಾಸೀವಾದವು ಕೆಲವೊಮ್ಮೆ ಅತಿಮಾನವನ ಅಂದರೆ ರಾಷ್ಟ್ರದ ಹಂಬಲ ಹಾಗೂ ಹಿತಾಸಕ್ತಿಗಳ ಸಾಕಾರ ರೂಪವಾದ ಅತಿಮಾನವನ ಪರಿಕಲ್ಪನೆಯನ್ನು ಪ್ರಚುರಪಡಿಸುತ್ತದೆ. ಹಾಗಾಗಿ, ಬಂಡವಾಳವಾದವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೆಚ್ಚೆಚ್ಚು ನಿರಂಕುಶವಾದ ಮತ್ತು ಆಧ್ಯಾತ್ಮಿಕತೆಯ ಹಿಂದೆ ಬಿದ್ದಿರುವುದರಲ್ಲಿ ಆಶ್ಚರ್ಯವಿಲ್ಲ..........

......ಹೀಗೆ, ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲಿ, ಅದು ಮುಂದುವರೆದ ರಾಷ್ಟ್ರವಾಗಿರಲಿ ಅಥವಾ ಹಿಂದುಳಿದ ರಾಷ್ಟ್ರವಾಗಿರಲಿ, ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ, ಫ್ಯಾಸೀವಾದ ದಾಪುಗಾಲು ಇಡುತ್ತಿದೆ. ಹಳೆಯ ಪರಂಪರಾನುಗತವಾಗಿ ಬಂದ ಸಂಸದೀಯ ಪ್ರಜಾತಾಂತ್ರಿಕ ರಾಷ್ಟ್ರಗಳು ಸಹ ಇದರಿಂದ ಹೊರತಾಗಿಲ್ಲ. ಸಂಸತ್ತು ಚಾರಿತ್ರಿಕವಾಗಿ ಬದ್ಧವಾದ ಬೂರ್ಜ್ವಾ ರಾಜಕೀಯ ಸಂಸ್ಥೆಯಾಗಿದ್ದು, ಅದೊಂದು ಬಂಡವಾಳಶಾಹಿ ಸಮಾಜದ ಅಡಿಪಾಯವುಳ್ಳ ರಾಜಕೀಯ ಮೇಲ್ ರಚನೆ. ಒಂದು ಕಾಲದಲ್ಲಿ ಬೂರ್ಜ್ವಾ ಅರ್ಥದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಮುಕ್ತ ಪೈಪೋಟಿಯ ವೇದಿಕೆಯಾಗಿದ್ದ ಸಂಸತ್ತನ್ನು ಅಸ್ತಿತ್ವಕ್ಕೆ ತಂದ ಬೂರ್ಜ್ವಾಜಿಗಳಿಗೇ ಅದರ ಉಪಯುಕ್ತತೆ ಬಹಳ ವೇಗದಲ್ಲಿ ಕಡಿಮೆಯಾಗುತ್ತಿದೆ. ಹಾಗಾಗಿ, ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಫ್ಯಾಸೀವಾದವು ಪ್ರಭುತ್ವದ ರಚನೆ ಮತ್ತು ಆಡಳಿತ ವ್ಯವಸ್ಥೆಯಲ್ಲಿ ವಿಭಿನ್ನ ಸ್ವರೂಪಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತಿದೆ.

## ರಾಷ್ಟ್ರೀಯ ಶಿಕ್ಷಣ ನೀತಿ–2020

1ನೇ ಪುಟದಿಂದ

ಬ್ರಿಟಿಷ್ ಪ್ರಭಾವದಿಂದ ಶಿಕ್ಷಣವನ್ನು ಮುಕ್ತಗೊಳಿಸುವ ಹಾಗೂ 21ನೇ ಶತಮಾನಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಪ್ರಮುಖ ಉದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು ಜಾರಿಗೆ ತರಲಾಯಿತು ಎಂದು ಸರ್ಕಾರವು ಅಬ್ಬರಿಸುತ್ತದೆ. ಆದರೆ, ಈ ನೀತಿಯು ಶಿಕ್ಷಣದ ನೈಜ ಸಮಸ್ಯೆಗಳನ್ನು ಪರಿಹರಿಸುವ ಬದಲು, 21ನೇ ಶತಮಾನದ ಅವಶ್ಯಕತೆಯಾಗಿರುವ ಸಾರ್ವತ್ರಿಕವಾಗಿ ಲಭ್ಯವಿರಬೇಕಿರುವ ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ ಹಾಗೂ ವೈಜ್ಞಾನಿಕ ಶಿಕ್ಷಣಕ್ಕೆ ಧಕ್ಕೆ ತಂದೊಡ್ಡಿದೆ. ಜನರನ್ನು ಶಿಕ್ಷಣದಿಂದ ವಂಚಿಸುವ, ಸಾರ್ವಜನಿಕ ಶಿಕ್ಷಣವನ್ನು ಧ್ವಂಸಗೊಳಿಸುವ ಜಾಗತೀಕರಣ, ಖಾಸಗೀಕರಣ, ವ್ಯಾಪಾರೀಕರಣ, ಕಾರ್ಪೋರೇಟೀಕರಣದ ನೀಲಿ ನಕ್ಷೆ ಇದಾಗಿದೆ. ಶಿಕ್ಷಣದ ಸ್ವಾಯತ್ತತೆಯನ್ನು ಸಂಪೂರ್ಣವಾಗಿ ಹಾಳುಗೆಡವಿ ಆಳುವ ವರ್ಗವು ತನ್ನ ಆಜ್ಞಾನುಯಾಯಿ ಕೇಂದ್ರ ಸರ್ಕಾರದ ಮೂಲಕ ಶಿಕ್ಷಣವನ್ನು ತನ್ನ ಅವಶ್ಯಕತೆಗೆ ಅನುಗುಣವಾಗಿ ತನ್ನಡಿಯಲ್ಲಿ ಕೇಂದ್ರೀಕರಿಸಿಕೊಳ್ಳುತ್ತಿದೆ.

ಈ ಶಿಕ್ಷಣ ನೀತಿಯು ಸಮಗ್ರವಾಗಿ ಆಲೋಚನೆ ಮಾಡುವ ಸಾಮರ್ಥ್ಯ ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದಿಲ್ಲ. ತಾರ್ಕಿಕ ಚಿಂತನಾ ಕ್ರಮಕ್ಕೆ ಪೆಟ್ಟು ನೀಡುತ್ತಿದೆ. ಮಾನವರ ವ್ಯಕ್ತಿತ್ವ ನಿರ್ಮಾಣ ಮಾಡಲು ಅತ್ಯಾವಶ್ಯಕವಾಗಿರುವ ಮೌಲ್ಯಯುತ ಶಿಕ್ಷಣವನ್ನೂ ಇದು ಕಡೆಗಣಿಸುತ್ತಿದೆ. ಶಿಕ್ಷಣವನ್ನು ಜನರ ಕೈಗೆ ಎಟುಕದ ವ್ಯಾಪಾರದ ಸರಕನ್ನಾಗಿಸಲು ಅದನ್ನು ಖಾಸಗಿ ಮಾಲೀಕತ್ವದ ಸುಪರ್ದಿಗೆ ಒಪ್ಪಿಸಲಾಗುತ್ತಿದೆ ಹಾಗೂ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸಲಾಗುತ್ತಿದೆ. ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ಜನವೇದಿಕೆಯ ಮೂಲಕ ಇಡೀ ದೇಶದಾದ್ಯಂತ ಭುಗಿಲೇಳುತ್ತಿರುವ ಶಿಕ್ಷಣ ತಜ್ಞರು, ಬುದ್ಧಿಜೀವಿಗಳು, ನ್ಯಾಯಾಧೀಶರು, ಪತ್ರಕರ್ತರು ಹಾಗೂ ಅನೇಕ ಸ್ತರದ ಜನರನ್ನೊಳಗೊಂಡ ಹೋರಾಟವನ್ನು ಎಸ್‌ಯುಸಿಐ(ಸಿ) ಬೆಂಬಲಿಸುತ್ತಿದೆ.

ಕೇರಳ, ತಮಿಳುನಾಡು, ಕರ್ನಾಟಕ, ಪಶ್ಚಿಮ ಬಂಗಾಳ, ತ್ರಿಪುರ, ಈ ರಾಜ್ಯಗಳಲ್ಲಿ ಹಿಂದಿ ಭಾಷೆಯನ್ನು ತ್ರಿಭಾಷಾ ನೀತಿಯ ರೂಪದಲ್ಲಿ ಹೇರುವ ಷಡ್ಯಂತ್ರವನ್ನು ಕೇಂದ್ರ ಸರ್ಕಾರವು ಹೆಣೆದಿದೆ. 1960ರಲ್ಲೇ ಅಂದಿನ ಕಾಂಗ್ರೆಸ್ ಸರ್ಕಾರವು 'ರಾಷ್ಟ್ರೀಯ ಭಾಷೆ' ಎಂಬ ಹೆಸರಿನಲ್ಲಿ ಹಿಂದಿ ಭಾಷೆಯನ್ನು ದೇಶದಾದ್ಯಂತ ಹೇರಲು ಹೊರಟಾಗಲೇ ನಮ್ಮ ಪಕ್ಷವು ಈ ನಡೆಯನ್ನು ಈ ರೀತಿಯಲ್ಲಿ ವಿರೋಧಿಸಿತ್ತು: "ಭಾರತ ಒಕ್ಕೂಟಕ್ಕೆ ಒಂದು ಅಧಿಕೃತ ಭಾಷೆಯನ್ನು ಆಯ್ದುಕೊಳ್ಳಬೇಕು ಎಂಬ ವಿಷಯವನ್ನು ಕುರಿತಾಗಿ ತೀವ್ರ ಅಭಿಪ್ರಾಯಭೇದವಿದೆ. ಈ ವ್ಯತ್ಯಾಸವು ಒಂದೆಡೆ ಹಿಂದಿಯೇ ಮಹಾನ್ ಭಾಷೆ ಎಂಬ ದುರಭಿಮಾನದ ಭಾವನೆಯಿಂದ ಅಥವಾ ಸಂಕುಚಿತವಾದ ಸ್ಥಳೀಯ ರಾಷ್ಟ್ರವಾದ ಭಾವನೆಯಿಂದ ವ್ಯಕ್ತವಾಗುತ್ತಿವೆ. ಮನುಷ್ಯನಿಂದ ಮನುಷ್ಯನ ಮೇಲೆ ನಡೆಯುತ್ತಿರುವ ಪ್ರಸ್ತುತ ಶೋಷಣೆಯ ಈ ವ್ಯವಸ್ಥೆಯನ್ನು ಕೊನೆಗಾಣಿಸಿ ಹೊಸ ಸಮಾಜವನ್ನು ಕಟ್ಟಲು ಜನಸಮುದಾಯವನ್ನು ಒಟ್ಟುಗೂಡಿಸುವ ಕೆಲಸಕ್ಕೆ ಈ ಎರಡೂ ಅಂಧಾಭಿಮಾನಗಳು ಕೇಡನ್ನುಂಟು ಮಾಡುತ್ತವೆ. ಈ ರೀತಿಯ 'ಮಹಾಗಲಭೆ'ಯ ನಡುವೆ ಈ ವಿಷಯದ ಕುರಿತಾಗಿ ಸರಿಯಾದ ನಿಲುವುಳ್ಳ ಪ್ರಜ್ಞಾವಂತರನ್ನು ದೂರತಳ್ಳಲಾಗಿದೆ. ಹಿಂದಿ–ಹಿಂದು–ಹಿಂದುಸ್ಥಾನ ಎಂದು ಅಬ್ಬರಿಸುವ ಅಂಧಾಭಿಮಾನವುಳ್ಳ ಶಕ್ತಿಗಳನ್ನು ಬೆಳೆಸಿ, ಹಿಂದಿ ಭಾಷಾಂಧಾಭಿಮಾನವನ್ನು ಕೆರಳಿಸಿ ನಮ್ಮ ದೇಶದ ಬಹು ದೊಡ್ಡ ಜನಸ್ತೋಮ ಅನುಸರಿಸುವ ವೈವಿಧ್ಯಮಯ ಸಂಸ್ಕೃತಿ, ಜೀವನ ಶೈಲಿ, ಜೀವಂತವಾಗಿರುವ ಅನೇಕ ಭಾಷೆಗಳೆಲ್ಲವನ್ನೂ ಕಡೆಗಣಿಸಿ ಒಂದೇ ಭಾಷೆ, ಒಂದೇ ಸಂಸ್ಕೃತಿಯನ್ನು ಜನರ ಮೇಲೆ ಹೇರುವ ದುರುದ್ದೇಶ ಸರ್ಕಾರಕ್ಕಿದೆ. ದೇಶದಲ್ಲಿರುವ ಎಲ್ಲಾ ಭಾಷೆಗಳಂತೆಯೇ ಇರುವ ಹಿಂದಿ ಭಾಷೆಗೆ ಹೆಚ್ಚು ಪ್ರಾಮುಖ್ಯತೆ ನೀಡಿ, ಬೇರೆ ಭಾಷೆಗಳೆಲ್ಲದರ ಸಮಾನ ಬೆಳವಣಿಗೆಗೆ ನೀಡಬೇಕಿದ್ದ ಅವಕಾಶಗಳನ್ನೆಲ್ಲಾ ಕಸಿದುಕೊಂಡು ಅವುಗಳನ್ನೆಲ್ಲಾ ಎರಡನೇ ದರ್ಜೆಗೆ ಇಳಿಸಲಾಗಿದೆ." – (ಸೋಷಲಿಸ್ಟ್ ಯೂನಿಟಿ, ಸಂಪುಟ 2, ಸಂಚಿಕೆ 2, ನೂತನ ಸರಣಿ, ಜೂನ್ 1963)

'ಡಬಲ್ ಎಂಜಿನ್ ಸರ್ಕಾರ'ಗಳು ಎನ್.ಇ.ಪಿ 2020ನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು ನಿರತವಾಗಿವೆ. ಆದರೆ, ಇದರ ಜೊತೆಯಲ್ಲಿ ತೃಣಮೂಲ ಕಾಂಗ್ರೆಸ್ ನೇತೃತ್ವದ ಪಶ್ಚಿಮ ಬಂಗಾಳ ಹಾಗೂ ಸಿಪಿಎಂ ಆಡಳಿತ ನಡೆಸುವ ಕೇರಳದಲ್ಲಿಯೂ ಎನ್.ಇ.ಪಿ–2020ನ್ನು ಜಾರಿಗೆ ತರಲಾಗಿದೆ. ಈ ರಾಜ್ಯಗಳೂ ಸಹ ಸರ್ಕಾರಿ ಶಾಲೆಗಳನ್ನು ಮುಚ್ಚುವತ್ತ ಹೆಜ್ಜೆಯಿಟ್ಟಿವೆ. ಖಾಸಗೀಕರಣಕ್ಕೆ ಉತ್ತೇಜನ ನೀಡುತ್ತಿವೆ. ಈ ಮಧ್ಯದಲ್ಲಿ, ಮಧ್ಯಪ್ರದೇಶದಲ್ಲಿ ಸೆಮಿಸ್ಟರ್ ಪದ್ಧತಿಯ ವಿರುದ್ಧ ನಡೆದ ತೀವ್ರ ಹೋರಾಟ ಹಾಗೂ ನಮ್ಮ ರಾಜ್ಯದಲ್ಲಿ 4 ವರ್ಷದ ಪದವಿ ಕೋರ್ಸ್ ವಿರೋಧಿಸಿ ವಿದ್ಯಾರ್ಥಿಗಳು ಸಂಘಟಿಸಿದ ಪ್ರಬಲ ಹೋರಾಟಗಳು, ಹೋರಾಟವೇ ನಿರ್ಣಾಯಕ ಮಾರ್ಗ, ಕಾನೂನು ಹೋರಾಟಗಳು ಯಾವ ಅಂತಿಮ ಪರಿಹಾರವನ್ನೂ ನೀಡುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ಜನಸಾಮಾನ್ಯರ ನಡುವೆ ದೃಢಪಡಿಸಿವೆ.

ಈ ಹಿನ್ನೆಲೆಯಲ್ಲಿ, 'ಶಿಕ್ಷಣ ಉಳಿಸುವ ಹೋರಾಟ'ವನ್ನು ಇನ್ನಷ್ಟು ತೀವ್ರಗೊಳಿಸುವ ಅಗತ್ಯವಿದೆ. ಎನ್.ಇ.ಪಿ 2020ನ್ನು ಹಿಂಪಡೆಯಲೇಬೇಕಾಗುವ ಮಟ್ಟಕ್ಕೆ ಜನಹೋರಾಟಗಳನ್ನು ಕಟ್ಟಿಬೆಳೆಸುವ ಅವಶ್ಯಕತೆ ಇದೆ. ಕಾನೂನಾತ್ಮಕ ಹೋರಾಟಗಳು ಅಲ್ಪಮಟ್ಟದ ಪರಿಹಾರವನ್ನು ನೀಡಬಹುದಾದರೂ ಸಹ ನಿರ್ಣಾಯಕ ಪಾತ್ರವನ್ನು ಜನರೇ ವಹಿಸಿಕೊಳ್ಳಬೇಕು.

## 5 ಟ್ರಿಲಿಯನ್ ಆರ್ಥಿಕತೆಯ ಕರಾಳ ಮುಖ

1ನೇ ಪುಟದಿಂದ

ಆಧಾರರಹಿತವಾಗಿದೆ. ತಲಾ ಆದಾಯ ಎಂದರೆ ಒಟ್ಟು ಸಂಪತ್ತನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸುವುದು. 16 ಜನರ ಸಂಪತ್ತು 60 ಕೋಟಿ ಜನರ ಸಂಪತ್ತಿಗೆ ಸಮನಾಗಿದ್ದರೆ, ಕೇವಲ ಅಂಕಿಅಂಶಗಳ ಸರಾಸರಿಯಾಗಿರುವ ತಲಾ ಆದಾಯವು ಯಾವುದಾದರೂ ಅರ್ಥವನ್ನು ನೀಡುತ್ತದೆಯೇ?

ಭಾರತದ ಬಾಹ್ಯ ಸಾಲವು (external debt) ಕಳೆದ ಒಂಬತ್ತು ವರ್ಷಗಳಲ್ಲಿ 174% ರಷ್ಟು ಹೆಚ್ಚಾಗಿದೆ. ಅಂದರೆ, 2013–14 ಮತ್ತು 2022–23ರ ನಡುವೆ ಬಾಹ್ಯ ಸಾಲದಲ್ಲಿ 100% ಹೆಚ್ಚಳ ಕಂಡುಬಂದಿದೆ. ಬಾಹ್ಯ ಸಾಲವು ಸರ್ಕಾರದ ಒಟ್ಟು ಸಾಲದ ಒಂದು ಭಾಗವಾಗಿದೆ. 2014ರ ಮಾರ್ಚ್ 31ರಂದು ಕೇಂದ್ರ ಸರ್ಕಾರದ ಸಾಲವು 58.6 ಲಕ್ಷ ಕೋಟಿ ರೂ. (ಒಟ್ಟು ದೇಶೀಯ ಉತ್ಪನ್ನದ 52.2%) ಇತ್ತು, ಇದು 2024ರಲ್ಲಿ ಸುಮಾರು 205 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ಹೀಗಾಗಿ, 2024ರಲ್ಲಿ ಭಾರತದ ಸರ್ಕಾರದ ಸಾಲ–ಜಿಡಿಪಿ ಅನುಪಾತ (debt to GDP ratio) 81.29% ಕ್ಕೆ ತಲುಪಿದೆ. ಇದರರ್ಥ, ಪ್ರಧಾನಿ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರವು "ವಿಕಸಿತ ಭಾರತ"ವನ್ನು ನಿರ್ಮಿಸುವ ಭರದಲ್ಲಿ 2014ರಿಂದೀಚೆಗೆ ಭಾರತದ ಜನಸಂಖ್ಯೆಯನ್ನು ನಾಲ್ಕು ಪಟ್ಟು ಹೆಚ್ಚು ಸಾಲದಲ್ಲಿ ಮುಳುಗಿಸಿದೆ.

ಮತ್ತೊಂದೆಡೆ, ಆಡಳಿತಾರೂಢ ಸರ್ಕಾರದ ಪ್ರಕಾರ ಭಾರತವು ಗಮನಾರ್ಹ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತಿದ್ದರೂ, ಭಾರತದ ಸುಮಾರು 130 ಕೋಟಿ ಜನಸಂಖ್ಯೆಯ ಪೈಕಿ ಸುಮಾರು 60% ಜನರು ವಿಶ್ವಬ್ಯಾಂಕಿನ ಬಡತನ ರೇಖೆಯ (World Bank's median poverty line) ಪ್ರಕಾರ ದಿನಕ್ಕೆ 250 ರೂ.ಗಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ ಎಂದು ವರದಿಯಾಗಿದೆ. ಮತ್ತು 21% ಅಥವಾ 25 ಕೋಟಿಗೂ ಹೆಚ್ಚು ಜನರು ದಿನಕ್ಕೆ 166 ರೂ.ಗಿಂತ ಕಡಿಮೆ ಆದಾಯದಲ್ಲಿ ಬದುಕುಳಿದಿದ್ದಾರೆ.

ನಿರುದ್ಯೋಗವು ಉತ್ತುಂಗವನ್ನು ತಲುಪಿದೆ. ರಾಜಸ್ಥಾನದಲ್ಲಿ 53,749 ಗುಮಾಸ್ತ ಹುದ್ದೆಗಳಿಗೆ ಪಿಎಚ್‌ಡಿ, ಎಂಬಿಎ, ಕಾನೂನು ಪದವೀಧರರು ಮತ್ತು ಸಿವಿಲ್ ಸೇವಾ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವವರು ಸೇರಿದಂತೆ 24.76 ಲಕ್ಷಕ್ಕೂ ಹೆಚ್ಚು ಜನರು ಅರ್ಜಿ ಸಲ್ಲಿಸಿದ್ದಾರೆ. ಒಂದು ಮಾಧ್ಯಮ ವರದಿಯ ಪ್ರಕಾರ, ಉತ್ತರ ಪ್ರದೇಶದ ಪೊಲೀಸರಲ್ಲಿ ಮೆಸೆಂಜರ್‌ಗಳ 62 ಹುದ್ದೆಗಳಿಗೆ 3,700 ಪಿಎಚ್‌ಡಿ ಪದವೀಧರರು, 50,000 ಪದವೀಧರರು, 28,000 ಸ್ನಾತಕೋತ್ತರ ಪದವೀಧರರು ಅರ್ಜಿ ಸಲ್ಲಿಸಿದ್ದಾರೆ. ಈ ಹುದ್ದೆಗೆ ಕನಿಷ್ಠ ಐದನೇ ತರಗತಿಯ ಅರ್ಹತೆ ಸಾಕಾಗಿತ್ತು. ಪಶ್ಚಿಮ ಬಂಗಾಳದಲ್ಲಿ ಸ್ನಾತಕೋತ್ತರ ಪದವೀಧರರು ಶವಾಗಾರ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವುದು ಕಂಡುಬಂದಿದೆ. ಇನ್ನೊಂದೆಡೆ, ಸಾಮಾನ್ಯ ಜನರ ಕೊಳ್ಳುವ ಶಕ್ತಿ ಪ್ರತಿ ಗಂಟೆಯೂ ಕುಸಿಯುತ್ತಿದೆ.

ಹಾಗಾದರೆ, 4 ಟ್ರಿಲಿಯನ್ ಆರ್ಥಿಕತೆಯು ಶ್ರಮಜೀವಿ ಭಾರತೀಯರ ಯಾವುದೇ ಮೂಲಭೂತ ಸಮಸ್ಯೆಗೆ ಪರಿಹಾರ ಒದಗಿಸಿಲ್ಲ. ಬದಲಿಗೆ, ಅವರ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಹೀಗಿರುವಾಗ, ಜಿಡಿಪಿ ಬೆಳವಣಿಗೆಯ ಬಗ್ಗೆ ಅಥವಾ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವ ಓಟದ ಬಗ್ಗೆ ಸಂಭ್ರಮಿಸಲು ಏನಿದೆ?

ಇನ್ನೊಂದೆಡೆ, ಆಡಳಿತಾರೂಢರ ದೃಷ್ಟಿಕೋನದಿಂದ ನೋಡಿದರೆ ಪರಿಸ್ಥಿತಿ ಎಷ್ಟು ಆಶಾದಾಯಕವಾಗಿದೆ? ರಾಷ್ಟ್ರೀಯ ದತ್ತಾಂಶ ಕಚೇರಿಯ (NSO) ಪ್ರಕಾರ, ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯ ದರವು (Rate of industrial production) 2.7% ಕ್ಕೆ ಇಳಿದಿದೆ. ಮಾರುಕಟ್ಟೆಯಲ್ಲಿನ ಬೇಡಿಕೆಯನ್ನು ಅವಲಂಬಿಸಿ ಕೈಗಾರಿಕಾ ಉತ್ಪಾದನೆ ನಿರ್ಧಾರವಾಗುತ್ತದೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞರೊಬ್ಬರು ಒಪ್ಪಿಕೊಂಡಿದ್ದಾರೆ. ಆದರೆ, ಜನರಲ್ಲಿ ಕೊಳ್ಳುವ ಶಕ್ತಿ ಇಲ್ಲದ ಕಾರಣ ಬೇಡಿಕೆ ಕುಸಿಯುತ್ತಿದೆ.

ಭಾರತದಲ್ಲಿನ ನೇರ ವಿದೇಶಿ ಹೂಡಿಕೆ (FDI) ಆತಂಕಕಾರಿ ಮಟ್ಟಕ್ಕೆ ಇಳಿದಿದೆ. ಇದು ವಿದೇಶಿ ಉದ್ಯಮಿಗಳಿಗೆ ಭಾರತದಲ್ಲಿ ಯಾವುದೇ ಭವಿಷ್ಯವಿಲ್ಲ ಎಂಬುದನ್ನು ಸೂಚಿಸುತ್ತದೆ. ಭಾರತೀಯ ಕಾರ್ಪೊರೇಟ್‌ಗಳು ಸಹ ಯಾವುದೇ ಹೊಸ ಹೂಡಿಕೆ ಮಾಡಲು ಹಿಂಜರಿಯುತ್ತಿದ್ದಾರೆ. ಸಂಗ್ರಹವಾದ ಬಂಡವಾಳವನ್ನು ಊಹಾತ್ಮಕ ಷೇರು ಮಾರುಕಟ್ಟೆಗೆ ಪಂಪ್ ಮಾಡಲಾಗುತ್ತದೆ. ಇದು ಕೃತಕ ಏರಿಕೆಯನ್ನು ಉತ್ತೇಜಿಸುತ್ತದೆ, ಆದರೆ ಇದು ಆರ್ಥಿಕ ಬೆಳವಣಿಗೆಯ ಸೂಚಕವಲ್ಲ, ಬದಲಿಗೆ ಅಸ್ವಸ್ಥತೆಯ ಸಂಕೇತ ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ.

2016ರ ನೋಟು ಅಮಾನ್ಯೀಕರಣದ ಸಂದರ್ಭದಲ್ಲಿ, ಪ್ರಧಾನಿ ಮೋದಿ ಅವರು ಕಪ್ಪು ಹಣವನ್ನು ಹೊರತರಲಾಗುತ್ತದೆ, ನಕಲಿ ನೋಟುಗಳು ಅಮಾನ್ಯವಾಗುತ್ತವೆ ಮತ್ತು ಭಯೋತ್ಪಾದಕರಿಗೆ ಹಣಕಾಸು ನೆರವು ನಿಲ್ಲುತ್ತದೆ ಎಂದು ಹೇಳಿಕೊಂಡಿದ್ದರು. ಇವುಗಳಲ್ಲಿ ಯಾವುದೂ ನಿಜವಾಗಲಿಲ್ಲ.

ಕಪ್ಪು ಹಣ (Blackmoney) ತಾಂಡವವಾಡುತ್ತಿದೆ. ಸಿಬಿಐನ ಮಾಜಿ ನಿರ್ದೇಶಕರೊಬ್ಬರು ಭಾರತದಲ್ಲಿನ ಒಟ್ಟು ಕಪ್ಪು ಹಣ ಸುಮಾರು 500 ಬಿಲಿಯನ್ ಡಾಲರ್ (43.5 ಲಕ್ಷ ಕೋಟಿ ರೂ.) ಎಂದು ಹೇಳಿದ್ದಾರೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪತ್ತೆಯಾದ 500 ರೂ. ಮುಖಬೆಲೆಯ ನಕಲಿ ನೋಟುಗಳ ಸಂಖ್ಯೆ 2023–24ರಲ್ಲಿ 85,711 ರಿಂದ 2024–25ರಲ್ಲಿ 1,17,722 ಕ್ಕೆ ವಾರ್ಷಿಕ 37.35 ಶೇಕಡಾ ಏರಿಕೆಯಾಗಿದೆ. ಇದು ಆರು ವರ್ಷಗಳಲ್ಲಿ (2020ರ ಆರ್ಥಿಕ ವರ್ಷದಿಂದ) ಅತಿ ಹೆಚ್ಚು ಎಂದು ಭಾರತೀಯ ರಿಸರ್ವ್ ಬ್ಯಾಂಕಿನ ವಾರ್ಷಿಕ ವರದಿ ಕಳೆದ ಮೇ ತಿಂಗಳಲ್ಲಿ ತೋರಿಸಿದೆ. ಮತ್ತು ಗೃಹ ವ್ಯವಹಾರಗಳ ರಾಜ್ಯ ಸಚಿವರು 2023ರ ಆಗಸ್ಟ್ 9ರಂದು ಲೋಕಸಭೆಯಲ್ಲಿ, ಕಾಶ್ಮೀರ ಒಂದರಲ್ಲಿಯೇ 2018 ಮತ್ತು 2023ರ ಜುಲೈ 31ರ ನಡುವೆ 793 ಭಯೋತ್ಪಾದಕ ಹಿಂಸಾಚಾರ ಘಟನೆಗಳು ಸಂಭವಿಸಿವೆ ಎಂದು ಹೇಳಿಕೆ ನೀಡಿದ್ದಾರೆ. ಹಾಗಾದರೆ, 105 ಕ್ಕೂ ಹೆಚ್ಚು ಅಮೂಲ್ಯ ಜೀವಗಳನ್ನು ಬಲಿ ತೆಗೆದುಕೊಂಡು ಮತ್ತು 99% ಕರೆನ್ಸಿಗಳನ್ನು ಬ್ಯಾಂಕಿನಲ್ಲಿ ಜಮಾ ಮಾಡಿದ ನೋಟು ಅಮಾನ್ಯೀಕರಣದ ರಾತ್ರೋರಾತ್ರಿಯ ಘೋಷಣೆಯ ಪ್ರಯೋಜನವೇನು?

ಕೈಗಾರಿಕಾ ಉತ್ಪಾದನೆ ಕುಸಿದಿದೆ, ನಿರುದ್ಯೋಗ ಹೆಚ್ಚುತ್ತಿದೆ. ಜನರ ಆದಾಯ ಕುಗ್ಗುತ್ತಿದೆ, ಕೇವಲ ಕೈಗಾರಿಕಾ ದಿಗ್ಗಜರ ಮತ್ತು ಬೆರಳೆಣಿಕೆಯಷ್ಟು ಬಿಲಿಯನೇರ್‌ಗಳ, ಭ್ರಷ್ಟ ರಾಜಕಾರಣಿಗಳ ಮತ್ತು ಅಧಿಕಾರಿಗಳ ಖಜಾನೆಗಳು 5 ಟ್ರಿಲಿಯನ್ ಆರ್ಥಿಕತೆಯತ್ತ ಸಾಗುವ ಹಾದಿಯಲ್ಲಿ ಹಿಗ್ಗುತ್ತಿವೆ. ಆಡಳಿತಾರೂಢ ಬಿಜೆಪಿ ಮತ್ತು ಪ್ರಧಾನಿ ಮೋದಿಗೆ ಆಪ್ತರೆಂದು ಹೇಳಲಾದ ಕೆಲವರು ವಂಚಕ ಉದ್ಯಮಿಗಳು 69,000 ಕೋಟಿ ರೂ. ಬ್ಯಾಂಕ್ ಸಾಲಗಳನ್ನು ಮರುಪಾವತಿಸದೆ ದೇಶದಿಂದ ಪರಾರಿಯಾಗಿದ್ದಾರೆ. ಈ ಸುಸ್ತಿದಾರ ಉದ್ಯಮಿಗಳು ವಿದೇಶಗಳಲ್ಲಿ ಮಜಾ ಮಾಡುತ್ತಿರುವುದರಿಂದ ಆ ಹಣವನ್ನು ವಸೂಲಿ ಮಾಡುವುದರ ಬಗ್ಗೆ ಆರ್‌ಬಿಐ ಭರವಸೆ ಕಳೆದುಕೊಂಡಿದೆ ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ, ಕಳೆದ 11 ವರ್ಷಗಳಲ್ಲಿ ಬ್ಯಾಂಕ್ ವಂಚನೆಗಳಲ್ಲಿ 416% ರಷ್ಟು ಭಾರಿ ಹೆಚ್ಚಳ ವಾಗಿದ್ದು 6,36,992 ಕೋಟಿ ರೂ.ಗಳನ್ನು ತಲುಪಿದೆ ಎಂದು ವರದಿಯಾಗಿವೆ.

ಹಾಗಾದರೆ, ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲು ದಿಟ್ಟ ಹೆಜ್ಜೆಗಳನ್ನು ಇಡುತ್ತಿದೆ ಎಂದು ನಿರಂತರ ತುತ್ತೂರಿ ಊದುವುದರ ಕುರಿತು ಯಾವ ತೀರ್ಮಾನಕ್ಕೆ ಬರಬಹುದು? ಇದು ಭಾರತದ ದುಡಿಯುವ ಜನರ ಗೋರಿಗಳ ಮೇಲೆ ಕಟ್ಟುವ ಅರಮನೆಯಲ್ಲವೇ?

## ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ

3ನೇ ಪುಟದಿಂದ

ಹಗಲು–ರಾತ್ರಿ, ಬಿಸಿಲು–ಮಳೆ–ಚಳಿಯಲ್ಲೂ ಸತತವಾಗಿ ಕಾರ್ಯ ನಿರ್ವಹಿಸುತ್ತಾ, ರಾಜ್ಯದಲ್ಲಿ ಮಾತೃ ಮರಣ, ಶಿಶು ಮರಣ ಸಂಖ್ಯೆಯ ಕಡಿತ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಆಶಾಗಳು ಈಗ ಮಳೆಯಲ್ಲೂ ಬೀದಿಗೆ ಬರುವಂತೆ ಸರ್ಕಾರ ಮಾಡಿದೆ. ಇವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಕಾರ್ಮಿಕ ದೃಷ್ಟಿಕೋನ ಸರ್ಕಾರವನ್ನು ಆಗ್ರಹಿಸುತ್ತದೆ.






## ಮಹಾನ್ ಧರ್ಮನಿರಪೇಕ್ಷ ಮಾನವತಾವಾದಿ
## ಈಶ್ವರಚಂದ್ರ ವಿದ್ಯಾಸಾಗರ್ 134ನೇ ಸ್ಮರಣ ದಿನ


ಬೆಂಗಳೂರು


ದಾವಣಗೆರೆ


ಧಾರವಾಡ

ನವೋದಯದ ಹರಿಕಾರ, ಮಹಾನ್ ಮಾನವತಾವಾದಿ ಈಶ್ವರಚಂದ್ರ ವಿದ್ಯಾಸಾಗರ್ ಅವರ 134ನೇ ಸ್ಮರಣ ದಿನ ಕಾರ್ಯಕ್ರಮವನ್ನು ಎಐಡಿಎಸ್‌ಓ ನೇತೃತ್ವದಲ್ಲಿ 2025ರ ಜುಲೈ 29ರಂದು ರಾಜ್ಯಾದ್ಯಂತ ವಿವಿಧ ಜಿಲ್ಲೆಗಳ ಪ್ರಮುಖ ಮೈದಾನ-ಪಾರ್ಕ್‌ಗಳಲ್ಲಿ ಮತ್ತು ಶಾಲಾ-ಕಾಲೇಜುಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಅತ್ಯಂತ ಸ್ಫೂರ್ತಿಯಿಂದ ಆಚರಿಸಲಾಯಿತು. ಅವರಿಗೆ ಗೌರವ ಸಲ್ಲಿಸಿ ಶಿಕ್ಷಣ-ಸಂಸ್ಕೃತಿ-ಮಾನವತೆ ಉಳಿಸಲು ಸಂಕಲ್ಪ ತೆಗೆದುಕೊಳ್ಳಲಾಯಿತು.



ಬಳ್ಳಾರಿ : ಮಾತನಾಡುತ್ತಿರುವವರು ಎಐಎಂಎಸ್‌ಎಸ್ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಮಂಜುಳ ಎಂ.ಎನ್.


ನೆರೆದ ಸಭಿಕರು

ವಿಧವಾವಿವಾಹ ಮತ್ತು ಮಹಿಳಾ ಶಿಕ್ಷಣಕ್ಕಾಗಿ ಹಾಗೂ ಬಾಲ್ಯವಿವಾಹ ತಡೆಗಟ್ಟಲು ಅವಿಶ್ರಾಂತವಾಗಿ ಶ್ರಮಿಸಿದ ವಿದ್ಯಾಸಾಗರ್ ಅವರನ್ನು ಎಐಎಂಎಸ್‌ಎಸ್ ನೇತೃತ್ವದಲ್ಲಿ ಸಂಘಟಿತವಾದ ಹಲವಾರು ಕಾರ್ಯಕ್ರಮಗಳಲ್ಲಿ ಶ್ರದ್ಧೆಯಿಂದ ಸ್ಮರಿಸಲಾಯಿತು.

## ವಿಮಾನಯಾನ ಸಚಿವಾಲಯ........?

2ನೇ ಪುಟದಿಂದ ಊಹೆ ಮಾತ್ರದಿಂದಲೇ ವಿಮಾನಯಾನವು ನಡೆಯುತ್ತದೆ. ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನವನ್ನು ಅದಕ್ಕೂ ಮೊದಲು ದೇಶೀಯ ದೆಹಲಿ-ಅಹಮದಾಬಾದ್ ವಿಮಾನವಾಗಿ ಬಳಸಲಾಗುತ್ತಿತ್ತು. ಮಾಧ್ಯಮಗಳಲ್ಲಿ ಉಲ್ಲೇಖಿಸಿದಂತೆ, ಆ ವಿಮಾನದ ಪ್ರಯಾಣಿಕರೊಬ್ಬರು, ಹವಾನಿಯಂತ್ರಣ ಕಾರ್ಯನಿರ್ವಹಿಸುತ್ತಿಲ್ಲ, ಕ್ಯಾಬಿನ್‌ನಲ್ಲಿರುವ ಟಿವಿ ಪರದೆಗಳು, ಕರೆ ಬಟನ್‌ಗಳು ಮತ್ತು ದೀಪಗಳು ಪ್ರಯಾಣದ ಸಮಯದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ವರದಿ ಮಾಡಿದ್ದಾರೆ. ಎಸಿ ವೈಫಲ್ಯವು, ಎಂಜಿನ್‌ನ ಅಧಿಕ ಬಿಸಿಯಾಗುವಿಕೆ, ಯಾಂತ್ರಿಕ ಸಮಸ್ಯೆಗಳು ಮತ್ತಿತರ ಅಸಮರ್ಪಕ ಕಾರ್ಯ ನಿರ್ವಹಣೆಯನ್ನು ಸೂಚಿಸುತ್ತದೆ. ಹಾಗಿರುವಾಗ, ದೀರ್ಘ ಪ್ರಯಾಣದ ಅಂತರರಾಷ್ಟ್ರೀಯ ವಿಮಾನ ಹಾರಾಟಕ್ಕೆ ಅನುಮತಿ ನೀಡುವ ಮೊದಲು ಹಿಂದಿನ ಹಾರಾಟದಲ್ಲಿ ಗಮನಿಸಲಾದ ಅಂತಹ ದೋಷವನ್ನು ಸರಿಪಡಿಸಲಾಗಿತ್ತೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಎರಡನೆಯದಾಗಿ, ವಿಶಾಲ ವಿಮಾನಗಳ ನಿರ್ವಹಣೆಗಾಗಿ ಏರ್ ಇಂಡಿಯಾ ಇಲ್ಲಿಯವರೆಗೂ ಸೇವೆ ಪಡೆಯುತ್ತಿದ್ದ ಟರ್ಕಿ ದೇಶದ ವಿಮಾನಯಾನ ಸೇವಾ ಪೂರೈಕೆದಾರ 'ಟರ್ಕಿಶ್ ಟೆಕ್ನಿಕ್' ಕಂಪನಿಯನ್ನು ದಿಢೀರನೆ ಕೈಬಿಟ್ಟು ಅದರ ಸ್ಥಾನದಲ್ಲಿ, ಈ ನಿರ್ವಹಣೆ ಕಾರ್ಯವನ್ನು ಎಐ ಇಂಜಿನಿಯರಿಂಗ್ ಸರ್ವೀಸಸ್ ಲಿಮಿಟೆಡ್ (ಎಐಇಎಸ್‌ಎಲ್) ಮತ್ತು ಸಿಂಗಾಪುರ್ ಏರ್ಲೈನ್ಸ್‌ನ ಅಂಗಸಂಸ್ಥೆಯಾದ ಎಸ್‌ಐಎ ಇಂಜಿನಿಯರಿಂಗ್ ಕಂಪನಿಗೆ ವಹಿಸಿದ್ದನ್ನು ಗಮನಿಸಬೇಕು. ವಿಮಾನವು ಟೇಕ್ ಆಫ್ ಆದ ತಕ್ಷಣ 626 ಅಡಿ ಎತ್ತರಕ್ಕೂ ಏರದೆ ಅದರ ಎರಡೂ ಎಂಜಿನ್‌ಗಳು ಏಕಕಾಲದಲ್ಲಿ ವಿಫಲವಾಗಿ ಅಪಘಾತಕ್ಕೀಡಾದ ಅಪಘಾತದ ಸ್ವರೂಪವು ವಿಮಾನದ ನಿರ್ವಹಣೆ ಕುರಿತು ಬಹುದೊಡ್ಡ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಸಾರಿಗೆ ವಲಯದ ಖಾಸಗೀಕರಣವು ಪ್ರಯಾಣಿಕರಿಗೆ ಒಂದು ಶಾಪವಾಗಿದೆಯೇ ಹೊರತು ವರದಾನವಲ್ಲ ಎಂದು ಮತ್ತೆಮತ್ತೆ ಸಾಬೀತಾಗುತ್ತಿದೆ. ಲಾಭದ ದುರಾಸೆಯು ಮತ್ತೇನನ್ನೂ ಪರಿಗಣಿಸಲು ಬಿಡುವುದಿಲ್ಲ. ಇದು ಶಿಥಿಲಾವಸ್ಥೆಯಲ್ಲಿರುವ ಪ್ರತಿಗಾಮಿ ಬಂಡವಾಳಶಾಹಿಯ ಮುಖವೇ ಆಗಿದೆ.

### ಪರಿಸಮಾಪ್ತಿ

ಏರ್ ಇಂಡಿಯಾ ವಿಮಾನ ಅಪಘಾತದ ನಂತರ, ಇಡೀ ದೇಶವು ಆಳವಾದ ದುಃಖದಲ್ಲಿ ಮುಳುಗಿತು. ಡ್ರೀಮ್‌ಲೈನರ್ ಅಪಘಾತದಿಂದಾಗಿ ಕನಸುಗಳು ಭಗ್ನಗೊಂಡ ಬಲಿಪಶುಗಳಿಗಾಗಿ ಎಲ್ಲರೂ ಶೋಕಿಸಿದರು. ಗಲಭೆ ಪೀಡಿತ ಮಣಿಪುರ ಅಥವಾ ಭಯೋತ್ಪಾದಕ ಪೀಡಿತ ಕಾಶ್ಮೀರಕ್ಕೆ ಭೇಟಿ ನೀಡದ ಪ್ರಧಾನಿ ಮೋದಿ, ವಿಮಾನ ಅಪಘಾತದ ಸ್ಥಳಕ್ಕೆ ಭೇಟಿ ನೀಡಿ ಅಪಘಾತಕ್ಕೀಡಾದ ವಿಮಾನದ ಕೆಳಗೆ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ಅಲ್ಲಿ ಅವರು ನಾಗರಿಕರ ಬಗ್ಗೆ ತಮಗೆ ಎಷ್ಟೊಂದು ಭಾವನೆ ಇದೆ ಎಂದು ನಟಿಸುತ್ತಾ ಅಲ್ಲಿಯ ಪರಿಸ್ಥಿತಿ ಮತ್ತು ಪರಿಹಾರ ಕಾರ್ಯಗಳನ್ನು ಪರಿಶೀಲಿಸುವ ಸಭೆಯಲ್ಲಿ ಭಾಗವಹಿಸಿದರು. ಈ ಕಾರ್ಯತತ್ಪರತೆಯನ್ನು ಮೊದಲೇ ತೋರಿಸಿದ್ದರೆ, ಅಪಘಾತವನ್ನು ತಡೆಯಬಹುದಿತ್ತು!

## ಬಳ್ಳಾರಿ: ಜನತೆಯ ಸಮಾವೇಶ

ಬಳ್ಳಾರಿ ನಗರದಲ್ಲಿ ಸಮರ್ಪಕವಾದ ಮೂಲ ಸೌಲಭ್ಯಗಳಿಲ್ಲದೆ ನಗರದ ಜನತೆ ದಿನನಿತ್ಯ ಹತ್ತಾರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ನಗರದಲ್ಲಿ ಭೀಕರ ಸಮಸ್ಯೆಗಳಿದ್ದರೂ ಮಹಾನಗರ ಪಾಲಿಕೆ, ಜಿಲ್ಲಾಡಳಿತ ಹಾಗೂ ಸರ್ಕಾರ, ಚಿರನಿದ್ರೆಯಲ್ಲಿವೆ.

ಮಹಾನಗರ ಪಾಲಿಕೆ, ಜಿಲ್ಲಾಡಳಿತ ಮತ್ತು ಸರ್ಕಾರದ ನಿರ್ಲಕ್ಷತೆ ಹಾಗೂ ನಿಷ್ಕಾಳಜಿಯ ವಿರುದ್ಧ ಬಳ್ಳಾರಿ ನಾಗರಿಕ ಹೋರಾಟ ಸಮಿತಿಯು ದಿನಾಂಕ 27.07.2025ರಂದು ಜನತೆಯ ಬೃಹತ್ ಸಮಾವೇಶವನ್ನು ಸಂಘಟಿಸಿತು

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ನಗರದ ಹಿರಿಯ ವಕೀಲರಾದ ಶ್ರೀ ಆರ್.ಪಾಂಡು, ನಗರಸಭೆಯ ನಿರ್ಲಕ್ಷತೆಯನ್ನು ತೀವ್ರವಾಗಿ ಖಂಡಿಸಿದರು. ಸಮಿತಿಯ ಸಂಚಾಲಕರಾದ ಸೋಮಶೇಖರಗೌಡ, ಸಲಹೆಗಾರರಾದ ಶ್ರೀ ನರಸಣ್ಣ, ಹಿರಿಯ ಸದಸ್ಯರಾದ ಶ್ರೀ ಮುರ್ತುಜಾಸಾಬ್ ಮಾತನಾಡಿದರು. ಸಮಿತಿಗೆ ಹೊಸ ಸದಸ್ಯರು ಸೇರ್ಪಡೆಗೊಂಡು ವಿಸ್ತರಣೆಯಾದ 47 ಸದಸ್ಯರ ಹೊಸ ಸಮಿತಿಯ ರಚನೆಯನ್ನು ಘೋಷಣೆ ಮಾಡಲಾಯಿತು.








# ಕೃತಕ ಬುದ್ಧಿಮತ್ತೆಯ ಸವಾಲುಗಳು

ಇತ್ತೀಚಿನ ದಿನಗಳಲ್ಲಿ ಎಐ, ಅಂದರೆ ಕೃತಕ ಬುದ್ಧಿಮತ್ತೆಯ ಬಗ್ಗೆ ವ್ಯಾಪಕ ಚರ್ಚೆಗಳೆದ್ದಿವೆ. ಈ ಹೊಸ ತಂತ್ರಜ್ಞಾನವು ಕ್ರಾಂತಿಕಾರಕ ರೀತಿಯಲ್ಲಿ ಭಿನ್ನ ಕ್ಷೇತ್ರಗಳನ್ನು ಪ್ರಭಾವಿಸುತ್ತಿದೆ. ಮುಂದಿನ ದಿನಗಳಲ್ಲಿ ಇದು ಮಾನವ ನಾಗರಿಕತೆಯ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎನ್ನುವುದರ ಬಗ್ಗೆ ಭಿನ್ನ ಭಿನ್ನ ನೆಲೆಯಲ್ಲಿ ವಿಶ್ಲೇಷಿಸಲಾಗುತ್ತಿದೆ. ಒಟ್ಟಾರೆಯಾಗಿ ಇದರಿಂದ ಮಾನವತೆಗೆ ಒಳಿತಾಗುವುದೋ ಅಥವಾ ಕಂಟಕವಾಗುವುದೋ ಎನ್ನುವುದೇ ಈಗ ಸಮಾಜಮುಖಿ ಚಿಂತಕರ ಸದ್ಯದ ಆತಂಕ. ಈಗಾಗಲೇ ಬಂಡವಾಳಶಾಹಿ ಸಾಮ್ರಾಜ್ಯಶಾಹಿ ಶಕ್ತಿಗಳು ಜನಸಾಮಾನ್ಯರ ಹಿತಾಸಕ್ತಿಯ ಬಗ್ಗೆ ಕಿಂಚಿತ್ತೂ ಯೋಚಿಸದೆ ಈ ಹೊಸ ತಂತ್ರಜ್ಞಾನವನ್ನು ತಮ್ಮ ಲಾಭಕ್ಕಾಗಿ ಬಳಸತೊಡಗಿವೆ. ಒಂದೆಡೆ ಎಐ ಬಳಕೆಯಿಂದಾಗಿ ಹೆಚ್ಚೆಚ್ಚು ನೌಕರರು ತಮ್ಮ ಉದ್ಯೋಗ ಕಳೆದುಕೊಳ್ಳುವ ಸಂಭವನೀಯತೆ ಇದ್ದರೆ, ಇನ್ನೊಂದೆಡೆ, ಯುದ್ಧಗಳಲ್ಲಿಯೂ ಇದರ ದುರ್ಬಳಕೆ ಆರಂಭಗೊಂಡಿದ್ದು, ಮಾರಣಹೋಮ ನಡೆಸಲು ಮತ್ತೊಂದು ಹತ್ಯಾರ ಆಳುವ ವರ್ಗಕ್ಕೆ ಸಿಕ್ಕಿದಂತಾಗಿದೆ. ಅಲ್ಲದೆ, ಮನುಷ್ಯನ ಮಿದುಳಿನ ಕಾರ್ಯಚಟುವಟಿಕೆಗಳ ಮೇಲೆ ಇದು ಯಾವ ಪ್ರಭಾವ ಬೀರಬಹುದೆಂಬುದರ ಬಗ್ಗೆಯೂ ವಿಜ್ಞಾನಿಗಳು, ಮಾನಸಿಕ ತಜ್ಞರು ಚಿಂತಿಸತೊಡಗಿದ್ದಾರೆ ಹಾಗೂ ಆತಂಕ ವ್ಯಕ್ತಪಡಿಸಿದ್ದಾರೆ.

### ಸಾಮ್ರಾಜ್ಯಶಾಹಿ ಯುದ್ಧೋಪಕರಣದಲ್ಲಿ ಎಐ ದುರ್ಬಳಕೆ – ಮಾನವತೆಗೆ ಕಂಟಕಪ್ರಾಯ

ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲೊಂದು ವಿಡಿಯೋ ವೈರಲ್ ಆಯಿತು. ದೈತ್ಯ ಬಹುರಾಷ್ಟ್ರೀಯ ಟೆಕ್ ಕಂಪನಿಯಾದ ಮೈಕ್ರೊಸಾಫ್ಟ್ ಉದ್ಯೋಗಿಯೊಬ್ಬರು ಕಂಪನಿಯ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರತಿಭಟಿಸಿದ ವಿಡಿಯೋ ಅದು. ಮೈಕ್ರೊಸಾಫ್ಟ್ ಎಐ ಸಿಇಒ ಮುಸ್ತಾಫ ಸುಲೆಮಾನ್‌ರವರು ಕಂಪನಿಯ ಹೊಸ ಎಐ ಉತ್ಪನ್ನಗಳ ಬಗ್ಗೆ ವಿವರ ನೀಡುವ ಸಂದರ್ಭದಲ್ಲಿ, ಮಿಸ್ ಇಬ್ತಿಹಲ್ ಅಬೌಸಾದ್ ಎಂಬುವವರು, ವೇದಿಕೆಯ ಹತ್ತಿರ ನಡೆದು, "ಮಿಸ್ಟರ್ ಮುಸ್ತಾಫಾ, ನಾಚಿಕೆಯಾಗುವುದಿಲ್ಲವೇ? ಧಿಕ್ಕಾರ ನಿನಗೆ .. ಎಐಯನ್ನು ನರಮೇಧಕ್ಕಾಗಿ ಬಳಸುವುದನ್ನು ನಿಲ್ಲಿಸಿ. ನೀವು ಯುದ್ಧದ ಲಾಭಪಿಪಾಸುಗಳು. ಇಡೀ ಮೈಕ್ರೊಸಾಫ್ಟ್ ಕೈಯ ಮೇಲೆ ರಕ್ತವಿದೆ." ಎಂದರು. ಸೆಕ್ಯುರಿಟಿಯವರು ಅವರನ್ನು ಹೊರತಳ್ಳಿದಾಗಲೂ ಧೃತಿಗೆಡದೆ ಧೈರ್ಯದಿಂದ ಘೋಷಿಸಿದರು: "ನೀವು ಎಐಯನ್ನು ಒಳಿತಿಗಾಗಿ ಬಳಸುವ ಉದ್ದೇಶವಿದೆಯೆಂದು ಹೇಳಿಕೊಳ್ಳುತ್ತೀರಿ. ಆದರೆ, ಮೈಕ್ರೊಸಾಫ್ಟ್ ಎಐ ಅಸ್ತ್ರಗಳನ್ನು ಇಸ್ರೇಲಿ ಮಿಲಿಟರಿಗೆ ಮಾರಾಟಮಾಡುತ್ತಿದೆ. ಐವತ್ತು ಸಾವಿರ ಪ್ಯಾಲೆಸ್ತೀನಿಯರು ಸತ್ತಿದ್ದಾರೆ." ಅವರು ಅಲ್ಲಿಗೇ ನಿಲ್ಲಿಸದೆ, ವೇದಿಕೆಯೆಡೆಗೆ ತಮ್ಮ ಸ್ಕಾರ್ಫನ್ನು ಎಸೆದು, ಪ್ಯಾಲೆಸ್ತೀನಿಯರ ಪರ ಸಾಂಕೇತಿಕ ಬೆಂಬಲ ಜಗಜ್ಜಾಹೀರುಗೊಳಿಸಿದರು.

ಇಂಥಹುದೇ ಮತ್ತೊಂದು ಸಂಭ್ರಮಾಚರಣೆಯ ಸಂದರ್ಭ. ಅಧ್ಯಕ್ಷತೆಯನ್ನು ಬಿಲ್ ಗೇಟ್ಸ್ ಹಾಗೂ ಸತ್ಯ ನಡೆಲ್ಲ ವಹಿಸಿಕೊಂಡಿದ್ದರು. ಅವರ ಸಮ್ಮುಖದಲ್ಲೇ, ಮಿಸ್ ವನಿಯಾ ಅಗರ್ವಾಲ್ ಎಂಬ ಭಾರತೀಯ ಮೂಲದ ಎಂಜಿನಿಯರ್, "ಮೈಕ್ರೊಸಾಫ್ಟ್ ತಾಂತ್ರಿಕ ನೆರವಿನಿಂದ ಗಾಜಾಪಟ್ಟಿಯಲ್ಲಿ 50 ಸಾವಿರ ಪ್ಯಾಲೆಸ್ತೀನಿಯರ ಹತ್ಯೆ ನಡೆದಿದೆ. ಅವರ ನೆತ್ತರಿನ ಮೇಲೆ ನೀವು ನಡೆಸುತ್ತಿರುವ ಸಂಭ್ರಮಾಚರಣೆಗೆ ಧಿಕ್ಕಾರವಿರಲಿ!" ಎಂದು ದನಿ ಎತ್ತರಿಸಿ ಪ್ರತಿಭಟಿಸಿದರು. ಇಲ್ಲಿಯೂ ಸಹ ವನಿಯಾ ಅಗರ್ವಾಲರನ್ನು ಬಲವಂತವಾಗಿ ಸಭೆಯಿಂದ ಹೊರಹಾಕಲಾಯಿತು. ಕೆಲವೇ ದಿನಗಳಲ್ಲಿ, ಈ ಇಬ್ಬರೂ ಉದ್ಯೋಗಿಗಳನ್ನು, ಮೈಕ್ರೊಸಾಫ್ಟ್ ತೆಗೆದುಹಾಕಿತು. ಈ ಘಟನೆಗಳು ಜರುಗುವ ಮುನ್ನ, ಹಳೆಯ ಮತ್ತು ಈಗಿನ ಉದ್ಯೋಗಿಗಳು, ಒಂದು ಪ್ರತಿಭಟನಾ ರ್‍ಯಾಲಿ ಸಂಘಟಿಸಿದ್ದರು. ಅವರು ಹಿಡಿದಿದ್ದ ಬ್ಯಾನರಿನಲ್ಲಿ ಈ ರೀತಿ ಭಿತ್ತಿಸಲಾಗಿತ್ತು: "ನರಮೇಧಕ್ಕೆ ಮೈಕ್ರೋಸಾಫ್ಟ್‌ನ ಕುಮ್ಮಕ್ಕಿದೆ". ಈ ಎಲ್ಲಾ ಬೆಳವಣಿಗೆಗಳ ಮೂಲಕ, ಹೇಗೆ ಸಾಮ್ರಾಜ್ಯಶಾಹಿ ಶಕ್ತಿಗಳು ಬಹುರಾಷ್ಟ್ರೀಯ ಕಂಪನಿಗಳ ಜತೆಗೂಡಿ, ಎಐಯನ್ನು ಯುದ್ಧಗಳಲ್ಲಿ ಬಳಸುತ್ತಾರೆ ಎಂಬುದು ಮುನ್ನೆಲೆಗೆ ಬರುವಂತಾಯಿತು.

ಅನೇಕ ಅಧ್ಯಯನಗಳಲ್ಲಿ, ರಷ್ಯಾ – ಉಕ್ರೇನ್ ಕದನ, ಇಸ್ರೇಲ್ ಗಾಜಾದ ಮೇಲೆ ನಡೆಸಿದ ವೈಮಾನಿಕ ದಾಳಿಗಳಲ್ಲೆಲ್ಲಾ ಎಐ ಚಾಲಿತ ಸ್ವಾಯತ್ತ ವೈಮಾನಿಕ ವ್ಯವಸ್ಥೆ (autonomous Aerial systems (UAS) ಯನ್ನು ವ್ಯಾಪಕವಾಗಿ ಬಳಸಿದ್ದರ ಬಗ್ಗೆ ಉಲ್ಲೇಖಗಳಿವೆ. ಇತ್ತೀಚೆಗೆ ಪಾಕಿಸ್ತಾನದ ಮೇಲೆ ಭಾರತದ ಮಿಲಿಟರಿ ದಾಳಿಯಲ್ಲಿಯೂ ಎಐ ಬಳಕೆಯಾಗಿದೆ, ವಿಶೇಷವಾಗಿ, ಗುರಿಯ ನಿಖರತೆ ಹಾಗೂ ಸಮನ್ವಯಿತ ದಾಳಿಗಳಲ್ಲಿ ಎಐ ಪ್ರಮುಖಪಾತ್ರ ವಹಿಸಿದೆ. ಎಐ ಚಾಲಿತ ಡ್ರೋನ್‌ಗಳು ಹಾಗೂ ಮಾನವರಹಿತ ವಾಹನಗಳು, ಕಣ್ಗಾವಲು ಮತ್ತು ಯುದ್ಧ ಕಾರ್ಯಾಚರಣೆಗಳನ್ನು ಮಾಡಬಲ್ಲವು. ಅದೂ ಕನಿಷ್ಠ ಮಾನವ ಹಸ್ತಕ್ಷೇಪದೊಂದಿಗೆ. ಇಷ್ಟೇ ಅಲ್ಲದೆ, ಸ್ಯಾಟಲೈಟ್ ತೆಗೆದ ಚಿತ್ರಗಳು, ಸೆನ್ಸಾರ್‌ಗಳು ಮುಂತಾದ ಭಿನ್ನ ಮೂಲಗಳಿಂದ ಬಂದ ರಾಶಿ ರಾಶಿ ದತ್ತಾಂಶವನ್ನು ಅದು ಅರಗಿಸಿಕೊಂಡು ಉಪಯೋಗಿಸಿಕೊಳ್ಳಬಲ್ಲದು. ಇದರಿಂದಾಗಿ, ರಿಯಲ್–ಟೈಂ ಒಳನೋಟಗಳು ಸಿಕ್ಕುತ್ತವೆ ಮತ್ತು ಸಾಂದರ್ಭಿಕ ಅರಿವೂ ತೀಕ್ಷ್ಣವಾಗುತ್ತದೆ. ಒಟ್ಟಾರೆಯಾಗಿ, ಯುದ್ಧಗಳಲ್ಲಿ, ಕಂಡರಿಯದ ರೀತಿಯಲ್ಲಿ ಅದು ಅತ್ಯಂತ ಮುಂದುವರೆದ ಸಾಮರ್ಥ್ಯಗಳನ್ನು ಒದಗಿಸುತ್ತದೆ. ಗಾಜಾದ ಮೇಲೆ ಎಐ ಸಿಸ್ಟೆಮ್‌ಗಳಾದ, 'ಗಾಸ್ಪೆಲ್' ಮತ್ತು 'ಲ್ಯಾವೆಂಡರ್' ಬಳಸಲಾಗಿದೆಯಂತೆ. ಇಂತಹ ಎಷ್ಟೋ ಎಐ ಸಿಸ್ಟಮ್‌ಗಳು ಇಂದು ಯುದ್ಧಪಿಪಾಸು ಬಂಡವಾಳಶಾಹಿ ಶಕ್ತಿಗಳ ಬಳಕೆಗಾಗಿ ಕಾದುಕುಳಿತಿವೆ.

ಹಿಂದೆ, ಬಂಡವಾಳಶಾಹಿಗಳು, ಯುದ್ಧ ಮೂಲಸೌಕರ್ಯಗಳು, ಅಂದರೆ, ಬಂದೂಕು, ಟ್ಯಾಂಕು, ಬಾಂಬುಗಳು, ವಿಮಾನ, ಮಿಸೈಲುಗಳು ಇತ್ಯಾದಿಗಳ ಮೇಲೆ ಹಣ ವ್ಯಯಿಸುತ್ತಿದ್ದರೆ, ಈಗ, ಎಐ ಬಂದಮೇಲೆ, ಸಾಮ್ರಾಜ್ಯಶಾಹಿಗಳು ತಮ್ಮ ಯುದ್ಧಚರ್ಯೆಯನ್ನು ಬದಲಿಸಿ, ಈ ಹೊಸ ತಂತ್ರಜ್ಞಾನದ ಮೇಲೆ ಹಣ ಸುರಿಯುತ್ತಿದ್ದಾರೆ.

ಒಂದು ಅಧ್ಯಯನದ ಪ್ರಕಾರ, ಅಮೆರಿಕಾದಲ್ಲಿ, 2022 ರಿಂದ 2023 ಅವಧಿ, ಅಂದರೆ ಕೇವಲ ಒಂದು ವರ್ಷದಲ್ಲಿ, ಎಐ ಮೇಲೆ ಹೂಡಿದ ಹಣ ಮೂರು ಪಟ್ಟು ಹೆಚ್ಚಾಗಿದೆ! ಈ ಸಂದರ್ಭದಲ್ಲಿ ಅಮೆರಿಕಾ ಹೊಸ ಉಪಕ್ರಮಗಳನ್ನು ಯೋಜಿಸಿದೆ. ಅಜುರ್ ಎನ್ನುವ ಮೈಕ್ರೊಸಾಫ್ಟ್ ಕ್ಲೌಡ್ ಕಂಪ್ಯೂಟಿಂಗ್ ವೇದಿಕೆಯನ್ನು ಕ್ಲೌಡ್ ದಾಸ್ತಾನಿಗಾಗಿ ನೇಮಿಸಿಕೊಂಡಿದೆ. ಗಾಜಾ ಮತ್ತು ಲೆಬನಾನ್ ಮೇಲೆ ಎಸಗಲಾದ ಬಾಂಬ್ ದಾಳಿಯಲ್ಲಿ, ನಿಖರವಾದ ಗುರಿಯನ್ನು ಗುರುತಿಸುವುದಕ್ಕೆ, ಮೈಕ್ರೊಸಾಫ್ಟ್ ಒದಗಿಸಿದ ಎಐ ಮಾಡಲ್‌ಅನ್ನು ಬಳಸಲಾಗಿದೆಯೆಂದು ತನಿಖಾ ವರದಿಗಳು ತಿಳಿಸುತ್ತವೆ. ಇದೇ ಕಾರಣಕ್ಕಾಗಿ, ಮೈಕ್ರೊಸಾಫ್ಟ್‌ನ ಮಾಜಿ ಮತ್ತು ಪ್ರಸಕ್ತ ಉದ್ಯೋಗಿಗಳು "ನೋ ಅಜುರ್ ಫಾರ್ ಅಪಾರ್ಥಿಯೇಡ್" ಎನ್ನುವ ಗುಂಪಿನ ಮೂಲಕ ಒಂದಾದ ಮೇಲೆ ಒಂದರಂತೆ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಕಂಪನಿಯ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರತಿಭಟನೆಯ ಬಿಸಿ ಮುಟ್ಟಿಸಿದ್ದು ಇದೇ ಗುಂಪಿನ ಪ್ರತಿಭಟನೆಯ ಭಾಗ.



ಪ್ರತಿಕ್ರಾಂತಿಯ ನಂತರ, ಅಮೆರಿಕಾದಂತೆ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಯಾಗಿ ಹೊರಹೊಮ್ಮಲು ಹವಣಿಸುತ್ತಿರುವ ಚೀನಾವೂ ಸಹ "ಮುಂದಿನ ಪೀಳಿಗೆಯ ಎಐ ಅಭಿವೃದ್ಧಿ ಯೋಜನೆ"ಯನ್ನು ರೂಪಿಸುತ್ತಿದೆ. ಮತ್ತು 2030ರ ಹೊತ್ತಿಗೆ ಎಐನಲ್ಲಿ ಜಗತ್ತಿನ ನಾಯಕನಾಗುವ ಆಕಾಂಕ್ಷೆಯನ್ನು ವ್ಯಕ್ತಪಡಿಸಿದೆ. ಹಾಗೆಯೇ ಮತ್ತೊಂದು ಸಾಮ್ರಾಜ್ಯಶಾಹಿ ರಾಷ್ಟ್ರ, ರಷ್ಯಾದ ಅಧ್ಯಕ್ಷ ಪುಟಿನ್, "ಎಐ ಕೇವಲ ರಷ್ಯಾ ಮಾತ್ರವಲ್ಲದೆ, ಇಡೀ ಮನುಕುಲದ ಭವಿಷ್ಯವಾಗಿದೆ. ಯಾರು ಈ ಕ್ಷೇತ್ರದಲ್ಲಿ ನಾಯಕರಾಗುತ್ತಾರೋ, ಅವರೇ ಜಗತ್ತನ್ನಾಳುವವರಾಗುತ್ತಾರೆ" ಎಂದರು. ಭಾರತವನ್ನೊಳಗೊಂಡಂತೆ, ಎಲ್ಲಾ ಬಂಡವಾಳಶಾಹಿ ದೇಶಗಳು ಈ ಸ್ಪರ್ಧೆಯಲ್ಲಿ ಬಿದ್ದಿದ್ದಾರೆ. ಮಾನವಕುಲದ ಒಳಿತು ಮಾತ್ರ ಅವರ ಆದ್ಯತೆಯ ಪಟ್ಟಿಯಲ್ಲಿಲ್ಲ.

### ಹೊಸ ತಂತ್ರಜ್ಞಾನವನ್ನು ಪರೀಕ್ಷಿಸಲು ಯುದ್ಧಭೂಮಿಯೇ ಪ್ರಯೋಗಾಲಯ!

ಎರಡನೆಯ ಜಾಗತಿಕ ಯುದ್ಧದ ಕೊನೆಯಲ್ಲಿ, ಹಿಟ್ಲರ್‌ನ ನಾಜಿ ಸೈನ್ಯವನ್ನು, ಮಹಾನ್ ಸ್ಟಾಲಿನ್ ನೇತೃತ್ವದ ಕೆಂಪು ಸೇನೆಯು ಮಣಿಸಿ ಯುದ್ಧದಲ್ಲಿ ಗೆಲ್ಲುತ್ತಿದ್ದಂತೆ, ಸಾಮ್ರಾಜ್ಯಶಾಹಿ ಅಮೇರಿಕಾ, ಆಗತಾನೆ ಅಭಿವೃದ್ಧಿ ಪಡಿಸಿದ ಅಣುಬಾಂಬನ್ನು ಪರೀಕ್ಷಿಸಲು ಈ ಸಂದರ್ಭವನ್ನು ಬಳಸಿಕೊಂಡಿತ್ತು! ಜಪಾನ್ ದೇಶದ ಹಿರೋಷಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಬಾಂಬುಗಳನ್ನು ಹಾಕಿ ಸಾವಿರಾರು ಮುಗ್ಧ ಜನತೆಯ ಮಾರಣಹೋಮಕ್ಕೆ ಕಾರಣವಾಯಿತು. ಈ ಕುಕೃತ್ಯಕ್ಕೆ ಬಹುವಾಗಿ ನೊಂದ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್, ವಿಜ್ಞಾನದ ಹೊಸ ಆವಿಷ್ಕಾರಗಳು, ಮನುಕುಲವನ್ನು ಮೇಲೆತ್ತುತ್ತವೆ ವಿನಃ ಹಾಳುಗೆಡವುದಿಲ್ಲವೆಂದು ನಂಬಿದ್ದೆ ಎಂದು ತೀವ್ರವಾದ ವಿಷಾದ ವ್ಯಕ್ತಪಡಿಸಿದರು. ಆದರೆ, ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ಇದ್ಯಾವುದನ್ನೂ ಕಿವಿಯಲ್ಲಿ ಹಾಕಿಕೊಳ್ಳದೆ, ಒಂದರ ಮೇಲೆ ಒಂದು, ಇನ್ನೂ ಹೆಚ್ಚು ಶಕ್ತಿಯುತ ಬಾಂಬುಗಳು, ಅಸ್ತ್ರಗಳನ್ನು ನಿರ್ಮಿಸತೊಡಗಿ, ತನ್ಮೂಲಕ ವಿಶ್ವವನ್ನು ತಮ್ಮ ಆಣತಿಯಲ್ಲಿಡಲು ಬಯಸಿದರು. ಪರಮಾಣು ಜಲಾಂತರ್ಯಾಮಿ ನೌಕೆಗಳು, ಖಂಡಾಂತರ ಬ್ಯಾಲಿಸ್ಟಿಕ್ ಮಿಸೈಲುಗಳು, ವಿಮಾನ ನಿರೋಧಕ ಮಿಸೈಲ್ ಸಿಸ್ಟಮ್ ಇತ್ಯಾದಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ನಿರ್ಮಿಸಿ, ಅವನ್ನು ಜಗತ್ತಿನ ವಿವಿಧೆಡೆ, ಸಾಮ್ರಾಜ್ಯಶಾಹಿಗಳೇ ಹುಟ್ಟುಹಾಕಿದ ಸ್ಥಳೀಯ ಮತ್ತು ಭಾಗಶಃ ಯುದ್ಧಗಳಲ್ಲಿ ಪ್ರಯೋಗಿಸಿ ಪರೀಕ್ಷಿಸತೊಡಗಿದ್ದಾರೆ. ಅಂತಹ ಒಂದು ತಾಜಾ ಉದಾಹರಣೆಯೆಂದರೆ, ಗಾಜಾ ಮೇಲೆ ನಡೆದ ಅಮಾನವೀಯ ದಾಳಿಯ ಮೂಲಕ, ಎಐ ತಂತ್ರಜ್ಞಾನದ ಪರೀಕ್ಷಾ ಪ್ರಕ್ರಿಯೆ.

ವಾಸ್ತವದಲ್ಲಿ, ಶಿಕ್ಷಣ, ಆರೋಗ್ಯ, ಸಂಪರ್ಕ, ಸಂಶೋಧನೆ ಇತ್ಯಾದಿ ಪ್ರತಿ ಕ್ಷೇತ್ರವನ್ನೂ ಎಐ ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. ಎಐ ಕ್ರಮಾವಳಿಗಳು (ಅಲ್ಗಾರಿದಮ್ಸ್) ಅಗಾಧ ಪ್ರಮಾಣದ ದತ್ತಾಂಶಗಳನ್ನು ಮಥಿಸಿ, ವಿಶ್ಲೇಷಿಸಿ, ಅತ್ಯಂತ ತ್ವರಿತವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸಬಲ್ಲವು. ಆದರೆ, ಇತರ ಎಲ್ಲ ಹೊಸ ತಾಂತ್ರಿಕ ಬೆಳವಣಿಗೆಗಳಂತೆ, ಎಐಯೂ ಸಹ ಬಂಡವಾಳಿಗರ ಲಾಭದ ದುರುದ್ದೇಶದಿಂದ ಚಾಲಿತವಾಗಿದೆ ಮತ್ತು ನಿಯಂತ್ರಿತಗೊಂಡಿದೆ. ಇದು ಒಂದು ಆತಂಕಾರಿ ಬೆಳವಣಿಗೆಯೇ ಆಗಿದೆ.

### ಗ್ರಹಿಕೆ–ಚಿಂತನೆ–ತಿಳುವಳಿಕೆ (Cognition) ಮತ್ತು ವಿಶ್ಲೇಷಣೆಗಳ ಮೇಲೆ ಎಐ ಪ್ರಭಾವ : ಅಧ್ಯಯನಗಳ ಸಾರ

ಎಐ ಬಳಕೆ ಎಲ್ಲೆಡೆ ವ್ಯಾಪಿಸಿದಂತೆ, ಪಾರಂಪರಿಕವಾಗಿ ಮಿದುಳಿನ ಮಹತ್ವದ ಕೆಲಸಗಳಾದ ಗ್ರಹಿಕೆ, ಚಿಂತನೆ, ವಿಶ್ಲೇಷಣೆ ಮುಂತಾದ ಕಾಗ್ನಿಷನ್ ಅಥವಾ ಒಟ್ಟು ಅರಿವಿನ ಸಂಬಂಧಿತ ಕೆಲಸಗಳನ್ನು ಈಗ ಎಐ ಕೂಡ ಮಾಡುತ್ತಿದೆ. ಇದರಿಂದಾಗಿ ಮಾನವ ಮಿದುಳಿನ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗಬಹುದೆಂಬ ಉದ್ದೇಶವನ್ನಿಟ್ಟುಕೊಂಡು ಕೆಲವು ಅಧ್ಯಯನಗಳು ನಡೆದಿವೆ. ಎಂಐಟಿ ಮೀಡಿಯ ಲ್ಯಾಬ್‌ನವರು ನಡೆಸಿದ ಅಧ್ಯಯನ ಪ್ರಮುಖ ಪತ್ರಿಕೆಗಳ ಗಮನ ಸೆಳೆದಿದ್ದು, ಕೆಲವೊಂದು ಆಘಾತಕಾರಿ ಫಲಿತಾಂಶಗಳನ್ನು ಅದು ಹೊರಹಾಕಿದೆ. 54 ಕಾಲೇಜು ವಿದ್ಯಾರ್ಥಿಗಳು ಮೂರು ಗುಂಪುಗಳಾಗಿ ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದರು. ಎಲ್ಲರಿಗೂ ಪ್ರಬಂಧ ಬರೆಯುವ ಕೆಲಸಕೊಟ್ಟಿದ್ದು, ಅವರು ಬರೆಯುವಾಗ ಮಿದುಳಿನ ಇಇಜಿ ಮತ್ತಿತರ ಪರೀಕ್ಷೆ ನಡೆಸಲಾಯಿತು. ChatGPT ಗುಂಪು ಅತ್ಯಂತ ಕಡಿಮೆ ಪ್ರಮಾಣದ ಮಿದುಳನ್ನು ಬಳಸಿತ್ತು, ನಂತರದಲ್ಲಿ ಗೂಗಲ್ ಗುಂಪು. 'ಕೇವಲ ಮಿದುಳು' ಗುಂಪಿನವರು ಅತಿ ಹೆಚ್ಚು ನರ ಸಕ್ರಿಯತೆ ಮತ್ತು ಸಂಪರ್ಕವನ್ನು ಪ್ರದರ್ಶಿಸಿದರು. ChatGPT ಗುಂಪಿನವರು ಬರೆದ ಅದೇ ಪ್ರಬಂಧವನ್ನು ChatGPT ಉಪಯೋಗಿಸದೆ ಬರೆಯಲು ಹೇಳಿದಾಗ, ಅವರು ಸ್ವಲ್ಪ ಮಾತ್ರವೇ ನೆನಪಿಟ್ಟುಕೊಂಡಿದ್ದು ಕಂಡುಬಂತು. ChatGPT ಬಳಸಿ ಬರೆದ ನಿಬಂಧಗಳನ್ನು ಪರಿಶೀಲಿಸಿದ ಅಧ್ಯಾಪಕರು, ಅವು ಸತ್ವಹೀನ ಮತ್ತು ಒಂದೇ ತರಹದ್ದಾಗಿದ್ದವು ಎನ್ನುವ ಅಭಿಪ್ರಾಯ ಪಟ್ಟಿದ್ದಾರೆ. ಈ ಅಧ್ಯಯನದಿಂದ ಹೆಚ್ಚೆಚ್ಚು ವಿಮರ್ಶಾತ್ಮಕ ಚಿಂತನೆಗಳ ಹೊರೆಯನ್ನು ಯಂತ್ರಗಳ ಮೇಲೆ ವರ್ಗಾಯಿಸಿದಾಗ, ಮಿದುಳಿನ ಕೆಲಸಕ್ಕೆ ಬೇಕಾದ ಮುಖ್ಯವಾದ ಉದ್ದೀಪಕ ಅಥವಾ ಪ್ರೇರಕ ಅಂಶವೇ ಇಲ್ಲವಾಗುವುದಿಲ್ಲವೇ ಎಂಬ ಪ್ರಶ್ನೆಮೂಡುತ್ತದೆ. ಇದು ಪ್ರಮುಖವಾಗಿ ಕಲಿಕೆ ಮತ್ತು ಶಿಕ್ಷಣ ರಂಗದಲ್ಲಿ ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದೆ. ಇದಲ್ಲದೆ, ಇನ್ನೂ ಅನೇಕ ಅಧ್ಯಯನಗಳು ಮಾನವ ಮಿದುಳಿನ ಕಾರ್ಯಕ್ಷಮತೆಯ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಗಮನ ಸೆಳೆಯುತ್ತಿದ್ದು, ಎಐ ಎಂಬ ತಂತ್ರಜ್ಞಾನವನ್ನು ಬಂಡವಾಳಿಗರ ಲಾಭೋದ್ದೇಶದ ಹಿಡಿತದಿಂದ ಬಿಡಿಸಿ, ಮಾನವನ ಮತ್ತು ಮಾನವ ನಾಗರಿಕತೆಗೆ ಪೂರಕವಾಗುವ ತಂತ್ರಜ್ಞಾನವಾಗಿ ಮಾರ್ಪಾಡುಗೊಳಿಸುವ ಅಗತ್ಯತೆ ಕಂಡುಬಂದಿದೆ.

# ಗಾಜ಼ಾದಲ್ಲಿ ನಡೆಯುತ್ತಿರುವುದು ಭೀಕರ ನರಮೇಧ

## ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ಲೇಖನಕ್ಕೊಂದು ಪ್ರತ್ಯುತ್ತರ

*ಅಮೇರಿಕಾದ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯು ಜುಲೈ 4 ರಂದು "ಗಾಜಾ ಮೇಲೆ ಇಸ್ರೇಲ್ ದಾಳಿಯನ್ನು ನರಮೇಧವೆಂದು ಕರೆಯುವುದು ಏಕೆ ತಪ್ಪಾಗುತ್ತದೆ?" ಎಂದು ಸಂಪಾದಕೀಯ ಲೇಖನವನ್ನು ಪ್ರಕಟಿಸಿತು. ಇದಕ್ಕೆ ಪ್ರತ್ಯುತ್ತರವಾಗಿ 'ನಮ್ಮ ಕಾಲದ ಅಪರಾಧ: ಗಾಜಾ ಮೇಲೆ ಇಸ್ರೇಲ್ ದಾಳಿ ನರಮೇಧದ ವ್ಯಾಖ್ಯಾನಕ್ಕೆ ಸರಿಹೊಂದುವುದೇಕೆ?' ಎನ್ನುವ ತುರ್ತಾದ ಹಾಗೂ ನಿರ್ಭಯ ಅಭಿಪ್ರಾಯವಿರುವ ಲೇಖನ, ನಮ್ಮ ಪಕ್ಷದ ಇಂಗ್ಲಿಷ್ ಮುಖಪತ್ರಿಕೆ 'ಪ್ರೊಲೆಟೇರಿಯನ್ ಎರಾ'ದಲ್ಲಿ (ಸಂಪುಟ 58, ಸಂಚಿಕೆ 21) ಪ್ರಕಟವಾಯಿತು. ಅದರ ಅನುವಾದವನ್ನು, ಕಾರ್ಮಿಕ ದೃಷ್ಟಿಕೋನ ಪ್ರಕಟಿಸುತ್ತಿದೆ.*

ಗಾಜ಼ಾದಲ್ಲಿ ಬಾಂಬ್‌ಗಳ ಸುರಿಮಳೆಯಾಗುತ್ತಿದ್ದಂತೆ ನಾಗರಿಕತೆಯ ಕೇಂದ್ರ ನೆಲಸಮವಾಯಿತು; ಕಾನೂನಿನ ನೆಪ ಹಾಗೂ ಮಾತಿನ ಕಸರತ್ತುಗಳಿಂದ ನೈತಿಕ, ರಾಜಕೀಯ ಹಾಗೂ ಅನುಭವಗಳ ವಾಸ್ತವ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಇದು ಯುದ್ಧವಲ್ಲ – ನರಮೇಧವನ್ನೇ ಗುರಿಯಾಗಿಸಿಕೊಂಡ ವಿನಾಶ.

ಗಾಜ಼ಾದ ಸುತ್ತು ಬೂದಿಯಾದ ಆಸ್ಪತ್ರೆಗಳ ಮತ್ತು ಶಾಲಾ ಆವರಣಗಳ ಅವಶೇಷಗಳನ್ನು ನೋಡಿದಾಗ 'ನರಮೇಧ' ಎನ್ನುವುದು ಅತಿಶಯೋಕ್ತಿಯಲ್ಲ. ಸೌಮ್ಯಪದಗಳಲ್ಲಿ ವಿವರಿಸಲಾಗದ ಕಟು ವಾಸ್ತವದ ಘೋರ ಚಿತ್ರಣವಾಗಿ ಆ ಪದಗಳು ಗಾಜ಼ಾದ ಸಮಾಧಿಗಳಿಂದ ಹುಟ್ಟಿ ಬಂದಿವೆ. ಹಾಗಿದ್ದರೂ ಕೂಡ, ಇತ್ತೀಚಿಗೆ 'ಗಾಜ಼ಾದ ಮೇಲೆ ಇಸ್ರೇಲ್ ದಾಳಿಯನ್ನು ನರಮೇಧವೆಂದು ಕರೆಯುವುದು ಏಕೆ ತಪ್ಪಾಗುತ್ತದೆ' ಎನ್ನುವ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ಲೇಖನದಲ್ಲಿ ಕೊಟ್ಟಿರುವ ವಾದಗಳು, ಕೂದಲು ಸೀಳುವ ಕಾನೂನಿನ ವಾದದ, ರಾಜಕೀಯವಾಗಿ ದಿಕ್ಸೂಚಿಯ ಮತ್ತು ಸಾಂಸ್ಕೃತಿಕ ಆರೋಪಗಳ ಬೆಟ್ಟದಡಿಯಲ್ಲಿ ಸತ್ಯವನ್ನು ಹೂತು ಬಿಡುವ ಪ್ರಯತ್ನಗಳಷ್ಟೇ!

ಆದರೆ ನಾವು ವಿಷಯಗಳನ್ನು ಸ್ಪಷ್ಟವಾಗಿ ಹೇಳೋಣ: ಗಾಜ಼ಾದಲ್ಲಿ ನಡೆದದ್ದು ನರಮೇಧವಲ್ಲದಿದ್ದರೆ ನರಮೇಧವೆನ್ನುವ ಪದಕ್ಕೆ ಅರ್ಥವೇ ಇಲ್ಲ. ಇಂತಹ ವಿಷಯಗಳಲ್ಲಿ ಅತ್ಯುನ್ನತ ಕಾನೂನಿನ ಅಥಾರಿಟಿಯಾದ ಅಂತರರಾಷ್ಟ್ರೀಯ ನ್ಯಾಯಾಲಯವು (ಐಸಿಜೆ) ಇಸ್ರೇಲ್ ವಿರುದ್ಧ ದಕ್ಷಿಣ ಆಫ್ರಿಕಾ 2024ರ ಜನವರಿಯಲ್ಲಿ ನರಮೇಧ ಸಮಾವೇಶದ (1948ರಲ್ಲಿ ವಿಶ್ವಸಂಸ್ಥೆ ಅಳವಡಿಸಿಕೊಂಡ ಅಂತರರಾಷ್ಟ್ರೀಯ ಒಪ್ಪಂದ) ಅಡಿಯಲ್ಲಿ ದಾಖಲಾದ ಪ್ರಕರಣದಲ್ಲಿ ನರಮೇಧ 'ಸಂಭವನೀಯ'ವೆಂದು ತೀರ್ಪು ನೀಡಿತು.

ಇದರ ಬದಲಿಗೆ ನಮಗೆ, ಮೂರು ಸುಳ್ಳುಗಳ ಆಧಾರದ ಮೇಲೆ ಸಮರ್ಥನೆಗಳು ಬರುತ್ತಿವೆ. ಒಂದು – ಪ್ಯಾಲೆಸ್ತೀನ್ ಸಂಕಟಗಳಿಗೆ ಹಮಾಸ್ ಸಂಘಟನೆಯ ಮೇಲೆ ಮಾತ್ರ ತಪ್ಪು ಹೊರಿಸಬೇಕು; ಎರಡು – ಇಸ್ರೇಲ್ ದಾಳಿಗೆ ಮಿಲಿಟರಿ ಉದ್ದೇಶವಿತ್ತೇ ಹೊರತು ನರಮೇಧವಲ್ಲ; ಮೂರು – ನರಮೇಧದ ಆರೋಪಗಳೆಲ್ಲಾ ರಾಜಕೀಯ ಪ್ರೇರಿತವಾದವು ಮತ್ತು ಯಹೂದಿ ವಿರೋಧಿ ಭಾವನೆಗಳು.

### ಹಮಾಸ್ ಹೆಸರಿನಲ್ಲಿ ಸಮರ್ಥನೆ – ನೈತಿಕ ದಿವಾಳಿತನ

ಹಮಾಸ್ ಸಂಘಟನೆ ಅಕ್ಟೋಬರ್ 7, 2023 ರಂದು ಇಸ್ರೇಲ್ ವಿರುದ್ಧ ಮಾಡಿದ 'ಘೋರ ದಾಳಿ'ಯೇ ಗಾಜ಼ಾದ ಮೇಲಿನ ಮುಂದಿನ ಆಕ್ರಮಣಗಳಿಗೆ ಕಾರಣವೆಂದು ಇಸ್ರೇಲ್ ದಾಳಿಯ ಸಮರ್ಥಕರು ಸಮರ್ಥಿಸಿಕೊಳ್ಳುತ್ತಾರೆ. ಅಮೇರಿಕನ್ ಸಾಮ್ರಾಜ್ಯವಾದದ ಬೆಂಬಲದೊಂದಿಗೆ ಜಿಯೊನಿಸ್ಟ್ ಇಸ್ರೇಲ್ ಹಲವು ದಶಕಗಳಿಂದ ಪ್ಯಾಲೆಸ್ತೇನಿಯರನ್ನು ದಮನ ಮಾಡುತ್ತಿದೆ; ಪ್ಯಾಲೆಸ್ತೀನ್ ಮೇಲೆ ರಾಸಾಯನಿಕ ಶಸ್ತ್ರಗಳೂ ಸೇರಿದಂತೆ ಅತ್ಯಾಧುನಿಕ ಶಸ್ತ್ರಗಳಿಂದ ದಾಳಿ ಮಾಡುತ್ತಿದೆ. ಅವರು ಪ್ಯಾಲೆಸ್ತೀನ್ ಜನಾಂಗವನ್ನೇ ತೊಳೆದು ಹಾಕಿ, ಬಲಪ್ರಯೋಗದಿಂದ ನೆಲವನ್ನೆಲ್ಲಾ ಆಕ್ರಮಿಸಿಕೊಳ್ಳಲು ಹೊರಟಿದ್ದಾರೆ. ಅವರು ತಮ್ಮ ಕ್ರೂರ ಕೊಲೆಗಳನ್ನು ಸಮರ್ಥಿಸಿಕೊಂಡರೆ, ಕ್ರೌರ್ಯಕ್ಕೊಳಗಾದ, ಕೊಲೆಗೀಡಾಗುತ್ತಿರುವ ಪ್ಯಾಲೆಸ್ತೇನಿಯರಿಗೆ ತಮ್ಮನ್ನು ರಕ್ಷಿಸಿಕೊಳ್ಳುವ ಹಕ್ಕಿಲ್ಲವೆ? ಆದ್ದರಿಂದ ಪ್ರತೀಕಾರವಿದೆ; ಹಾಗಾದರೆ ಅದನ್ನೇ ನೆಪ ಮಾಡಿಕೊಂಡು ಪ್ಯಾಲೆಸ್ತೀನ್ ಮೇಲೆ ಅದರ ಹತ್ತರಷ್ಟು ಮಿಲಿಟರಿ ದಾಳಿ ಮಾಡುವುದನ್ನು ಸಮರ್ಥಿಸಿಕೊಳ್ಳಬಹುದೆ? ಮಕ್ಕಳನ್ನು ನಿರ್ದಯವಾಗಿ ಕೊಲ್ಲುವ, ಇಡೀ ಇಡೀ ಕುಟುಂಬಗಳನ್ನೇ ಸರ್ವನಾಶ ಮಾಡುವ, ಆಸ್ಪತ್ರೆಗಳನ್ನು ನೆಲಸಮ ಮಾಡುವ, ಬೇರೆ ದೇಶಗಳಿಂದ ಬರುವ ಆಹಾರ ಪದಾರ್ಥ ಹಾಗೂ ಔಷಧಗಳನ್ನು, ನೆರವು ಹಾಗೂ ಪರಿಹಾರಗಳನ್ನು ನಿಲ್ಲಿಸುವ ಅಮಾನವೀಯ ಕುಕೃತ್ಯಗಳನ್ನು ನರಮೇಧವೆನ್ನದೆ ಬೇರೇನೆಂದು ಕರೆಯಬೇಕು?

ವಿಶ್ವಸಂಸ್ಥೆಯ ಮಾನವೀಯ ವಿಷಯಗಳ ಸಂಯೋಜನಾ ಕಚೇರಿಯ ಪ್ರಕಾರ ಮತ್ತು ಮಾನವ ಹಕ್ಕು ವೀಕ್ಷಣಾ ಹಾಗೂ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಘಟನೆಯ ಸ್ವತಂತ್ರ ಅಂದಾಜಿನ ಪ್ರಕಾರ, 2025ರ ಮೇ ತಿಂಗಳವರೆಗೆ 37,000ಕ್ಕೂ ಹೆಚ್ಚು ಪ್ಯಾಲೆಸ್ತೇನಿಯರು – ಹೆಚ್ಚಿನವರು ಮಹಿಳೆಯರು ಹಾಗೂ ಮಕ್ಕಳು ಸತ್ತಿದ್ದಾರೆ. ನಾಗರಿಕ ರಿಜಿಸ್ಟರ್‌ಗಳಿಂದ ಕುಟುಂಬ ಕುಟುಂಬಗಳನ್ನೇ ಅಳಿಸಿರುವಾಗ, ಉತ್ತರ ಗಾಜ಼ಾದಲ್ಲಿ ಒಂದೇ ಒಂದು ಶಾಲೆ ಇಲ್ಲದಿರುವಾಗ, ಹಸಿವು–ನೀರಡಿಕೆಗಳಿಂದ ಸಾಯುತ್ತಿರುವ ಜನರಿಗೆ ಆಹಾರ ಮತ್ತು ನೀರನ್ನು ವ್ಯವಸ್ಥಿತವಾಗಿ ನಿರಾಕರಿಸಿದಾಗ, ಅಂತಹ ಯುದ್ಧ ಅಪರಾಧವನ್ನು ನರಮೇಧ ಎನ್ನುವುದಕ್ಕಿಂತ ಚೆನ್ನಾಗಿ ವಿವರಿಸುವ ಇನ್ನೊಂದು ಪದವಿದೆಯೇ?

### ನರಮೇಧವೆಂದರೆ ಹೆಣಗಳ ಲೆಕ್ಕವಲ್ಲ – ಅದೊಂದು ಉದ್ದೇಶ

ವಿಶ್ವಸಂಸ್ಥೆಯ ನರಮೇಧ ಸಮಾವೇಶದ ವಿಧಿ 11 ಪ್ರಕಾರ, ನರಮೇಧವೆಂದರೆ ಕೇವಲ ನಾಗರಿಕರ ಸಾಮೂಹಿಕ ಕೊಲೆಯಲ್ಲ. ಅದು, "ಒಂದು ರಾಷ್ಟ್ರವನ್ನು, ಸಮುದಾಯವನ್ನು, ಜನಾಂಗವನ್ನು ಅಥವಾ ಧಾರ್ಮಿಕ ಗುಂಪನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ನಾಶ ಮಾಡುವ ಉದ್ದೇಶ ಹೊಂದಿದ" ಕೃತ್ಯಗಳನ್ನು ಒಳಗೊಂಡಿದೆ.

ಇದರಲ್ಲಿ ಲೆಕ್ಕಾಚಾರದಿಂದ ಕೊಲೆ ಮಾಡಲು, ದೇಹಕ್ಕೆ ಮತ್ತು ಮನಸ್ಸಿಗೆ ಗಂಭೀರ ಹಿಂಸೆ ನೀಡಲು ಮತ್ತು ಜನರನ್ನು ಗುಂಪು ಗುಂಪಾಗಿ ನಾಶ ಮಾಡಲು ಬೇಕಾದ ಜೀವನದ ಪರಿಸ್ಥಿತಿಯನ್ನು ಸೃಷ್ಟಿಸುವುದೂ ಸೇರಿಕೊಂಡಿದೆ.

ಸ್ವತಃ ಇಸ್ರೇಲಿನ ಮಂತ್ರಿಯೇ ಗಾಜ಼ಾವನ್ನು 'ಅಳಿಸಿ ಹಾಕುವ' ಮಾತುಗಳನ್ನು ಆಡುತ್ತಿರುವಾಗ ಅವರ ಉದ್ದೇಶಕ್ಕೆ ಅದಕ್ಕಿಂತ ಹೆಚ್ಚಿನ ನೇರ ಪುರಾವೆ ಬೇಕೆ? ಹಣಕಾಸು ಸಚಿವ ಹೆಜ಼ಾಲೆಲ್ ಸ್ಮೊಟ್ರಿಚ್ 2023 ರ ನವೆಂಬರ್‌ನಲ್ಲಿ 'ಗಾಜ಼ಾವನ್ನು ನಿರ್ಮೂಲನೆ ಮಾಡಬೇಕು' ಎಂದು ಘೋಷಿಸಿದನು. ಪರಂಪರೆಯ ಸಚಿವ ಅಮಿಚಾಯ್ ಎಲಿಯಾಹು ಗಾಜ಼ಾ ಮೇಲೆ ನ್ಯೂಕ್ಲಿಯರ್ ಬಾಂಬ್ ಉಪಯೋಗಿಸಬೇಕೆಂದು ಸಾರ್ವಜನಿಕವಾಗಿ ಹೇಳಿದನು. ಇದು ಅಚಾನಕ್ಕಾಗಿ ಬಂದಿರುವ ಮಾತುಗಳಲ್ಲ. ಅದು ವ್ಯವಸ್ಥಿತವಾಗಿ ಮಾನವೀಯ ನೆರವುಗಳನ್ನು ತಡೆಹಿಡಿದ, ನಾಗರಿಕ ಸೌಲಭ್ಯಗಳನ್ನು ಹಾಳುಗೆಡವಿದ, ಕುಟುಂಬಗಳಿಗೆ ನೇರ–ಗುರಿ ಮಾಡಿ ಬಾಂಬ್ ದಾಳಿ ನಡೆಸಿದ ಜಿಯೊನಿಸ್ಟ್ ಕ್ಯಾಬಿನೆಟ್‌ನ ಸೈದ್ಧಾಂತಿಕ ಒಮ್ಮತದ ಪ್ರತಿಬಿಂಬ.

'ಉದ್ದೇಶ'ವನ್ನು ಸಂಕುಚಿತ, ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸಬೇಕೆಂಬ ವಾಷಿಂಗ್ಟನ್ ಪೋಸ್ಟ್‌ನ ಒತ್ತಾಯವು, ಹೇಗೆ ಸಂರಚನಾ ನರಮೇಧವು ಒಂದು ಲಿಖಿತ ಆದೇಶದ ಬದಲು ರಾಜ್ಯಯಂತ್ರದ ಸರಣಿ ಹಿಂಸೆಯಾಗಿ ಮತ್ತು ಸೈದ್ಧಾಂತಿಕ ಅಮಾನುಷವಾಗಿ ಕೆಲಸ ಮಾಡುತ್ತದೆಯೆನ್ನುವುದನ್ನು ನಿರ್ಲಕ್ಷಿಸುತ್ತದೆ.

### ಸಂಸ್ಕೃತಿ ಹಾಗೂ ನಾಗರಿಕತೆಯನ್ನು ಅಳಿಸಿ ಹಾಕುವುದೂ ಸಹ ನರಮೇಧ

ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯು 'ಸಾಂಸ್ಕೃತಿಕ ನರಮೇಧ'ವೆಂದು ಹೇಳುವುದು ಅತಿಯಾಯಿತೆಂದು ಅದನ್ನು ಮೂಲೆಗೆ ತಳ್ಳುತ್ತಿದೆ. ಗಾಜ಼ಾದಲ್ಲಿ ನೆಲಕ್ಕುರುಳಿದ ವಿಶ್ವವಿದ್ಯಾನಿಲಯಗಳು, ಸಂಗ್ರಹಾಲಯಗಳು, ಧಾರ್ಮಿಕ ಸಂಸ್ಥೆಗಳು ಮತ್ತು ವೈದ್ಯಕೀಯ ಕೇಂದ್ರಗಳು – ಇವೆಲ್ಲವೂ ನರಮೇಧ ಸಮಾವೇಶದ ಸಾರಾಂಶದ ಪ್ರಕಾರವೇ ಜನರ ಸಾಂಸ್ಕೃತಿಕ ಅಸ್ತಿತ್ವಗಳು. ಅಲ್–ಅಜ಼ರ್ ವಿಶ್ವವಿದ್ಯಾನಿಲಯ, ಗಾಜ಼ಾದ ಪ್ರಾಚೀನ ಮಸೀದಿಗಳ ನೆಲಸಮ ಮತ್ತು ನೂರಾರು ಕಲಾವಿದರ, ಪತ್ರಕರ್ತರ ಹಾಗೂ ಬುದ್ಧಿಜೀವಿಗಳ ಕೊಲೆಗಳು ಪ್ರಾಸಂಗಿಕವಾಗಿ ನಡೆದದ್ದಲ್ಲ.

ಬೋಸ್ನಿಯಾದಲ್ಲಿ ನಡೆದ ಅಂತರ್ಯುದ್ಧದ ಪ್ರಕರಣದಲ್ಲಿ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು ಯಾವುದೇ ಸಾಂಸ್ಕೃತಿಕ ಕೇಂದ್ರಗಳ ನಾಶ ಮತ್ತು ಒಂದು ಪ್ರದೇಶದ ಸಮುದಾಯದ ಜನಾಂಗೀಯ ಮನೋಸ್ಥಿತಿಯನ್ನು ಖಾಯಂ ಬದಲಾವಣೆ ಮಾಡಲು ಜನರನ್ನು ಬಲವಂತ ಮಾಡುವುದು ನರಮೇಧವೆಂದು ತೀರ್ಪು ನೀಡಿದೆ.

### ಪುರಾವೆಗಳು ಅಗಾಧವಾಗಿವೆ

ಗಾಜ಼ಾದ ಸಾವುನೋವುಗಳ ಸಂಖ್ಯೆಯ ವಿಶ್ವಾಸಾರ್ಹತೆಯ ಬಗ್ಗೆ ವಾಷಿಂಗ್ಟನ್ ಪೋಸ್ಟ್ ಅನುಮಾನ ವ್ಯಕ್ತಪಡಿಸುತ್ತಿದೆ; ಆದರೆ ಸೂಕ್ಷ್ಮ ಪರಿಶೀಲನೆಯ ಎದುರು ಅದರ ವಾದಗಳು ಮಣ್ಣು ಮುಕ್ಕುತ್ತಿವೆ. 'ದಿ ಲೆಸೆಟ್' – ಗೌರವಕ್ಕೆ ಪಾತ್ರವಾದ ಮತ್ತು ವೈಜ್ಞಾನಿಕ ಸಂಶೋಧನೆಗೆ ಹೆಸರುವಾಸಿಯಾದ ಪತ್ರಿಕೆಯು ದಾಖಲಾಗದ ಸಂಖ್ಯೆಯನ್ನೂ ಸೇರಿಸಿ ಒಟ್ಟು 1,86,000 ಸಾವುಗಳಾಗಿವೆಯೆಂದು ಅಂದಾಜು ಮಾಡಿದೆ. ಬಹಳ ಕಾಲದಿಂದ ಇಸ್ರೇಲ್ ಗೆಳೆತನ ಹೊಂದಿರುವ ಅಮೆರಿಕನ್ ಸರ್ಕಾರಿ ಇಲಾಖೆಯು ಮಾನವ ಸಾವುಗಳು ದೊಡ್ಡ ಅನಾಹುತವೆಂದು ಒಪ್ಪಿಕೊಂಡಿದೆ. ಈಗ ಬರ, ನಿರ್ಜಲನ (ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದು) ಮತ್ತು ಚಿಕಿತ್ಸೆ ಸಿಗದ ಗಾಯಗಳು ಬಾಂಬಿಗಿಂತ ಹೆಚ್ಚಿನ ಜನರನ್ನು ಕೊಲ್ಲುತ್ತಿವೆ.

ವಿಧಿ ವಿಜ್ಞಾನದ ಭಾಷೆಯಲ್ಲಿ ಹೇಳುವುದಾದರೆ, ಇದು ನಿರೀಕ್ಷಿತ ಮತ್ತು ಆಹಾರ, ನೀರು, ವಿದ್ಯುತ್ ಮತ್ತು ವೈದ್ಯಕೀಯ ಚಿಕಿತ್ಸೆಗಳನ್ನು ಬೇಕೆಂದೇ ತಡೆಹಿಡಿದುದರ ಪರಿಣಾಮ. ವಿಶ್ವಸಂಸ್ಥೆಯ ವಿಶೇಷ ವರದಿಗಾರ ಫ್ರಾನ್ಸಿಯಾ ಅಲ್ಬನೆಸೆ ಗಮನಿಸಿದ್ದೇನೆಂದರೆ, ಇಸ್ರೇಲ್ ನಡೆಗಳು ಖಚಿತವಾಗಿ ನರಮೇಧದ ಆಚರಣೆಯಾಗಿವೆ: "ಸಂಪೂರ್ಣ ದಿಗ್ಬಂಧನ, ಜನತೆಯ ಸ್ಥಳಾಂತರ ಮತ್ತು ವಸತಿ ಸ್ಥಳಗಳ ಮೇಲೆ ದಾಳಿಗಳು ಮತ್ತು ಯುದ್ಧಾಸ್ತ್ರವಾಗಿ ಹಸಿವು."

ಇದು ಆಕಸ್ಮಿಕ ಹಾನಿಯಲ್ಲ. ಇದು ವಿನಾಶ ಮಾಡಲು ಬೇಕೆಂದೇ ಹೇರಿದ ಜೀವನ ಪರಿಸ್ಥಿತಿ.

### ಕಾನೂನು ಪ್ರಕ್ರಿಯೆ ಆರಂಭವಾಗಿದೆ

ವಿಶ್ವಸಂಸ್ಥೆಯ ಹಿಂದಿನ ಅಧಿಕಾರಿಗಳು 2023 ರಲ್ಲಿ 'ನರಮೇಧ' ಎಂಬ ಪದವನ್ನು ಉಪಯೋಗಿಸಲು ನಿರಾಕರಿಸಿದ್ದನ್ನು ವಾಷಿಂಗ್ಟನ್ ಪೋಸ್ಟ್ ಎತ್ತಿ ತೋರಿಸುತ್ತಿದೆ. ಆದರೆ, 'ನರಮೇಧ' ಹೌದೋ, ಅಲ್ಲವೋ ಎಂಬುದನ್ನು ನಿರ್ಧರಿಸುವವರು ಪತ್ರಕರ್ತರಲ್ಲ, ನ್ಯಾಯಾಲಯಗಳು. ಅಲ್ಲಿಂದಾಚೆಗೆ, ಯಾವುದೆಲ್ಲಾ ನರಮೇಧದ ಕೃತ್ಯಗಳೆಂದು ತೋರಿಸುವುದಕ್ಕೆ ಸಾಕಷ್ಟು ಪುರಾವೆಗಳನ್ನು ಅಂತರರಾಷ್ಟ್ರೀಯ ನ್ಯಾಯಾಲಯದ ಮುಂದಿಡಲಾಗಿದೆ.

ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯವು ಹಮಾಸ್ ನಾಯಕರ ಜೊತೆ ಬೆಂಜಮಿನ್ ನೇತನ್ಯಾಹು ಮತ್ತು ಯುವೊ ಗ್ಯಾಲಂಟ್ ಬಂಧನಕ್ಕೆ ವಾರಂಟ್ ಹೊರಡಿಸಿದೆ – ಈ ಸಮಾನ ನ್ಯಾಯವನ್ನು ವಾಷಿಂಗ್ಟನ್ ಪೋಸ್ಟ್ ಸುಮ್ಮನೆ ಕಡೆಗಣಿಸಿದೆ.

### ಯಹೂದಿ ವಿರೋಧಿ ಬಣ್ಣ ಹಚ್ಚುವುದು ಅಪಾಯಕಾರಿ ದಿಕ್ಸೂಚಿ!

ಅಂತಿಮವಾಗಿ, ವಾಷಿಂಗ್ಟನ್ ಪೋಸ್ಟ್ ಇಸ್ರೇಲ್ ವಿರುದ್ಧದ ಟೀಕೆಯನ್ನು ಯಹೂದಿ ವಿರೋಧಿಯೆಂದು ಬಣ್ಣ ಹಚ್ಚುವ ಅಪಾಯಕಾರಿ ಕೆಲಸಕ್ಕೆ ಕೈ ಹಾಕಿದೆ. ಇದು ಬೌದ್ಧಿಕ ಅಪ್ರಾಮಾಣಿಕತೆಯಷ್ಟೇ ಅಲ್ಲ, ಜೊತೆಗೆ ಅಪಾಯಕಾರಿ ಸಿನಿಕತನವೂ ಹೌದು. ಜಿಯೊನಿಸ್ಟ್ ರಾಷ್ಟ್ರೀಯವಾದವನ್ನು ಯಹೂದಿ ಅಸ್ತಿತ್ವಯೊಂದಿಗೆ ಒಂದುಗೂಡಿಸುವುದೆಂದರೆ, ಸರ್ಕಾರಿ ಹಿಂಸೆಗೆ ಯಹೂದಿವಾದದ ಕವಚ ತೊಡಿಸುವುದು ಎಂದರ್ಥ. ಇಸ್ರೇಲ್, ಅಮೆರಿಕಾ ಮತ್ತು ವಿಶ್ವದ ವಿವಿಧ ದೇಶಗಳಲ್ಲಿರುವ ಯಹೂದಿಗಳು ಯುದ್ಧದ ವಿರುದ್ಧ ಮಾತನಾಡಿದ್ದಾರೆ. ಜ್ಯೂಯಿಷ್ ವಾಯ್ಸ್ ಫಾರ್ ಪೀಸ್ (ಶಾಂತಿಗಾಗಿ ಯಹೂದಿ ಧ್ವನಿ), ಬಿ'ಸೆಲೆಮ್ ಮತ್ತು ಬ್ರೇಕಿಂಗ್ ದಿ ಸೈಲೆನ್ಸ್ (ಮೌನ ಮುರಿಯೋಣ), ಮುಂತಾದ ಸಂಘಟನೆಗಳು 'ನಮ್ಮ ಹೆಸರಿನಲ್ಲಿ ಗಾಜ಼ಾದಲ್ಲಿ ನರಮೇಧ ನಡೆಸಲಾಗಿದೆ ಮತ್ತು ಅದನ್ನು ಖಂಡಿಸುತ್ತೇವೆ' ಎಂದು ಘಂಟಾಘೋಷವಾಗಿ ಹೇಳಿವೆ.

ನಿಜವಾದ ಯಹೂದಿ ವಿರೋಧಿ ವಾದಗಳು ಬರುತ್ತಿವೆ ಮತ್ತು ಅದನ್ನು ವಿರೋಧಿಸಬೇಕು – ಆದರೆ ಅದರ ಆರೋಪಗಳಡಿಯಲ್ಲಿ ಪ್ಯಾಲೆಸ್ತೇನಿಯರನ್ನು ಹೂತು ಹಾಕುವ ಮೂಲಕ ಅಲ್ಲ. ನರಮೇಧವನ್ನು ದ್ವೇಷದ ಕೃತ್ಯವೆನ್ನದೆ, ಅದನ್ನು ನ್ಯಾಯಕ್ಕಾಗಿಯ ಕೂಗು ಎಂದು ಕರೆಯಬೇಕು ಎಂಬ ಸಲಹೆ, ನಾಜ಼ಿ ಹತ್ಯಾಕಾಂಡದ ನೆನಪು ಮತ್ತು ಅಂತರರಾಷ್ಟ್ರೀಯ ಕಾನೂನು – ಎರಡಕ್ಕೂ ಮಾಡಿದ ಅಪಮಾನ.

### ಸತ್ಯ ಒಪ್ಪಿಕೊಳ್ಳದೆ ಶಾಂತಿಯಿಲ್ಲ!

ಸತ್ಯವನ್ನು ಒಪ್ಪಿಕೊಳ್ಳದೆ ಗಾಜ಼ಾದಲ್ಲಿ ಶಾಂತಿ ನೆಲೆಸುವುದಿಲ್ಲ ಮತ್ತು ಸತ್ಯ ಬಹಳ ಕಹಿ. ಭಯೋತ್ಪಾದಕತೆಗೆ ಪ್ರತಿಕ್ರಿಯೆ ಎಂದು ಆರಂಭವಾದ ಪ್ಯಾಲೆಸ್ತೀನ್ ವಿರುದ್ಧದ ಯುದ್ಧ ಈಗ ಸರ್ಕಾರಿ ಪ್ರಾಯೋಜಿತ ಕಗ್ಗೊಲೆಯಾಗಿದೆ. ನಮ್ಮ ಮುಂದೆ ಬಹಿರಂಗಗೊಳ್ಳುತ್ತಿರುವುದು ಕೇವಲ ಯುದ್ಧವಲ್ಲ; ಅದು ವ್ಯವಸ್ಥಿತವಾಗಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ದೈಹಿಕವಾಗಿ – ಜನರ ಬದುಕುವ ಹಕ್ಕುಗಳನ್ನೆಲ್ಲಾ ಕಸಿದುಕೊಳ್ಳುವುದು. ಇತಿಹಾಸ ಮೌನದಲ್ಲಿ ಮರೆಯಾಗುವುದಿಲ್ಲ. ನರಮೇಧ ಎನ್ನುವ ಆರೋಪವು ಕೇವಲ ಸಾಧ್ಯತೆಯಲ್ಲ, ಅದು ಕಟು ವಾಸ್ತವ. ಈಗ ಗಾಜ಼ಾದ ಅತ್ಯಂತ ಕರಾಳ ಸಮಯದಲ್ಲಿ ನರಮೇಧ ಎಂದು ಹೇಳಲು ನಿರಾಕರಿಸಿದರೆ, ನಾವು ಆ ಪದವನ್ನು ಇತಿಹಾಸದಲ್ಲಿ ಮರೆಮಾಚಿದಂತೆ ಮತ್ತು ಅಂತರರಾಷ್ಟ್ರೀಯ ನ್ಯಾಯವನ್ನು ಕೈಬಿಟ್ಟಂತೆ.

## ಜಾಗತಿಕ ಪ್ರತಿಭಟನೆ:

# ಯುದ್ಧವನ್ನು ನಿಲ್ಲಿಸಲು ಅಮೇರಿಕ–ಇಸ್ರೇಲ್ ಮೇಲೆ ಒತ್ತಡ

ಅಮೇರಿಕ ಮತ್ತು ಇಸ್ರೇಲ್ ನಾಗರಿಕರು ಸೇರಿದಂತೆ ವಿಶ್ವದಾದ್ಯಂತ ಯುದ್ಧ ವಿರೋಧಿ, ಶಾಂತಿ ಪ್ರಿಯ ಜನರು ಅಮೇರಿಕನ್ ಆಡಳಿತಗಾರರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಮೊದಲು ಪ್ಯಾಲೆಸ್ತೇನ್, ನಂತರ ಇರಾನ್ ವಿರುದ್ಧ ಜಿಯೋನಿಸ್ಟ್ ಇಸ್ರೇಲ್ ಅನ್ನು ಚಿಮ್ಮು ಹಲಗೆಯಾಗಿ ಬಳಸಿಕೊಂಡು ಅಮೇರಿಕಾ ದಾಳಿ ನಡೆಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಮೆರಿಕದ ಬಹುತೇಕ ಎಲ್ಲಾ ಪ್ರಮುಖ ನಗರಗಳಲ್ಲಿ ಪ್ರತಿಭಟನಾಕಾರರು 'ಇರಾನ್ ಮೇಲೆ ದಾಳಿ ಮಾಡಬೇಡಿ' ಎಂಬ ಫಲಕಗಳನ್ನು ಹಿಡಿದಿದ್ದಾರೆ. ಅಲ್ಲದೆ, ಇಸ್ರೇಲಿನ ಶಾಂತಿಪ್ರಿಯ ನಾಗರಿಕರು ರಾಜಧಾನಿ ಟೆಲ್ ಅವೀವ್‌ನಲ್ಲಿ ಅಲ್ಲಿನ ಪ್ರಧಾನಿಯವರ ಅಪ್ರಚೋದಿತ ಯುದ್ಧವನ್ನು ಖಂಡಿಸಿ ರ‍್ಯಾಲಿಗಳನ್ನು ನಡೆಸಿದ್ದಾರೆ. ಇರಾನ್ ಇಸ್ರೇಲ್ ಮೇಲೆ ದಾಳಿ ಮಾಡಲು ಸಜ್ಜಾಗಿದೆ; ಹಾಗಾಗಿ ಇರಾನ್ ಮೇಲೆ ನಾವು ಮಿಲಿಟರಿ ಕಾರ್ಯಾಚರಣೆ ಮಾಡುತ್ತೇವೆ ಎಂಬ ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರ ಕುತ್ಸಿತ ವಾದವನ್ನು ಯಾರೂ ಒಪ್ಪಲು ತಯಾರಿಲ್ಲ. ಹೀಗಾಗಿ ಇರಾನಿನ ಜನರ ಜೊತೆ ನಿಂತ ಪ್ರತಿಭಟನಾಕಾರರು, "ನಮ್ಮನ್ನು ಕ್ಷಮಿಸಿ ಇರಾನಿನ ಸಹೋದರರೇ" ಎಂಬ ಘೋಷಣೆಯನ್ನು ಕೂಗುತ್ತಿದ್ದಾರೆ. ನ್ಯೂಯಾರ್ಕ್, ಲಾಸ್ ಏಂಜಲೀಸ್, ವಾಷಿಂಗ್ಟನ್ ಡಿಸಿ, ಬೋಸ್ಟನ್, ಷಿಕಾಗೋ, ಸ್ಯಾನ್ ಫ್ರಾನ್ಸಿಸ್ಕೋ, ಕೆನಡಾದ ಟೊರೆಂಟೋಗಳಲ್ಲಿ 'ಇರಾನ್ ಮೇಲಿನ ದಾಳಿಯಿಂದ ಹಿಂದೆ ಸರಿಯಿರಿ' ಮತ್ತು "ಇರಾನ್ ಮೇಲೆ ಅಮೆರಿಕ–ಇಸ್ರೇಲ್ ಯುದ್ಧ ಬೇಡ" ಎಂಬ ಬ್ಯಾನರ್ ಹಿಡಿದು ಪ್ರತಿಭಟನೆ ಮಾಡುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಪೋಸ್ಟ್‌ಗಳಲ್ಲಿ, ಪ್ರತಿಭಟನಾಕಾರರು ಯುದ್ಧ ವಿರೋಧಿ ಘೋಷಣೆಗಳನ್ನು ಕೂಗುತ್ತಾ, ಟ್ರಂಪ್ ಆಡಳಿತವು ಇಸ್ರೇಲಿಗೆ ಬೆಂಬಲ ನೀಡುವುದನ್ನು ನಿಲ್ಲಿಸುವಂತೆ ಹಾಗೂ ಹೆಚ್ಚುತ್ತಿರುವ ಸಂಘರ್ಷದಿಂದ ಹಿಂದೆ ಸರಿಯುವಂತೆ ಒತ್ತಾಯಿಸುತ್ತಿದ್ದಾರೆ. ಇರಾನಿನ ಧ್ವಜಗಳನ್ನು ಬೀಸುತ್ತ, "ಟ್ರಂಪ್ ಇರಾನ್ ಮೇಲೆ ಮೂರು ಬಾರಿ ಬಾಂಬ್ ದಾಳಿ ನಡೆಸಿದ್ದಾರೆ. ಇದು ಸಂಪೂರ್ಣ ಯುದ್ಧ ಅಪರಾಧ" ಎಂದು ಪ್ರತಿಭಟನಾಕಾರರೊಬ್ಬರು ಹೇಳಿದರು. "ನಾವು ಯುದ್ಧ ವಿರೋಧಿಗಳು. ನಾವು ಇರಾನಿನ ಜನರನ್ನು ಬೆಂಬಲಿಸುತ್ತೇವೆ. ಹೆಚ್ಚಿನ ಸಾವುಗಳು, ಹೆಚ್ಚಿನ ವಿನಾಶವನ್ನು ತಡೆಯಲು ನಾವು ಬಯಸುತ್ತೇವೆ" ಎಂದರು ಮತ್ತೊಬ್ಬ ಪ್ರತಿಭಟಜನಾಕಾರರು. ಅಮೇರಿಕಾದ ಜನತೆ ಈ ಯುದ್ಧಗಳ ವಿರುದ್ಧ ಕೋಪದಿಂದ ಕುದಿಯುತ್ತಿದೆ. ಇಸ್ರೇಲ್ ಕಮ್ಯುನಿಸ್ಟ್ ಪಕ್ಷ (ಒಂಏಖ) ಮತ್ತು ಹದಶ್‌ನ ಎಡ ಒಕ್ಕೂಟ (ಶಾಂತಿ ಹಾಗೂ ಸಮಾನತೆಗಾಗಿನ ಪ್ರಜಾಸತ್ತಾತ್ಮಕ ಮುಂದಳ), ಅಮೆರಿಕ ಕಮ್ಯುನಿಸ್ಟ್ ಪಕ್ಷ ಮತ್ತು ವಿಶ್ವ ಕಾರ್ಮಿಕರ ಪಕ್ಷಗಳು ಇರಾನ್ ಅನ್ನು ಅಪಾಯಕಾರಿ ಯುದ್ಧದ ಸನ್ನಿವೇಶಕ್ಕೆ ಎಳೆದಿದ್ದಕ್ಕಾಗಿ ಅಮೆರಿಕ ಮತ್ತು ಇಸ್ರೇಲಿನ ಕ್ರಮಗಳನ್ನು ಖಂಡಿಸಿವೆ ಮತ್ತು ಇರಾನಿನ ಜನರೊಂದಿಗೆ ತಮ್ಮ ಸಂಪೂರ್ಣ ಐಕಮತ್ಯವನ್ನು ಘೋಷಿಸಿವೆ.

### ಜಗತ್ತಿನಾದ್ಯಂತ ಭುಗಿಲೇಳುತ್ತಿರುವ ಬೃಹತ್ ಪ್ರತಿಭಟನೆಗಳು

ಇರಾನಿನ ಪರಮಾಣು ಸ್ಥಾವರಗಳ ಮೇಲೆ ದಾಳಿ ಮಾಡುವ ಡೊನಾಲ್ಡ್ ಟ್ರಂಪ್ ನಿರ್ಧಾರ ಮತ್ತು ಇಸ್ರೇಲ್ ಆಕ್ರಮಣದ ವಿರುದ್ಧ ಪ್ರತಿಭಟಿಸಲು ವಾರಾಂತ್ಯದಲ್ಲಿ ಪ್ರಪಂಚದಾದ್ಯಂತ ವಿವಿಧ ನಗರಗಳಲ್ಲಿ ಜನರು ಜಮಾಯಿಸಿದರು. ಯುರೋಪಿನಲ್ಲಿ ದಿ ಹೇಗ್, ಲಂಡನ್, ಪ್ಯಾರಿಸ್, ಬರ್ಲಿನ್ ಮತ್ತು ಬ್ರಸೆಲ್ಸ್ ನಂತಹ ನಗರಗಳಲ್ಲಿ ಹತ್ತಾರು ಸಾವಿರ ಜನರು ಬೀದಿಗಿಳಿದು ಗಾಜಾದಲ್ಲಿನ ನರಮೇಧವನ್ನು ಖಂಡಿಸಿ ಮತ್ತು ಅಮೇರಿಕಾ–ಇಸ್ರೇಲಿ ನೀತಿಗಳಿಗೆ ತಮ್ಮ ಸರ್ಕಾರಗಳ ಬೆಂಬಲವನ್ನು ವಿರೋಧಿಸಿದ್ದಾರೆ. ಇರಾನ್ ಮೇಲಿನ ಆಕ್ರಮಣವನ್ನು ಖಂಡಿಸಿ ಮತ್ತು ಉಲ್ಬಣಗೊಳ್ಳುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಕರೆ ನೀಡಿ ಮೆಲ್‌ಬೋರ್ನ್‌ನಲ್ಲಿ ನೂರಾರು ಜನರು ಮೆರವಣಿಗೆ ನಡೆಸಿದರು. ಮೊರಾಕೊ, ದಕ್ಷಿಣ ಆಫ್ರಿಕಾ, ಸೊಮಾಲಿಯಾ ಮತ್ತು ಪೋರ್ಚುಗಲ್‌ನಲ್ಲಿಯೂ ಸಹ ದೊಡ್ಡ ಪ್ರತಿಭಟನೆಗಳು ನಡೆದ ವರದಿಯಾಗಿದೆ. ಈ ಪ್ರದರ್ಶನಗಳು ಕದನ ವಿರಾಮಕ್ಕೆ ಒತ್ತಾಯಿಸುವುದಲ್ಲದೇ, ಸಾಮ್ರಾಜ್ಯಶಾಹಿ ಮತ್ತು ವಿದೇಶಿ ಹಸ್ತಕ್ಷೇಪವನ್ನು ಟೀಕಿಸಿವೆ. ಇರಾನಿನೊಂದಿಗೆ ಸಂಘರ್ಷವನ್ನು ಪ್ರಾರಂಭಿಸಿದ್ದಕ್ಕಾಗಿ ಮತ್ತು ಗಾಜಾದಲ್ಲಿ ನಡೆಸಿದ ವಿನಾಶದ ಯುದ್ಧಕ್ಕಾಗಿ ಇಸ್ರೇಲ್ ಅನ್ನು ಖಂಡಿಸಿದ್ದಾರೆ.

### ಇರಾನ್‌ನ ಪ್ರತೀಕಾರ

ಆದರೆ ಇರಾನ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ನಂತರ, ಇಸ್ರೇಲ್‌ಗಾಗಲಿ ಅಥವಾ ಅದರ ಗುರು ಅಮೆರಿಕಾಕ್ಕಾಗಲಿ ಇರಾನಿನ ಪ್ರತೀಕಾರದ ಶಕ್ತಿಯನ್ನು ಅಂದಾಜು ಮಾಡಲು ಸಾಧ್ಯವಾಗಿಲ್ಲ ಎಂದು ತೋರುತ್ತದೆ. ಇರಾನ್ ರಾತ್ರೋರಾತ್ರಿ ಮಾಡಿದ ಕ್ಷಿಪಣಿ ಪ್ರತಿದಾಳಿಗಳು ಇಸ್ರೇಲಿಗೆ ಅಪಾರ ಹಾನಿಯನ್ನುಂಟು ಮಾಡಿದವು. ಜೂನ್ 22 ರಂದು, ಇರಾನಿನ ಪ್ರತೀಕಾರದ ಮಿಲಿಟರಿ ದಾಳಿದಿಂದಾಗಿ ಇಸ್ರೇಲ್‌ಗೆ ಹಿನ್ನಡೆಯಾಗಿದೆ ಎಂದರಿತ ಟ್ರಂಪ್ ಇರಾನಿನ ಮೂರು ಪ್ರಮುಖ ಪರಮಾಣು ಸ್ಥಾವರಗಳ ಮೇಲೆ ಬಿ–2 ಸ್ಟೆಲ್ತ್ ಬಾಂಬರ್‌ಗಳಿಂದ ವೈಮಾನಿಕ ದಾಳಿ ಮಾಡಿದರು. ಟ್ರಂಪ್ ಈ ದಾಳಿಯನ್ನು "ಅದ್ಭುತ" ಯಶಸ್ಸು ಎಂದು ಹೇಳಿಕೊಂಡು, ಇರಾನಿನ ಪರಮಾಣು ತಾಣಗಳನ್ನು "ನಾಶಪಡಿಸಲಾಯಿತು" ಎಂದು ಹೊಗಳಿಕೊಂಡರೂ ಅಮೇರಿಕಾದ್ದೇ ಮಾಧ್ಯಮ ದೈತ್ಯ ಸಿಎನ್‌ಎನ್, ಅಮೇರಿಕಾದ ಗುಪ್ತಚರ ಮೂಲಗಳ ಮಾಹಿತಿ ಅನುಸರಿಸಿ, ಇರಾನಿನ ಪರಮಾಣು ಸ್ಥಾವರಗಳಿಗೆ ಹೆಚ್ಚಿನ ಹಾನಿಯಾಗಿಲ್ಲ ಎಂದು ವರದಿ ಮಾಡಿದೆ.

### ವಿಶ್ವದ ಶಾಂತಿಪ್ರಿಯ ಜನರಿಗೆ ಜಯ

ಈ ದಾಳಿಯಿಂದ ವಿಶ್ವದ ಜನರ, ವಿಶೇಷವಾಗಿ ಅಮೆರಿಕಾ ಜನತೆಯ ಕೋಪ ತಾರಕಕ್ಕೇರಿತು. ಯುದ್ಧ ವಿರೋಧಿ ಪ್ರದರ್ಶನಗಳು ಮತ್ತಷ್ಟು ತೀವ್ರಗೊಂಡವು. ಈ ಬೃಹತ್ ಜನ ಚಳುವಳಿಗಳ ಒತ್ತಡ ಹಾಗೂ ಇರಾನ್ ಜನರ ಮಾತೃಭೂಮಿ ರಕ್ಷಣೆಯ ದೃಢಸಂಕಲ್ಪದಿಂದಾಗಿ, ಅಮೆರಿಕಾ ದಾಳಿ ಮಾಡಿದ 48 ಗಂಟೆಗಳ ಒಳಗೆ, ಅಧ್ಯಕ್ಷ ಟ್ರಂಪ್ ಇಸ್ರೇಲ್ ಮತ್ತು ಇರಾನ್ ಎರಡೂ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಘೋಷಿಸಿದರು. ಅಮೆರಿಕ ಮತ್ತು ಇಸ್ರೇಲ್‌ಗಳು ಮಾನವೀಯತೆಯ ವಿರುದ್ಧ ಯುದ್ಧವನ್ನು ಪ್ರಾರಂಭಿಸಿದರೆ, ಪ್ರಪಂಚದ ಶಾಂತಿಪ್ರಿಯ ಜನರು ಇದರ ವಿರುದ್ಧ ಜಯ ಸಾಧಿಸಿದರು.

### ಬದಲಾದ ಸನ್ನಿವೇಶ

ಆದರೆ ನಂತರ ಕಥಾವಸ್ತು ನಾಟಕೀಯವಾಗಿ ಬದಲಾಯಿತು. ಇರಾನ್ ಸ್ವಲ್ಪವೂ ಹೆದರದೇ ಜೂನ್ 23 ರಂದು, ಕತಾರ್‌ನ ನಾಗರೀಕ ಸೌಲಭ್ಯಗಳು ಮತ್ತು ವಸತಿ ಪ್ರದೇಶಗಳಿಂದ ದೂರದಲ್ಲಿರುವ ಅಲ್–ಉದೈದ್‌ನಲ್ಲಿರುವ ಅಮೇರಿಕಾ ವಾಯುಪಡೆಯ ಪ್ರಧಾನ ಕಚೇರಿಯ ಮೇಲೆ ಶಕ್ತಿಶಾಲಿ ಕ್ಷಿಪಣಿಗಳೊಂದಿಗೆ ದಾಳಿ ಮಾಡಿತು. ಇರಾನು, "ತನ್ನ ಗುರಿ ಅಮೆರಿಕದ ಮಿಲಿಟರಿ ನೆಲೆಯಾಗಿದ್ದು, ಸ್ನೇಹಪರ ಮತ್ತು ಸಹೋದರ ರಾಷ್ಟ್ರವಾದ ಕತಾರ್ ಹಾಗೂ ಅದರ ಉದಾತ್ತ ಜನರಿಗೆ ಯಾವುದೇ ಬೆದರಿಕೆಯನ್ನು ಒಡ್ಡಿಲ್ಲ" ಎಂದು ಭರವಸೆ ನೀಡಿತು. ಇದರಿಂದ ಅಮೆರಿಕ ಮತ್ತು ಇಸ್ರೇಲ್ ಎರಡೂ ಬೆಚ್ಚಿಬಿದ್ದವು. ಅಲ್ಲದೆ, ದೇಶದ ಒಳಗಿನ ಮತ್ತು ಹೊರಗಿ ಜನರ ತೀವ್ರ ಪ್ರತಿಭಟನೆಯಿಂದಾಗಿ ಅಮೆರಿಕವು ಮುಖಭಂಗ ತಪ್ಪಿಸಿಕೊಳ್ಳಲು ಕದನ ವಿರಾಮ ಘೋಷಿಸಬೇಕಾಯಿತು.

### ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ಜೋಡಿಯ ಈ ದ್ವೇಷ ಏಕೆ?

ಅಮೆರಿಕದ ಸಂಪೂರ್ಣ ಬೆಂಬಲದೊಂದಿಗೆ ಇಸ್ರೇಲ್ ಇರಾನ್ ವಿರುದ್ಧ ಯುದ್ಧ ಆರಂಭಿಸಲು ಈ ಕ್ಷಣವನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಪ್ರಮುಖ ಕಾರಣವೆಂದರೆ ಗಾಜಾವನ್ನು ಮರೆಯುವಂತೆ ಮಾಡುವುದು: ಹಮಾಸ್ ಮೇಲೆ ದಾಳಿ ಮಾಡುವಲ್ಲಿನ ತನ್ನ ವೈಫಲ್ಯವನ್ನು ಜನರು ಮರೆಯುವಂತೆ ಮಾಡುವುದು. ಇದು ಒಂದು ಕಾರಣವಾದರೆ, ಇತರ ಕಾರಣಗಳೂ ಇವೆ. ಮಧ್ಯಪ್ರಾಚ್ಯದ ಅರಬ್ ರಾಷ್ಟ್ರಗಳಲ್ಲಿ, ಇರಾನ್ ಪ್ರಮುಖ ಸ್ಥಾನವನ್ನು ಹೊಂದಿದೆ. ಇದು ಮಧ್ಯಪ್ರಾಚ್ಯದಲ್ಲಿ (ಸೌದಿ ಅರೇಬಿಯಾದ ನಂತರ) 2ನೇ ಅತಿದೊಡ್ಡ ತೈಲ ನಿಕ್ಷೇಪಗಳನ್ನು ಹೊಂದಿದೆ ಮತ್ತು ವಿಶ್ವದಲ್ಲಿ 4ನೇ ಸ್ಥಾನದಲ್ಲಿದೆ. ವಿಶ್ವದ ಎರಡನೇ ಅತಿದೊಡ್ಡ ನೈಸರ್ಗಿಕ ಅನಿಲ ನಿಕ್ಷೇಪಗಳನ್ನೂ, ಕಲ್ಲಿದ್ದಲು, ಗಂಧಕ ಮತ್ತು ಲೋಹದ ಖನಿಜಗಳಂತಹ ಇತರ ನೈಸರ್ಗಿಕ ಸಂಪನ್ಮೂಲಗಳ ಗಣನೀಯ ನಿಕ್ಷೇಪಗಳನ್ನು ಹೊಂದಿದೆ. ನೈಸರ್ಗಿಕ ಸಂಪನ್ಮೂಲಗಳಲ್ಲಿನ ಈ ಶ್ರೀಮಂತಿಕೆಯ ಜೊತೆಗೆ, ಇರಾನ್ ಅರಬ್ ರಾಷ್ಟ್ರಗಳಲ್ಲಿ ಶ್ರೇಷ್ಠ ಮಿಲಿಟರಿ ಶಕ್ತಿಯನ್ನು ಹೊಂದಿದೆ. ಹೀಗಾಗಿ ಇರಾನ್ ಅನ್ನು ಅಸ್ಥಿರಗೊಳಿಸಿ ನೈಸರ್ಗಿಕ ಸಂಪತ್ತನ್ನು ಕೊಳ್ಳೆ ಹೊಡೆಯುವುದು ಅಮೇರಿಕಾದ ಕುತಂತ್ರ. ಅಲ್ಲದೇ ಇರಾನು ಪಶ್ಚಿಮ ಏಷ್ಯಾದ ಜನರಲ್ಲಿ ರೂಪುಗೊಳ್ಳುತ್ತಿರುವ ಅಮೆರಿಕ ವಿರೋಧಿ ಪ್ರತಿರೋಧ ಚಳುವಳಿಗಳಿಗೆ ನೈತಿಕ ಬೆಂಬಲ ನೀಡುತ್ತದೆ. ಅದು ಪದೇಪದೇ ಅಮೆರಿಕದ ಆದೇಶಗಳ ಪಾಲಿಸಲು ನಿರಾಕರಿಸಿದೆ. ಆದ್ದರಿಂದ, ಅಮೇರಿಕದ ಆಳ್ವಿಕರು ಬಹಳ ಹಿಂದೆಯೇ ಇರಾನ್ ಅನ್ನು 'ದುಷ್ಟ ರಾಷ್ಟ್ರ' ಎಂದು ಹಣೆಪಟ್ಟಿ ಹಚ್ಚಿದ್ದರು, ಜೊತೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಐದು ಖಾಯಂ ಸದಸ್ಯರಾದ ಚೀನಾ, ಫ್ರಾನ್ಸ್, ರಷ್ಯಾ, ಯುಕೆ, ಅಮೇರಿಕಾ ಹಾಗೂ ಜರ್ಮನಿ 2015ರ ಜುಲೈನಲ್ಲಿ ಜಂಟಿ ಸಮಗ್ರ ಕ್ರಿಯಾ ಯೋಜನೆ (ಜೆಸಿಪಿಓಎ) ಎಂದು ಕರೆಯಲ್ಪಡುವ ಒಂದು ದೊಡ್ಡ ಒಪ್ಪಂದವನ್ನು ಮಾಡಿಕೊಂಡವು. ಅದು ಇರಾನಿನ ಪರಮಾಣು ಕಾರ್ಯಕ್ರಮವನ್ನು ವಿಪರೀತವಾಗಿ ಸೀಮಿತಗೊಳಿಸಿತು ಮತ್ತು ನಿರ್ಬಂಧಗಳನ್ನು ಹೇರಿ ಅವುಗಳ ಪರಿಹಾರಕ್ಕಾಗಿ ತಾನು ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸದಿರುವ ಭರವಸೆಯನ್ನು ಇರಾನ್‌ನಿಂದ ಪಡೆಯಲಾಯಿತು. ಮುಂದೆ, ಮಾನವ ಹಕ್ಕುಗಳ ಉಲ್ಲಂಘನೆಯ ನೆಪವನ್ನು ಸಿದ್ಧವಾಗಿಟ್ಟುಕೊಂಡು ಅವಕಾಶಕ್ಕಾಗಿ ಕಾತರಿಸಿ ಕಾಯುತ್ತಾ, ದೂರದಿಂದಲೇ ಜರುಗುತ್ತಿರುವ ಬೆಳವಣಿಗೆಗಳನ್ನು ಅಮೇರಿಕ ಸೂಕ್ಷ್ಮವಾಗಿ ಗಮನಿಸುತ್ತಿತ್ತು. ಡೊನಾಲ್ಡ್ ಟ್ರಂಪ್‌ರ ಮೊದಲ ಅವಧಿಯ ಆಡಳಿತ ಪ್ರಾರಂಭವಾದ ನಂತರ, ಪೆಂಟಗನ್ ಏಕಪಕ್ಷೀಯವಾಗಿ ಒಪ್ಪಂದದಿಂದ ಹೊರಬಂದಿತು. ಅಮೇರಿಕ, ಜೆಸಿಪಿಓಎ ದೇಶದ ರಾಷ್ಟ್ರೀಯ ಭದ್ರತಾ ಹಿತಾಸಕ್ತಿಯನ್ನು ಕಾಯುವಲ್ಲಿ ವಿಫಲವಾಗಿದೆ ಎಂದು ಗೊಣಗುತ್ತಾ ಇರಾನಿಗೆ ಮತ್ತಷ್ಟು ವ್ಯಾಪಕ ನಿರ್ಬಂಧಗಳನ್ನು ವಿಧಿಸಿತು; ಇರಾನಿನ ಇಂಧನ ಸಂಪನ್ಮೂಲ ವಲಯದ ಕತ್ತು ಹಿಸುಕಲು ಮತ್ತು ಇರಾಕ್ ಮತ್ತು ಅಫ್ಘಾನಿಸ್ತಾನದ ಮಾದರಿಯಲ್ಲಿ ಆ ದೇಶದಲ್ಲಿ ಆಡಳಿತ ಬದಲಾವಣೆಯನ್ನು ತರಲು ಬಯಸಿತು.

### ಅತ್ಯಂತ ಕೆಟ್ಟ ಯುದ್ಧ ಅಪರಾಧಿ ಯಾರು?

2003ರ ಇರಾಕ್ ಆಕ್ರಮಣಕ್ಕೂ ಮುನ್ನ, ಇರಾಕ್ ಪರಮಾಣು ಶಸ್ತ್ರಾಸ್ತ್ರಗಳನ್ನು ಒಳಗೊಂಡಂತೆ ಸಾಮೂಹಿಕ ವಿನಾಶಕ ಶಸ್ತ್ರಾಸ್ತ್ರಗಳನ್ನು (ಫಾಒಳ) ಹೊಂದಿದೆ ಮತ್ತು ಸದ್ದಾಂ ಹುಸೇನ್ ಆಡಳಿತವು ಜಾಗತಿಕ ಶಾಂತಿಗೆ ಬೆದರಿಕೆ ಒಡ್ಡಲು ಅಣಿಯಾಗುತ್ತಿದೆ ಎಂದು ಅಮೇರಿಕ ಪದೇಪದೇ ಕ್ಯಾತೆ ತೆಗೆಯಿತು. ಈ ನೆಪದಲ್ಲಿ ಇರಾಕ್ ಮೇಲೆ ಆಕ್ರಮಣಕಾರಿ ಯುದ್ಧವನ್ನು ಪ್ರಾರಂಭಿಸಿ 5 ಲಕ್ಷಕ್ಕೂ ಹೆಚ್ಚು ಇರಾಕಿ ನಾಗರಿಕರನ್ನು ಕೊಂದು, ಆ ದೇಶದ ಸಾರ್ವಭೌಮತ್ವವನ್ನು ಬುಡಮೇಲು ಮಾಡಿದರು ತದನಂತರ, ನಾಚಿಕೆಯಿಲ್ಲದೇ ಆಗಿನ ಅಮೇರಿಕದ ಅಧ್ಯಕ್ಷ ಜಾರ್ಜ್ ಬುಷ್, ಪರಮಾಣು ಶಸ್ತ್ರಾಸ್ತ್ರಗಳು ಸೇರಿದಂತೆ ಇರಾಕಿನ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳ (ಫಾಒಳ) ಬಗ್ಗೆ ಯುದ್ಧಪೂರ್ವ ಗುಪ್ತಚರ ಮಾಹಿತಿಯು ದೋಷಪೂರಿತವಾಗಿದೆ ಎಂದು ಸಾರ್ವಜನಿಕವಾಗಿ ಒಪ್ಪಿಕೊಂಡರು.

ಇರಾನ್ ಕೂಡ ಒಂದು ಮಾದರಿ ಜನತಂತ್ರವೇನಲ್ಲ. ಅದು ಒಂದು ಧರ್ಮಾಧಾರಿತ ಬೂರ್ಜ್ವಾ ಪ್ರಭುತ್ವವಾಗಿದ್ದು, ತನ್ನದೇ ಜನರನ್ನು ಶೋಷಿಸುತ್ತಿದೆ ಮತ್ತು ಆಗಾಗ್ಗೆ ಜನ ಸಾಮಾನ್ಯರಿಂದ ಕೋಪಕ್ಕೆ ಗುರಿಯಾಗುತ್ತದೆ. ಆದರೆ ಇರಾನ್ ಎಂದೂ ಬೇರೆ ದೇಶದ ಮೇಲೆ ದಾಳಿ ಮಾಡಿದ ಉದಾಹರಣೆಯಿಲ್ಲ. ಆದರೆ ಅಮೆರಿಕವು ವಿವಿಧ ದೇಶಗಳಲ್ಲಿ ಆಡಳಿತ ಬದಲಾವಣೆಯ ಷಡ್ಯಂತ್ರವನ್ನು ಹೆಣೆಯುವ ಇತಿಹಾಸವನ್ನು ಹೊಂದಿದೆ. ವಿಯೆಟ್ನಾಂ, ಇರಾಕ್ ಮತ್ತು ಅಫ್ಘಾನಿಸ್ತಾನಗಳನ್ನು ಆಕ್ರಮಿಸಿಕೊಂಡಿರುವ ಇತಿಹಾಸ ಅದಕ್ಕಿದೆ. ಜೊತೆಗೆ, ಫೆಬ್ರವರಿ 2025 ರ ಹೊತ್ತಿಗೆ 55 ದೇಶಗಳು ಮತ್ತು ಪ್ರಾಂತ್ಯಗಳಲ್ಲಿ 128 ಮಿಲಿಟರಿ ನೆಲೆಗಳನ್ನು ರಚಿಸಿದೆ. ಹಾಗಾದರೆ ವಿಶ್ವ ಶಾಂತಿಗೆ ಯಾರು ಬೆದರಿಕೆ? ಇರಾನ್ ಅಥವಾ ಅಮೇರಿಕ?

### ಭಾರತ ಸರ್ಕಾರದ ಮೌನ!

ಈ ಯುದ್ಧದ ಬಗ್ಗೆ ಭಾರತ ಸರ್ಕಾರದ ಪ್ರತಿಕ್ರಿಯೆ ನಿಜಕ್ಕೂ ವಿಚಿತ್ರವಾಗಿದೆ. 2025ರ ಜೂನ್ 12ರಂದು, ಗಾಜಾದಲ್ಲಿ "ಎಲ್ಲಾ ಪಕ್ಷಗಳಿಂದ ತತ್‌ಕ್ಷಣದ, ಬೇಷರತ್ತಾದ ಮತ್ತು ಶಾಶ್ವತ ಕದನ ವಿರಾಮ"ಕ್ಕೆ ಕರೆ ನೀಡುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯಕ್ಕೆ ಜೊತೆಯಾಗಿ ಭಾರತವು ತನ್ನ ಮತವನ್ನು ಚಲಾಯಿಸಲಿಲ್ಲ. ಎರಡು ದಿನಗಳ ನಂತರ, ಇರಾನ್‌ನಲ್ಲಿನ ಮಿಲಿಟರಿ ನೆಲೆಗಳು, ಕ್ಷಿಪಣಿ ಸೌಲಭ್ಯಗಳು ಮತ್ತು ಪರಮಾಣು ಸ್ಥಾಪನೆಗಳ ಮೇಲೆ ಇಸ್ರೇಲ್ ನಡೆಸಿದ ಮಿಲಿಟರಿ ದಾಳಿಗಳನ್ನು "ಬಲವಾಗಿ ಖಂಡಿಸಿದ" ಶಾಂಘೈ ಸಹಕಾರ ಸಂಸ್ಥೆ(ಖಅಔ)ಯಿಂದಲೂ ಭಾರತವು ಅಂತರವನ್ನು ಕಾಯ್ದುಕೊಂಡಿತ್ತು. ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವ, ಇಸ್ರೇಲ್ ಇರಾನ್ ಎರಡರೊಂದಿಗೂ ದೂರವಾಣಿ ಚರ್ಚೆ ನಡೆಸಿದ್ದೇವೆ ಎಂದು ತೆಪ್ಪಗಾದರು. ಎಂತಹ ಪ್ರಹಸನ! ಶಸ್ತ್ರಾಸ್ತ್ರ ವ್ಯಾಪಾರದಲ್ಲಿ ಎರಡೂ ದೇಶಗಳು ತನ್ನ ಪಾಲುದಾರರಾಗಿರುವುದರಿಂದ ಭಾರತವು ಅಮೇರಿಕಾ ಅಥವಾ ಇಸ್ರೇಲ್‌ಗಳ ವಿರುದ್ಧ ನಿಲುವು ತೆಗೆದುಕೊಳ್ಳಲು ಸಾಧ್ಯವಿಲ್ಲ. ಮತ್ತೊಂದೆಡೆ, 2018–19ರವರೆಗೆ ಇರಾನ್ ಭಾರತಕ್ಕೆ ಕಚ್ಚಾ ತೈಲ ಪೂರೈಕೆದಾರರ ಮೂರನೇ ಅತಿದೊಡ್ಡ ಮೂಲವಾಗಿತ್ತು ಮತ್ತು ಇರಾನ್ ಚಬಾಹಾರ್ ಬಂದರನ್ನು ಭಾರತವು ಇರಾನ್‌ನೊಂದಿಗೆ ದೀರ್ಘಾವಧಿಯ ಒಪ್ಪಂದದ ಮೂಲಕ ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿದೆ.

### ಆರ್ಥಿಕತೆಯ ಮಿಲಿಟರೀಕರಣ

ಅನೇಕರು ಕಡೆಗಣಿಸುವ ಒಂದು ಮಹತ್ವದ ಅಂಶವೆಂದರೆ ಸಾಯುತ್ತಿರುವ ಬಂಡವಾಳಶಾಹಿ ಆರ್ಥಿಕತೆ ಮತ್ತು ಸಾಮ್ರಾಜ್ಯಶಾಹಿ ಯುದ್ಧ ತಂತ್ರದ ನಡುವಿನ ಸಂಬಂಧ. 63 ವರ್ಷಗಳ ಹಿಂದೆ, ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಮತ್ತು ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್, ಬಂಡವಾಳಶಾಹಿ ವ್ಯವಸ್ಥೆಯ ಪರಿಹರಿಸಲಾಗದ ಮಾರುಕಟ್ಟೆ ಬಿಕ್ಕಟ್ಟಿನ ಉಲ್ಬಣದ ಬಗ್ಗೆ ಹೀಗೆ ಹೇಳಿದ್ದರು : *"...ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿನ ಹಾಗೂ ಹಿಂದುಳಿದ ದೇಶಗಳಲ್ಲಿನ ಬಂಡವಾಳಶಾಹಿಗಳು ಇಡೀ ಆರ್ಥಿಕತೆಯನ್ನು ಮಿಲಿಟರಿ ಆರ್ಥಿಕತೆಯೊಂದಿಗೆ ಸಂಯೋಜಿಸುತ್ತಿದ್ದಾರೆ. ಅಂದರೆ, ಆರ್ಥಿಕ ಬಿಕ್ಕಟ್ಟಿನಿಂದಾಗಿ ಮಾರುಕಟ್ಟೆಯ ಉಬ್ಬರವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲದ ಕಾರಣ, ಅದನ್ನು ಉತ್ತೇಜಿಸಲು ಕೃತಕವಾಗಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ.*

12ನೇ ಪುಟಕ್ಕೆ

# ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಸಂಪೂರ್ಣ ಯಶಸ್ವಿ

## ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ, ಬಂಡವಾಳಶಾಹಿ ಪರ ನೀತಿಗಳಿಗೆ ಕಾರ್ಮಿಕರ ಧಿಕ್ಕಾರ!

ಲೈ 9ರಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದವು. ನಮ್ಮ ಪಕ್ಷದ ಕಾರ್ಮಿಕ ಸಂಘಟನೆ ಎಐಯುಟಿಯುಸಿ (ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್) ಒಳಗೊಂಡಂತೆ ಇತರೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಅತ್ಯಂತ ಸಕ್ರಿಯವಾಗಿ ಈ ಮುಷ್ಕರದಲ್ಲಿ ಭಾಗಿಯಾಗಿದ್ದವು. ಇಡೀ ದೇಶದಲ್ಲಿ 25 ಕೋಟಿ ಕಾರ್ಮಿಕರು ರಸ್ತೆಗಿಳಿಯುತ್ತಾ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಧಿಕ್ಕಾರ ಕೂಗಿದರು. ಇಡೀ ದೇಶದಲ್ಲಿ ಕೆಂಪು ಧ್ವಜಗಳು ಎಲ್ಲೆಡೆ ರಾರಾಜಿಸಿದವು. ಮುಷ್ಕರವು ಅಭೂತಪೂರ್ವವಾಗಿ ಯಶಸ್ವಿಗೊಂಡಿತು. ಕಾರ್ಮಿಕ ವಿರೋಧಿ ಬಂಡವಾಳಶಾಹಿ ಪರ ನೀತಿಗಳನ್ನು ಒಪ್ಪುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಕಾರ್ಮಿಕರು ದೇಶದಾದ್ಯಂತ ಮತ್ತೊಮ್ಮೆ ಮೊಳಗಿಸಿದರು. ರೈತ ಸಂಘಟನೆಗಳ ಬೃಹತ್ ವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾ ಸಹ ಈ ಮುಷ್ಕರಕ್ಕೆ ಬೆಂಬಲ ನೀಡಿದ್ದು, ಹೋರಾಟಕ್ಕೆ ಮತ್ತಷ್ಟು ಪುಷ್ಟಿ ಸಿಕ್ಕಿತು. ಕರ್ನಾಟಕದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆ ಸಿ ಟಿ ಯು) ಯ ನೇತೃತ್ವದಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಿವಿಧ ಸ್ವರೂಪದ ಬೃಹತ್ ಪ್ರತಿಭಟನೆಗಳು ನಡೆದವು. ತಮ್ಮ ಕೆಲಸಗಳನ್ನು ಬಹಿಷ್ಕರಿಸಿ ಕಾರ್ಮಿಕರು ಬಹಳ ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದರು. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾವಿರಾರು ಕಾರ್ಮಿಕರು ಜಮಾಯಿಸಿದ್ದರು. ಮೈಸೂರು, ಬಳ್ಳಾರಿ, ರಾಯಚೂರು, ಚಾಮರಾಜನಗರ, ದಾವಣಗೆರೆ, ಕೋಲಾರ, ಬಿಜಾಪುರ, ಕಲಬುರ್ಗಿ, ಚಿತ್ರದುರ್ಗ, ಧಾರವಾಡ–ಹುಬ್ಬಳ್ಳಿ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಎಐಯುಟಿಯುಸಿಗೆ ಸಂಯೋಜನೆಗೊಂಡ ಅನೇಕ ಕಾರ್ಮಿಕ ಸಂಘಟನೆಗಳು ಈ ಮುಷ್ಕರದಲ್ಲಿ ಸಕ್ರಿಯ ಪಾತ್ರ ವಹಿಸಿದ್ದವು. ಅವುಗಳಲ್ಲಿ ಬಳ್ಳಾರಿಯ ಕೇಂದ್ರ ಸರ್ಕಾರ ಸ್ವಾಮ್ಯದ ಎನ್.ಎಂ.ಡಿ.ಸಿ ಗಣಿಯ ಗುತ್ತಿಗೆ ಕಾರ್ಮಿಕರು, ಸ್ಪಾಂಜ್ ಐರನ್ ಕಾರ್ಖಾನೆಯ ಕಾರ್ಮಿಕರು; ಮೈಸೂರಿನ ರೀಡ್ ಅಂಡ್ ಟೈಲರ್ ಬಟ್ಟೆ ಕಾರ್ಖಾನೆ, ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ, ಶ್ರೀ ಗ್ಲೂಕೊ ಬಯೋಟೆಕ್, ಗ್ರಾಮಾಕ್ಸ್ ಪೇಪರ್ ಮಿಲ್ ಹಾಗೂ ಇನ್ನಿತರ ಕಾರ್ಖಾನೆಗಳ ಕಾರ್ಮಿಕರು; ರಾಯಚೂರಿನ ರಾಯಕೆಮ್ ಹಾಗೂ ಶಿಲ್ಪ ಫಾರ್ಮಾ ಕಾರ್ಖಾನೆಯ ನೌಕರರು ಸೇರಿದಂತೆ, ಕೆಪಿಟಿಸಿಎಲ್ ಹಾಗೂ ಹೆಸ್ಕಾಂ ಗುತ್ತಿಗೆ ಕಾರ್ಮಿಕರು ಬಹಳ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡರು. ವಿಂಡ್ ಮಿಲ್ ಕಾರ್ಮಿಕರು ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರು, ಹಾಸ್ಟೆಲ್ ಕಾರ್ಮಿಕರು ಹಾಗೂ ಗಣಿ ಕಾರ್ಮಿಕರ ಯೂನಿಯನ್‌ಗಳು ಪ್ರಮುಖವಾದ ಪಾತ್ರವನ್ನು ವಹಿಸಿದವು. ವಿಶೇಷವೇನೆಂದರೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಆಶಾ ಕಾರ್ಯಕರ್ತೆಯರು ಸ್ಫೂರ್ತಿಯುತವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಕಾರ್ಮಿಕ ವಿರೋಧಿ ಬಂಡವಾಳಶಾಹಿ ಪರ ಲೇಬರ್ ಕೋಡ್ ರದ್ದಾಗಬೇಕು, ವಿಮೆ, ಬ್ಯಾಂಕ್, ರೈಲ್ವೆ, ಮುಂತಾದ ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣ ನಿಲ್ಲಬೇಕು, ವಿದ್ಯುತ್ (ತಿದ್ದುಪಡಿ) ಮಸೂದೆ, 2022 ಅನ್ನು ಹಿಂತೆಗೆದುಕೊಳ್ಳಬೇಕು, ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು, ಗುತ್ತಿಗೆ ಪದ್ಧತಿ ರದ್ದುಗೊಳಿಸಬೇಕು, ಕನಿಷ್ಠ ವೇತನ ರೂ.36,000 ನಿಗದಿಪಡಿಸಬೇಕು, ದಿನಕ್ಕೆ 8 ಗಂಟೆ ದುಡಿಮೆ ಖಾತ್ರಿಪಡಿಸಬೇಕು, ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಕಾನೂನು ಜಾರಿಯಾಗಬೇಕು, ಬೆಲೆ ಏರಿಕೆ ನಿಲ್ಲಬೇಕು ಮುಂತಾದ ಬೇಡಿಕೆಗಳಿಗಾಗಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಹಮ್ಮಿಕೊಳ್ಳಲಾಗಿತ್ತು.



ಧಾರವಾಡದ ಜಿಲ್ಲಾಧಿಕಾರಿ ಕಛೇರಿಯ ಮುಂಭಾಗದಲ್ಲಿ ಸಾರ್ವತ್ರಿಕ ಮುಷ್ಕರವನ್ನು ಉದ್ದೇಶಿಸಿ ಮಾತನಾಡುತ್ತಿರುವ ಸಾಮಾಜಿಕ ಹೋರಾಟಗಾರರಾದ ಎಸ್.ಆರ್. ಹಿರೇಮಠ್




ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಕಲಬುರಗಿಯಲ್ಲಿ ಸಂಘಟಿಸಿದ್ದ ಪ್ರತಿಭಟನೆ

ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾ.ಕೆ.ಸೋಮಶೇಖರ್, ರಾಜ್ಯ ಉಪಾಧ್ಯಕ್ಷರಾದ ಕಾ.ಕೆ.ವಿ ಭಟ್, ರಾಜ್ಯ ಕಾರ್ಯದರ್ಶಿ ಕಾ.ಕೆ.ಸೋಮಶೇಖರ್ ಯಾದಗಿರಿ ಸೇರಿದಂತೆ ಇತರೆ ರಾಜ್ಯ ನಾಯಕರು ವಿವಿಧ ಜಿಲ್ಲೆಗಳಲ್ಲಿ ನಡೆದ ಮುಷ್ಕರದಲ್ಲಿ ಪಾಲ್ಗೊಂಡು, ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು.

### ಭಾಷಣಗಳ ಸಾರಾಂಶ

ಮೂರನೇ ಅವಧಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ದುಡಿಯುವ ಜನರ ಹಕ್ಕುಗಳನ್ನು ಕಸಿಯುತ್ತಿದೆ. ಶ್ರಮ ಜೀವಿಗಳ ಜೀವನ–ಜೀವನೋಪಾಯಗಳ ಮೇಲೆ ಕ್ರೂರ ದಾಳಿಗಳನ್ನು ಮಾಡುತ್ತಿದೆ. ಈ ಪರಿಸ್ಥಿತಿಗಳನ್ನು ಸುಧಾರಿಸಬೇಕಾದಂತಹ ಸರ್ಕಾರ ತದ್ವಿರುದ್ಧವಾಗಿ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವ ಮೂಲಕ ಇವುಗಳನ್ನು ದುಡಿಯುವ ಜನರ ಮೇಲೆ ಒತ್ತಾಯ ಪೂರ್ವಕವಾಗಿ ಹೇರುತ್ತಿದೆ. ಆ ಮೂಲಕ ಹಾಲಿ ಇರುವ ದುಡಿಯುವ ಜನರ ಹಕ್ಕುಗಳು ಮತ್ತು ಸವಲತ್ತುಗಳನ್ನು ಕಸಿಯಲು ಹೊರಟಿದೆ. ಕೆಲಸದ ಪರಿಸ್ಥಿತಿ, ಕಾರ್ಮಿಕರ ದುಡಿಯುವ ಅವಧಿ, ಕನಿಷ್ಠ ವೇತನ, ಸಾಮಾಜಿಕ ಭದ್ರತೆ, ಸಂಘಟನೆಯ ಹಕ್ಕು, ಸಾಮೂಹಿಕ ಒಪ್ಪಂದದ (ಚೌಕಾಸಿಯ) ಹಕ್ಕು, ಹೋರಾಟದ ಹಕ್ಕು ಮತ್ತು ಮುಷ್ಕರಗಳ ಹಕ್ಕುಗಳನ್ನು ದಮನಗೊಳಿಸುವ ನೀತಿಗಳು ಕಾಯ್ದೆಯಲ್ಲಿ ಒಳಗೊಂಡಿದೆ. ಕಾರ್ಮಿಕರು ತಮ್ಮ ನ್ಯಾಯೋಚಿತ ಹಕ್ಕುಗಳಿಗಾಗಿ ಹೋರಾಟ ಮಾಡುವುದನ್ನು ಕ್ರಿಮಿನಲ್ ಅಪರಾಧದ ಅಡಿ ತಂದಿರುವ ಕೇಂದ್ರ ಸರ್ಕಾರ, ಕಾರ್ಪೋರೇಟ್ ದೊಡ್ಡ ವ್ಯವಹಾರ ನಡೆಸುವವರು ಕಾಯ್ದೆಗಳನ್ನು ಉಲ್ಲಂಘನೆ ಮಾಡಲು ಮುಕ್ತ ಅವಕಾಶ ಕಲ್ಪಿಸುತ್ತಿದೆ. ಇದು ವ್ಯಾಪಾರ ಸುಲಭಗೊಳಿಸುವುದಾಕ್ಕಾಗಿ ಎಂದು ಸರ್ಕಾರ ನಾಚಿಕೆಯಿಲ್ಲದೆ ಹೇಳುತ್ತಿದೆ.

ಮತ್ತೊಂದೆಡೆ ಅಂಬಾನಿ, ಅದಾನಿ ಸೇರಿದಂತೆ ಬೆರಳೆಣಿಕೆಯ ಕಾರ್ಪೋರೇಟ್ ಮಾಲೀಕರಿಗೆ ಲಕ್ಷಾಂತರ ಕೋಟಿ ತೆರಿಗೆ ರಿಯಾಯಿತಿ ನೀಡುತ್ತಿದೆ, ಸಾಲ ಮನ್ನಾ ಮಾಡುತ್ತಿದೆ. ಅಲ್ಲದೆ ಜನರ ತೆರಿಗೆ ಹಣದಿಂದ, ನೌಕರರ ಶ್ರಮದಿಂದ ಕಟ್ಟಿದ ಸಾರ್ವಜನಿಕ ಉದ್ಯಮಗಳಾದ ವಿಮೆ, ಬ್ಯಾಂಕ್, ರೈಲ್ವೆ, ದೂರ ಸಂಪರ್ಕ, ಬಂದರು, ಗಣಿ, ವಿಮಾನ ಮುಂತಾದವುಗಳನ್ನು ಕಾರ್ಪೋರೇಟ್ ಮಾಲೀಕರಿಗೆ ಬಿಡುಗಾಸಿಗೆ ಮಾರಾಟ ಮಾಡುತ್ತಿದೆ. ಇವು 1991ರಲ್ಲಿ ಜಾರಿಗೆ ಬಂದ ಖಾಸಗೀಕರಣ–ಉದಾರೀಕರಣ ನೀತಿಗಳ ಫಲಶ್ರುತಿ. ಸಾಮ್ರಾಜ್ಯಶಾಹಿ–ಬಂಡವಾಳಶಾಹಿಗಳ ಪರವಾದ ಈ ನೀತಿಗಳಿಗೆ ಮೊದಲು ಬುನಾದಿ ಹಾಕಿದ್ದೇ ಅಂದಿನ ಕಾಂಗ್ರೆಸ್ ಸರ್ಕಾರ. ಈಗ ಪ್ರಸಕ್ತ ಬಿಜೆಪಿ ಸರ್ಕಾರ ಈ ನೀತಿಗಳನ್ನೇ ಅತ್ಯಂತ ವೇಗವಾಗಿ ಜಾರಿಗೆ ತರುತ್ತಿದೆ. ಬಿಜೆಪಿ ಹಾಗೂ ಕಾಂಗ್ರೆಸ್ ಸರ್ಕಾರಗಳು ಸಂಪೂರ್ಣವಾಗಿ ಕಾರ್ಮಿಕ ವಿರೋಧಿ, ಜನ ವಿರೋಧಿಯಾಗಿವೆ.

ರಾಜ್ಯದಲ್ಲಿಯೂ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ದುಡಿತದ ಅವಧಿಯ ಹೆಚ್ಚಳವನ್ನು ಮತ್ತು ಹಿಂದಿನ ಸರ್ಕಾರ ತಂದ ಕೃಷಿ ಕಾಯ್ದೆಗಳನ್ನು ಮುಂದುವರಿಸುತ್ತಿದೆ. ಫ್ಯಾಕ್ಟರಿ ಕಾಯ್ದೆಗೆ ತಿದ್ದುಪಡಿ ತರಲು, ಮಹಿಳೆಯರಿಗೆ ರಾತ್ರಿ ಪಾಳಿ, ಅಪಾಯಕಾರಿ ಕಾರ್ಖಾನೆಗಳ ಸ್ಥಳಗಳಲ್ಲಿ ಮಹಿಳೆಯರ ನಿರ್ಬಂಧವನ್ನು ತೆಗೆಯುವುದು, ಲಕ್ಷಾಂತರ ಕಾರ್ಮಿಕರನ್ನು ಕಾರ್ಖಾನೆ ಕಾಯ್ದೆಯಿಂದ ಹೊರಗಿಡಲು ಹೊರಟಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬೆಲೆ ಏರಿಕೆಗೆ ಯಾವುದೇ ಕಡಿವಾಣವಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಹಾಗೂ ರೈತ ಸಂಘಟನೆಗಳು ಒಗ್ಗೂಡಿ ಬಲಿಷ್ಠ ಹೋರಾಟಗಳನ್ನು ರೂಪಿಸುವ ಅವಶ್ಯಕತೆಯಿದೆ. ಈ ಮೂಲಕ ಬಂಡವಾಳಶಾಹಿ ಪರ ನೀತಿಗಳನ್ನು ಹಿಮ್ಮೆಟ್ಟಿಸಬೇಕು ಎಂದು ಕರೆ ನೀಡಿದರು.



ಬಳ್ಳಾರಿಯಲ್ಲಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಎಐಯುಟಿಯುಸಿ ರಾಜ್ಯಾಧ್ಯಕ್ಷರಾಗಿರುವ ಕಾಮ್ರೇಡ್ ಕೆ.ಸೋಮಶೇಖರ್

### ಬೇಡಿಕೆಗಳು :–

1. ಕಾರ್ಮಿಕ–ವಿರೋಧಿ ಬಂಡವಾಳಶಾಹಿ ಪರ 4 ಲೇಬರ್ ಕೋಡ್‌ಗಳನ್ನು ರದ್ದುಗೊಳಿಸಿ.
2. ಸಾರ್ವಜನಿಕ ವಲಯಗಳ ಹಾಗೂ ಸರ್ಕಾರಿ ಉದ್ದಿಮೆಗಳ ಖಾಸಗೀಕರಣ ನಿಲ್ಲಿಸಿ.ರಾಷ್ಟ್ರೀಯ ನಗದೀಕರಣ ಯೋಜನೆ (NMP) ರದ್ದುಗೊಳಿಸಿ.
3. ವಿದ್ಯುತ್ ಕಾಯ್ದೆ ತಿದ್ದುಪಡಿ ಮಸೂದೆ 2023 ಹಿಂಪಡೆಯಿರಿ. ಸ್ಮಾರ್ಟ್ ಮೀಟರ್ ಅಳವಡಿಕೆ ನಿಲ್ಲಿಸಿ.
4. ಕೆಲಸದ ಅವಧಿಯನ್ನು ಪ್ರಸ್ತುತದಲ್ಲಿರುವ ದಿನಕ್ಕೆ 8 ಗಂಟೆ ಮತ್ತು ವಾರಕ್ಕೆ 48 ಗಂಟೆ ಮಿತಿಯನ್ನು ಖಾತ್ರಿಗೊಳಿಸಿ. ಮಹಿಳೆಯರಿಗೆ ರಾತ್ರಿ ಪಾಳಿ ಅವಕಾಶ ನೀಡುವ ಆದೇಶವನ್ನು ಹಿಂಪಡೆಯಿರಿ
5. ಎನ್.ಪಿ.ಎಸ್/ ಯು.ಪಿ.ಎಸ್ ಬೇಡ. ಎಲ್ಲರಿಗೂ ಓ.ಪಿ.ಎಸ್ ಜಾರಿ ಮಾಡಿ.
6. ಎಲ್ಲಾ ಕಾರ್ಮಿಕರಿಗೆ ಕನಿಷ್ಠ ವೇತನ ರೂ.36,000 ನಿಗದಿಪಡಿಸಬೇಕು.
7. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು. ಎಲ್ಲಾ ಗುತ್ತಿಗೆ–ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಅಲ್ಲಿಯವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಬೇಕು.
8. ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರು ಸೇರಿದಂತೆ ಎಲ್ಲಾ ಯೋಜನಾ ಕಾರ್ಯಕರ್ತರ (ಸ್ಕೀಮ್ ವರ್ಕರ್ಸ್) ಸೇವೆಗಳನ್ನು ಖಾಯಂಗೊಳಿಸಿ ಸರ್ಕಾರಿ ನೌಕರರನ್ನಾಗಿ ಪರಿಗಣಿಸಿ.
9. ವಲಸೆ ಕಾರ್ಮಿಕರಿಗೆ ಸುರಕ್ಷತೆ, ಭದ್ರತೆ ಹಾಗೂ ಖಾಯಂ ಉದ್ಯೋಗ ನೀಡಬೇಕು.
10. ಕಾರ್ಮಿಕ ಸಂಘ ರಚಿಸುವ ಪ್ರಜಾತಾಂತ್ರಿಕ ಹಕ್ಕುಗಳನ್ನು ಖಾತ್ರಿ ಪಡಿಸಿ.
11. ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲು ತುರ್ತು ಕ್ರಮ ಕೈಗೊಳ್ಳಬೇಕು.
12. ಗಿಗ್ ಮತ್ತು ಪ್ಲಾಟ್‌ಫಾರಂ ಕೆಲಸಗಾರರನ್ನು (Gig and Platform Worker) ಕಾರ್ಮಿಕರೆಂದು ಪರಿಗಣಿಸಿ ಎಲ್ಲಾ ಕಾರ್ಮಿಕ ಕಾಯ್ದೆಗಳನ್ನು ಅವರಿಗೆ ಅನ್ವಯಿಸುವಂತೆ ಕ್ರಮಕೈಗೊಳ್ಳಬೇಕು.
13. ಎಲ್ಲಾ ಅಸಂಘಟಿತ ವಲಯದ ಕಾರ್ಮಿಕರಿಗೆ ಕಲ್ಯಾಣ ಮಂಡಳಿಗಳನ್ನು ಸ್ಥಾಪಿಸಿ, ಸಾಮಾಜಿಕ ಭದ್ರತೆ ಸವಲತ್ತುಗಳನ್ನು ಖಾತ್ರಿಗೊಳಿಸಬೇಕು.
14. ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗ ನೀಡಿ, ಉದ್ಯೋಗದ ಹಕ್ಕನ್ನು ಮೂಲಭೂತ ಸಾಂವಿಧಾನಿಕ ಹಕ್ಕನ್ನಾಗಿ ಮಾಡಿ.

## ಎಸ್‌ಯುಸಿಐ(ಸಿ) ಕಾರ್ಯಕರ್ತರ

# ಬೆಳವಣಿಗೆಗೆ ಪ್ರೇರಣೆಯಾದ ದಕ್ಷಿಣ ಭಾರತ ಅಧ್ಯಯನ ಶಿಬಿರ

ಎಸ್‌ಯುಸಿಐ (ಸಿ) ಪಕ್ಷ ಮೈಸೂರಿನಲ್ಲಿ ಜುಲೈ 18 ರಿಂದ 21 ರವರೆಗೆ ಸಂಘಟಿಸಿದ್ದ ಅಧ್ಯಯನ ಶಿಬಿರದಲ್ಲಿ ಪಾಲ್ಗೊಳ್ಳಲು ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಪುದುಚೇರಿಗಳಿಂದ 1000ಕ್ಕೂ ಹೆಚ್ಚು ಕಾರ್ಯಕರ್ತರು, ಅತ್ಯುತ್ಸಾಹದಿಂದ ಬಂದು ಸೇರಿದರು. ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಈ ಶಿಬಿರವನ್ನು 4 ದಿನಗಳ ಕಾಲ ನಡೆಸಿಕೊಟ್ಟರು. ನಮ್ಮ ನಲ್ಮೆಯ ಪಕ್ಷವನ್ನು ಸ್ಥಾಪಿಸಿದ, ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರಲ್ಲಿ ಒಬ್ಬರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ನೇರ ಮಾರ್ಗದರ್ಶನದಲ್ಲಿ ಬೆಳೆದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಇದೀಗ ಪಕ್ಷಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. 90ರ ಇಳಿವಯಸ್ಸಿನಲ್ಲಿ ಪಕ್ಷದ ಸಿದ್ಧಾಂತ, ತತ್ವಶಾಸ್ತ್ರ, ಸಂಘಟನಾತ್ಮಕ ಅಂಶಗಳ ಕುರಿತು ಕಾಮ್ರೇಡರೊಂದಿಗೆ ಚರ್ಚಿಸಲು ಕಲ್ಕತ್ತಾದಿಂದ ದಕ್ಷಿಣ ಭಾರತದ ಮೈಸೂರಿಗೆ ಆಗಮಿಸಿದ ಅವರನ್ನು ಭೇಟಿಯಾಗಿ, ವಿಚಾರಗಳನ್ನು ಅರಿತುಕೊಳ್ಳಲು, ಕ್ರಾಂತಿಕಾರಿ ಹೋರಾಟದ ಅವರ ಅಗಾಧ ಅನುಭವಗಳನ್ನು ಮೈದುಂಬಿಕೊಳ್ಳಲು ಕಾಮ್ರೇಡರು ಕಾತುರರಾಗಿದ್ದರು. ಮಾರ್ಕ್ಸ್‌ವಾದ-ಲೆನಿನ್‌ವಾದದ ತತ್ವಶಾಸ್ತ್ರದ ಕುರಿತು ಕಾ. ಶಿವದಾಸ್ ಘೋಷ್‌ರವರು ಚರ್ಚಿಸಿರುವ ಕೃತಿಗಳಾದ 'ಮಾರ್ಕ್ಸ್‌ವಾದ ಹಾಗೂ ಮಾನವ ಸಮಾಜದ ಬೆಳವಣಿಗೆ', 'ಮಾರ್ಕ್ಸ್‌ವಾದ ಮತ್ತು ದ್ವಂದ್ವಾತ್ಮಕ ವಸ್ತುವಾದದ ಕೆಲವು ಅಂಶಗಳು' ಹಾಗೂ 'ಕಮ್ಯುನಿಸ್ಟ್ ನೀತಿ ಸಂಹಿತೆ', ಇವುಗಳನ್ನು ಎಲ್ಲಾ ಕಾಮ್ರೇಡರು ಜಿಲ್ಲಾ ಮಟ್ಟದಲ್ಲಿ ಓದಿ, ಚರ್ಚಿಸಿ, ಇನ್ನೂ ಹೆಚ್ಚಿನ ತಿಳುವಳಿಕೆಗಾಗಿ ಪ್ರಶ್ನೆಗಳನ್ನು ಹೊತ್ತು ತಂದಿದ್ದರು.




ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್




ತನ್ಮಯತೆಯಿಂದ ಶಿಬಿರದಲ್ಲಿ ಭಾಗವಹಿಸಿದ ಕಾರ್ಯಕರ್ತರು

ಕಾಮ್ರೇಡ್ ಪ್ರವಾಶ್ ಘೋಷ್‌ರವರು ಮೊಟ್ಟ ಮೊದಲನೆಯ ಅಧಿವೇಶನದಲ್ಲಿ ಅಧ್ಯಯನ ಶಿಬಿರದ ಅವಶ್ಯಕತೆಯ ಕುರಿತು ವಿವರಿಸಿದರು. 'ಮನುಷ್ಯನು ತನ್ನ ಸುತ್ತಲಿನ ಸಮಾಜ, ನಿಸರ್ಗ ಹಾಗೂ ಜೀವನದ ಎಲ್ಲಾ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಜ್ಞಾನ ಅವಶ್ಯಕ, ನಮ್ಮ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಗಳ ಕುರಿತು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದರೆ, ಅದು ನಮ್ಮನ್ನು ಸತ್ಯದೆಡೆಗೆ ಕರೆದೊಯ್ಯುತ್ತದೆ, ಇದು ವೈಜ್ಞಾನಿಕ ವಿಧಾನ; ನಮ್ಮ ಭಾವನೆಗಳ ಆಧಾರದ ಮೇಲೆ ಅರ್ಥೈಸಲು ಪ್ರಯತ್ನಿಸಿದರೆ, ಅದು ಭಾವನಾವಾದವಾಗುತ್ತದೆ ಮತ್ತು ವಾಸ್ತವಿಕ ಸತ್ಯದಿಂದ ದೂರವಾಗುತ್ತದೆ. ಸಂಘಟನೆಯ ಒಳಗೂ ಸಹ ಯಾವುದೇ ವಿಷಯವನ್ನು ಚರ್ಚಿಸುವಾಗ ವೈಜ್ಞಾನಿಕ ವಿಧಾನ ಕ್ರಮವನ್ನು ಅನುಸರಿಸಬೇಕು. ಅದೇ ದ್ವಂದ್ವಾತ್ಮಕ ವಸ್ತುವಾದಿ ಅಧ್ಯಯನ ಕ್ರಮ – ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಅಭಿಪ್ರಾಯ. ಆದ್ದರಿಂದ ಇದನ್ನು ತಿಳಿಯುವುದಕ್ಕಾಗಿಯೇ ಈ ಅಧ್ಯಯನ ಶಿಬಿರ ಅಗತ್ಯವಿದೆ' ಎಂದು ಹೇಳಿದರು.

ನಂತರದ ಅಧಿವೇಶನಗಳಲ್ಲಿ, 'ವಿಶ್ವದಾದ್ಯಂತ ಹಲವಾರು ತತ್ವಜ್ಞಾನಿಗಳು, ಚಿಂತಕರು ಉದಯಿಸಿದ್ದಾರೆ, ಅವರನ್ನು ನಾವು ಮೂಲಭೂತವಾಗಿ ವಸ್ತುವಾದಿಗಳು ಹಾಗೂ ಭಾವನಾವಾದಿಗಳೆಂದು ವಿಂಗಡಿಸಬಹುದು. ನಮ್ಮ ದೇಶದಲ್ಲಿಯೂ ಸಹ ಚಾರ್ವಾಕರು, ಲೋಕಾಯತರೆಂಬ ವಸ್ತುವಾದಿಗಳಿದ್ದರು. ಅಂತೆಯೇ ಶಂಕರಾಚಾರ್ಯರಂತಹ ಭಾವನಾವಾದಿಗಳನ್ನೂ ಕಾಣುತ್ತೇವೆ. ಪಾಶ್ಚಾತ್ಯ ತತ್ವಜ್ಞಾನಿಗಳಾದ ಹೆಗೆಲ್ ದ್ವಂದ್ವಾತ್ಮಕತೆಯನ್ನು ಕಂಡು ಹಿಡಿದರೂ ಅದು ದ್ವಂದ್ವಾತ್ಮಕ ವಿಚಾರದ ಪ್ರತಿಬಿಂಬವೆಂದು ಹೇಳಿದರು. ಫ್ಯೂಯರ್‌ಬಕ್ ದ್ವಂದ್ವಾತ್ಮಕ ವಿಚಾರವನ್ನು ವಿರೋಧಿಸಿದರೂ ಕೂಡ ಸಂಸ್ಕೃತಿ, ಮೌಲ್ಯಗಳ ಪ್ರಶ್ನೆಯಲ್ಲಿ ಅದು ಬದಲಾಗುವುದಿಲ್ಲ ಎಂದು ಪ್ರತಿಪಾದಿಸಿದರು. ಆದ್ದರಿಂದ ಅವರಿಬ್ಬರೂ ಮೂಲಭೂತವಾಗಿ ದ್ವಂದ್ವಾತ್ಮಕತೆಯನ್ನು ಒಪ್ಪಿಕೊಂಡರೂ ಸಹ ಅಂತಿಮವಾಗಿ ಭಾವನಾವಾದದ ಬಣ ಸೇರುತ್ತಾರೆ. ಅವರ ನಂತರದ ಕಾಲದಲ್ಲಿ ವಿಜ್ಞಾನದ ಬೆಳವಣಿಗೆಯ ಪರಿಣಾಮದಿಂದ ವಸ್ತು ಜಗತ್ತು, ಮಾನವ ಸಮಾಜ, ಚಿಂತನೆ ಇವುಗಳ ಉಗಮವನ್ನು ವೈಜ್ಞಾನಿಕವಾಗಿ ಅರ್ಥೈಸಲು ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಎಂಗೆಲ್ಸ್‌ರವರಿಗೆ ಸಾಧ್ಯವಾಗಿ, ವಿಶ್ವದಲ್ಲಿ ಮೊಟ್ಟಮೊದಲ ಬಾರಿಗೆ ದ್ವಂದ್ವಾತ್ಮಕ ವಸ್ತುವಾದದ ತತ್ವಶಾಸ್ತ್ರವನ್ನು ರೂಪಿಸಿದರು' ಎಂದು ಹೇಳಿದರು.

ನಂತರ ಮಾನವ ಸಮಾಜ ಬೆಳೆದು ಬಂದ ದಾರಿಯನ್ನು ವಿವರಿಸುತ್ತಾ, 'ಆದಿಮಾನವ ಸಮಾಜದಲ್ಲಿ ಎಲ್ಲರೂ ಸಮಾನವಾಗಿ ಬೇಟೆಯಾಡುತ್ತಾ, ಗೆಡ್ಡೆ ಗೆಣಸು ಸಂಗ್ರಹಿಸುತ್ತಾ ಜೀವನ ಸಾಗಿಸುತ್ತಿದ್ದರು, ಕೃಷಿಯ ಉಗಮದೊಂದಿಗೆ ಸ್ಥಿರಾಸ್ತಿಯ ಜೊತೆ ಖಾಸಗಿ ಆಸ್ತಿಯ ಉಗಮವಾಯಿತು ಮತ್ತು ಸಮಾಜ ವರ್ಗ ವಿಭಜಿತವಾಯಿತು. ಅಲ್ಲಿಂದ ಮಾನವನಿಂದ ಮಾನವನ ಶೋಷಣೆ ಆರಂಭವಾಯಿತು ಎಂಬುದನ್ನು ತಿಳಿಸಿದರು. ಮುಂದುವರೆಯುತ್ತಾ, ಈ ಶೋಷಣೆಯೇ ಗುಲಾಮ ವ್ಯವಸ್ಥೆ, ತದನಂತರ ಊಳಿಗಮಾನ್ಯ ವ್ಯವಸ್ಥೆ ಹಾಗೂ ಪ್ರಸ್ತುತ ಬಂಡವಾಳಶಾಹಿ ವ್ಯವಸ್ಥೆಯ ಸ್ಥಾಪನೆಗೆ ಕಾರಣವಾಯಿತು; ಇದೀಗ ಬಂಡವಾಳಶಾಹಿ ಶೋಷಣೆಯು ಸಾಮ್ರಾಜ್ಯಶಾಹಿ ಘಟ್ಟವನ್ನು ಮುಟ್ಟಿದೆ. ಈ ವ್ಯವಸ್ಥೆಯ ನಿರ್ದಯ ಶೋಷಣೆಯ ವಿರುದ್ಧ ಕಾರ್ಮಿಕರು ಒಗ್ಗೂಡಿ ಮೊದಲಿಗೆ ರಷ್ಯಾದಲ್ಲಿ ಹಾಗೂ ತದನಂತರ ಪೂರ್ವ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಸಮಾಜವಾದವನ್ನು ಸ್ಥಾಪಿಸಿದರು. ಆದರೆ ಸಮಾಜವಾದವು ಒಂದು ಸ್ಥಿತ್ಯಂತರ ವ್ಯವಸ್ಥೆಯಾದ ಕಾರಣ ಕಾರ್ಮಿಕವರ್ಗದ ನೇತೃತ್ವದಲ್ಲಿ ಸಾಂಸ್ಕೃತಿಕ ಕ್ರಾಂತಿಯು ನೆರವೇರದಿದ್ದರೆ, ಬಂಡವಾಳಶಾಹಿ ವ್ಯವಸ್ಥೆಯ ವ್ಯಕ್ತಿ ಕೇಂದ್ರಿತ ನೀತಿ-ನೈತಿಕತೆಯು ಸಾಮೂಹಿಕತ್ವದ ನೀತಿ ಸಂಸ್ಕೃತಿಗೆ ಧಕ್ಕೆಯುಂಟು ಮಾಡಿ ಪ್ರತಿಕ್ರಾಂತಿಗೆ ಅವಕಾಶ ನೀಡುತ್ತದೆ. ಇದಕ್ಕೆ ವಿಶ್ವ ಸಾಮ್ರಾಜ್ಯಶಾಹಿಗಳ ಕುಮ್ಮಕ್ಕೂ ಇರುತ್ತದೆ. ಈ ವೇದನಾದಾಯಕ ಬೆಳವಣಿಗೆಯನ್ನು ನಾವು ಸೋವಿಯತ್ ಒಕ್ಕೂಟ, ಚೀನಾ ಹಾಗೂ ಇನ್ನಿತರ ಹಿಂದಿನ ಸಮಾಜವಾದಿ ರಾಷ್ಟ್ರಗಳಲ್ಲಿ ಕಾಣುತ್ತೇವೆ. ಇದನ್ನು ನಿಯಂತ್ರಿಸಲು ಆ ದೇಶಗಳಲ್ಲಿನ ಕಮ್ಯುನಿಸ್ಟ್ ಪಕ್ಷಗಳು ಕಾರ್ಯೋನ್ಮುಖವಾಗಬೇಕಿತ್ತು. ಆದರೆ ಆ ಪಕ್ಷಗಳು ಪರಿಷ್ಕರಣವಾದಕ್ಕೆ ತುತ್ತಾದವು, ಎಂದರೆ ಮಾರ್ಕ್ಸ್‌ವಾದದ ಮೂಲತತ್ವಗಳಿಂದ ದೂರವಾದವು. ಈ ಪರಿಷ್ಕರಣವಾದವು ತಲೆಯೆತ್ತಲು ಕಾರಣ ಆ ಪಕ್ಷಗಳಲ್ಲಿನ ವೈಚಾರಿಕ ಮಟ್ಟದಲ್ಲಿನ ಕುಸಿತ ಮತ್ತು ಯಾಂತ್ರಿಕ ಆಲೋಚನಾ ಕ್ರಮಗಳು ಎನ್ನುವುದನ್ನು ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ತೋರಿಸಿಕೊಟ್ಟರು. ಈ ಪಾಠವನ್ನು ಅರಿತುಕೊಂಡು ನಾವಿಂದು ವೈಚಾರಿಕ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ ಮತ್ತು ದ್ವಂದ್ವಾತ್ಮಕ ಚಿಂತನಾ ಕ್ರಮಗಳನ್ನು ಮೈಗೂಡಿಸಿಕೊಳ್ಳಬೇಕಾಗಿದೆ' ತಿಳಿಸಿದರು.

'ಕ್ರಾಂತಿ ನೆರವೇರಲು ಒಂದು ಪ್ರಮುಖವಾದ ಪೂರ್ವ ನಿಬಂಧನೆಯೆಂದರೆ ನೈಜ ಕ್ರಾಂತಿಕಾರಿ ಪಕ್ಷದ ಸ್ಥಾಪನೆ. ಈ ನೆಲದಲ್ಲಿ ಕಮ್ಯುನಿಸ್ಟ್ ನಾಮಧಾರಿ ಪಕ್ಷಗಳಾದ ಸಿಪಿಐ, ಸಿಪಿಐ(ಎಂ) ಇತ್ಯಾದಿ ಪಕ್ಷಗಳಿದ್ದರೂ, ಅವುಗಳು ಭಾರತದ ನೆಲದಲ್ಲಿ ಮಾರ್ಕ್ಸ್‌ವಾದವನ್ನು ಅಳವಡಿಸುವುದರಲ್ಲಿ ವಿಫಲರಾಗಿ, ನೈಜ ಕಮ್ಯುನಿಸ್ಟ್ ರಣನೀತಿ ಮತ್ತು ಸಂಸ್ಕೃತಿಯ ಆಧಾರದ ಮೇಲೆ ನೈಜ ಕಮ್ಯುನಿಸ್ಟ್ ಪಕ್ಷವಾಗಿ ಬೆಳೆಯಲು ಸಾಧ್ಯವಾಗಲಿಲ್ಲ ಎನ್ನುವುದನ್ನು ಮನಗಂಡು ಕಾಮ್ರೇಡ್ ಶಿವದಾಸ್ ಘೋಷ್‌ರವರು ಕೆಲವೇ ಸಂಗಾತಿಗಳೊಂದಿಗೆ ಯಾವುದೇ ಅಂತರರಾಷ್ಟ್ರೀಯ ಮನ್ನಣೆ ಇಲ್ಲದೆಯೇ, ಹಣ, ಮಾಧ್ಯಮಗಳ ಬೆಂಬಲವಿಲ್ಲದೆ, ಕಡುಕಷ್ಟದಲ್ಲಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷವನ್ನು ಸ್ಥಾಪಿಸಿದರು. ಆದರೆ ಉದಾತ್ತ ಚಿಂತನೆ, ನೀತಿ-ನೈತಿಕತೆಯ ಆಧಾರದ ಮೇಲೆ ದಿನ ಕಳೆದಂತೆ ಪಕ್ಷ ಬೆಳೆದು ಬಂದಿದೆ, ಬಲಿಷ್ಠವಾದ ಹೋರಾಟದ ಶಕ್ತಿಯಾಗಿದೆ. ಕಮ್ಯುನಿಸ್ಟ್ ನೀತಿ ಸಂಹಿತೆಯ ಆಧಾರದ ಮೇಲೆ ಪಕ್ಷದ ಆಂತರಿಕ ಹೋರಾಟವನ್ನು ನಡೆಸಬೇಕು, ಆತ್ಮವಿಮರ್ಶೆ ಮತ್ತು ವಿಮರ್ಶೆಯ ಆಧಾರದ ಮೇಲೆ ನಮ್ಮ ಒಗ್ಗಟ್ಟು ನಿಲ್ಲಬೇಕು, ನಮ್ಮಲ್ಲಿ ತಲೆದೋರುವ ಬಂಡವಾಳಶಾಹಿ ಸಂಸ್ಕೃತಿಯ ಎಲ್ಲಾ ಅವಗುಣಗಳನ್ನು ಮಟ್ಟಹಾಕಬೇಕು, ವ್ಯಕ್ತಿವಾದಕ್ಕೆ ವಿರುದ್ಧವಾಗಿ ಸಾಮೂಹಿಕ ಸಂಸ್ಕೃತಿ ಅಳವಡಿಸಿಕೊಳ್ಳಬೇಕು' ಎಂದು ವಿವರಿಸಿದರು.

ಕಾಮ್ರೇಡ್ ಶಿವದಾಸ್ ಘೋಷ್‌ರವರು ತಾವು ಪ್ರಾರಂಭಿಸಿದ ಹೋರಾಟವನ್ನು ಮುನ್ನಡೆಸಿಕೊಂಡು ಹೋಗಲು ಅವರ ಕೊನೆಯ ದಿನಗಳಲ್ಲಿ ಕಾಮ್ರೇಡರಿಗೆ ನೀಡಿದ ಕರೆಯನ್ನು ಕಾಮ್ರೇಡ್ ಪ್ರವಾಶ್ ಘೋಷ್‌ರವರು ಭಾವುಕರಾಗಿ ನೆನಪಿಸಿದರು. 'ಕಾಮ್ರೇಡ್ ಶಿವದಾಸ್ ಘೋಷ್‌ರವರು ತೋರಿಸಿಕೊಟ್ಟಿರುವ ಸತ್ಯವನ್ನು ಜನರ ಮುಂದಿರಿಸಿದಾಗ, ಚಪ್ಪಾಳೆ ದೊರೆಯುತ್ತದೆ. ಆದರೆ ಅದಷ್ಟೇ ಸಾಲದು. ಜನರ ಸಂಕಷ್ಟಗಳ ಕುರಿತು ಅವರ ಹೃದಯದಾಳದಿಂದ ಬಂದ ಮಾತುಗಳ ಹಿಂದಿನ ನೈಜ ಕಳವಳ, ಸಂಕಟವನ್ನು ನಾವು ಅರಿಯಬೇಕು, ಅವರು ಪ್ರಾರಂಭಿಸಿದ ಹೋರಾಟವನ್ನು ನಾವೆಲ್ಲರೂ ಮುಂದುವರೆಸಬೇಕು' ಎಂದು ಕರೆ ನೀಡಿದರು.

ಇಡೀ ಸಭಾಂಗಣವು ಕಾಮ್ರೇಡ್ ಪ್ರವಾಶ್ ಘೋಷ್‌ರವರ ಕರೆಗೆ ಓಗೊಟ್ಟು ಹೋರಾಟವನ್ನು ನಡೆಸುತ್ತೇವೆಂದು ಪಣ ತೊಟ್ಟಿತು. ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಗೀತೆಯೊಂದಿಗೆ ಅಧ್ಯಯನ ಶಿಬಿರವು ಮುಕ್ತಾಯವಾಯಿತು. ಎಲ್ಲಾ 6 ರಾಜ್ಯಗಳ ವಿಭಿನ್ನ ಭಾಷೆಗಳ ಮಾತನಾಡುವ ಕಾಮ್ರೇಡರೆಲ್ಲರ ಭಾವನೆಯು ಒಂದೇ ಭಾಷೆಯಲ್ಲಿಯೇ ವ್ಯಕ್ತವಾಯಿತು – ಅದುವೇ ಹೋರಾಟದ ಭಾಷೆ! ಹೋರಾಟವನ್ನು ದೃಢವಾಗಿ ಮುನ್ನಡೆಸುವ ಸಂಕಲ್ಪದ ಭಾಷೆ!!

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ವಿದ್ಯಾರ್ಥಿನಿಯ ಮೇಲೆ ದೌರ್ಜನ್ಯ : ಎಐಡಿಎಸ್‌ಓ ಪ್ರತಿಭಟನೆ

ಮೂಡುಬಿದಿರೆಯ ಖಾಸಗಿ ಕಾಲೇಜಿನ ಇಬ್ಬರು ಉಪನ್ಯಾಸಕರು ವಿದ್ಯಾರ್ಥಿನಿಯೊಬ್ಬಳ ಮೇಲೆ ಹಲವು ಬಾರಿ ಅತ್ಯಾಚಾರ ನಡೆಸಿ, ಬೆದರಿಕೆ ಮೂಲಕ ಮೌನವಾಗಿರಿಸಲು ಯತ್ನಿಸಿದ ಹೀನ ಕೃತ್ಯವನ್ನು ತೀವ್ರವಾಗಿ ಖಂಡಿಸಿ ಎಐಡಿಎಸ್‌ಓ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆಯನ್ನು ಸಂಘಟಿಸಿತು. ಅಪರಾಧಿಗಳಿಗೆ ತ್ವರಿತ ಮತ್ತು ನಿದರ್ಶನೀಯ ಶಿಕ್ಷೆ ನೀಡಬೇಕು ಹಾಗೂ ನ್ಯಾಯ ಒದಗಿಸಬೇಕು, ವಿದ್ಯಾರ್ಥಿನಿಯರ ಮತ್ತು ಮಹಿಳೆಯರ ಮೇಲಿನ ಕೃತ್ಯಗಳು ಮರುಕಳಿಸದಂತೆ ತಡೆಗಟ್ಟಬೇಕು ಎಂದು ಎಐಡಿಎಸ್‌ಓ ಆಗ್ರಹಿಸುತ್ತದೆ.



ಹಾಸನ



ಧಾರವಾಡ



ಮೈಸೂರು



ಬೆಳಗಾವಿ

## ಯುದ್ಧ ನಿಲ್ಲಿಸಲು ಒತ್ತಡ

9ನೇ ಪುಟದಿಂದ

*ಇದರರ್ಥವೇನೆಂದರೆ, ಸರ್ಕಾರವು ಜನರ ಹಣದಿಂದ ತಯಾರಾದ ಸರ್ಕಾರಿ ಬಜೆಟ್‌ನ ಅನುದಾನವನ್ನು ಬಳಸಿಕೊಂಡು ಮಾರುಕಟ್ಟೆಯಲ್ಲಿ ತಾನೇ ಖರೀದಿದಾರನಾಗಿ ಕಾಣಿಸಿಕೊಳ್ಳುತ್ತದೆ. ...ಹೀಗೆ ತಾನು ಖರೀದಿ ಮಾಡಿದ ಯುದ್ಧ ಬಳಕೆಯ ಸಾಮಾಗ್ರಿಗಳಿಗೆ ಮಾರುಕಟ್ಟೆ ಲಭ್ಯವಾಗದಿದ್ದರೆ, ಕೈಗಾರಿಕೆಗಳ ಮಿಲಿಟರೀಕರಣದ ಮೂಲಕವೂ ಮಾರುಕಟ್ಟೆಯಲ್ಲಿ ಕೃತಕ ಉಬ್ಬರವನ್ನು ಕಾಯ್ದುಕೊಳ್ಳಲು ಅದಕ್ಕೆ ಸಾಧ್ಯವಾಗುವುದಿಲ್ಲ."* (ಸಂಪುಟ 4) ವಿವಿಧ ಸ್ಥಳಗಳಲ್ಲಿ ಯುದ್ಧವನ್ನು ಆಯೋಜಿಸುವ ಮೂಲಕ, ಜಾಗತಿಕ ಸಾಮ್ರಾಜ್ಯಶಾಹಿಯ ಮುಖ್ಯಸ್ಥ ಅಮೇರಿಕ ಮತ್ತು ಅದರ ಸಹವರ್ತಿ ದೇಶಗಳು ತಮ್ಮ ಮಿಲಿಟರೀಕೃತ ಆರ್ಥಿಕತೆಗೆ ಉತ್ತೇಜನವನ್ನು ನೀಡಲು ಪ್ರಯತ್ನಿಸುತ್ತಿವೆ.

### ಸಾಮ್ರಾಜ್ಯಶಾಹಿ ಯುದ್ಧ ಪ್ರಯತ್ನಗಳನ್ನು ವಿಫಲಗೊಳಿಸಬೇಕು

"ಸಾಮ್ರಾಜ್ಯವಾದ ಯುದ್ಧವನ್ನು ಸೃಷ್ಟಿಸುತ್ತದೆ" ಎಂದು ಒಂದು ಶತಮಾನಕ್ಕೂ ಹೆಚ್ಚು ಹಿಂದೆಯೇ ಮಹಾನ್ ಲೆನಿನ್ ಹೇಳಿದ್ದರು. ಏಕಸ್ವಾಮ್ಯ ಬಂಡವಾಳದ ಪ್ರಾಬಲ್ಯ ಮತ್ತು ಬಂಡವಾಳದ ರಫ್ತುಗಳಿಂದ ನಿರೂಪಿಸಲ್ಪಟ್ಟ ಸಾಮ್ರಾಜ್ಯಶಾಹಿಯ ಸ್ವರೂಪವು ಅಂತರ್ಗತವಾಗಿ ಯುದ್ಧಕ್ಕೆ ಕಾರಣವಾಗುತ್ತದೆ ಎಂದು ಅವರು ನಿರ್ವಿವಾದವಾಗಿ ಪ್ರತಿಪಾದಿಸಿದ್ದರು. ಬಂಡವಾಳಶಾಹಿ ಆರ್ಥಿಕತೆಗಳಲ್ಲಿನ ಲಾಭ ಮತ್ತು ವಿಸ್ತರಣೆಗಾಗಿನ ಉತ್ಕಟ ಆಕಾಂಕ್ಷೆಗೂ ಸಂಪನ್ಮೂಲಗಳು ಮತ್ತು ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳಲು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವೆ ಅನಿವಾರ್ಯವಾಗಿ ನಡೆಯುವ ಸಂಘರ್ಷಕ್ಕೂ ಸಂಬಂಧವಿದೆ ಎಂದು ಅವರು ತೋರಿಸಿಕೊಟ್ಟಿದ್ದಾರೆ.

ಹಾಗಾಗಿ, ಮಾನವೀಯತೆಯ ಮೇಲಿನ ದುರುದ್ದೇಶಪೂರ್ವಕ ಅಪರಾಧವಾದ ಯುದ್ಧಗಳನ್ನು ತಡೆಗಟ್ಟುವುದು, ಮನುಕುಲ ಮತ್ತು ನಾಗರಿಕತೆಯನ್ನು ಉಳಿಸಲು ಅತ್ಯಗತ್ಯ. ಹಾಗಾಗಿ, ಅಮೇರಿಕದಂತಹ ಸಾಮ್ರಾಜ್ಯಶಾಹಿ ದೈತ್ಯರ ಈ ಪೈಶಾಚಿಕ ದಾಳಿಯ ವಿರುದ್ಧ ಚಳುವಳಿಯನ್ನು ತೀವ್ರಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಅಮೆರಿಕ–ಇಸ್ರೇಲ್ ಜೋಡಿ ಜನರ ಪ್ರತಿಭಟನೆಯಿಂದ ಬಾಲ ಮುದುರಿಕೊಂಡಿದ್ದನ್ನು ನೋಡಿದಾಗ ತಿಳಿದುಬರುವುದೇನೆಂದರೆ, ಅಂತಿಮ ಗೆಲುವು ಸರ್ವಾಧಿಕಾರಿಗಳಿಗಲ್ಲ. ಜನರಿಗೇ!

# "ಸೌಜನ್ಯ ಸೇರಿದಂತೆ ಎಲ್ಲಾ ಸಂತ್ರಸ್ತರಿಗೂ ನ್ಯಾಯ ಒದಗಿಸಿ"

**ಧಾರ್ಮಿಕ ಸ್ಥಳವೊಂದರಲ್ಲಿ ನಡೆದಿವೆ ಎನ್ನಲಾದ ಎಲ್ಲ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಿಗೆ ನ್ಯಾಯ ಒದಗಿಸಲು ಎಐಎಂಎಸ್‌ಎಸ್ – ಎಐಡಿವೈಓ – ಎಐಡಿಎಸ್‌ಓ ಆಗ್ರಹ**



ರಾಯಚೂರಿನಲ್ಲಿ ಜಿಲ್ಲಾಧಿಕಾರಿಗಳಿಗೆ ಎಐಡಿವೈಓ ಆಗ್ರಹಪತ್ರ ಸಲ್ಲಿಕೆ



ಎಐಡಿಎಸ್‌ಓ ರಾಜ್ಯ ಸಮಿತಿಯ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ!


ತುಮಕೂರು



ಬಳ್ಳಾರಿ

ಎಐಎಂಎಸ್‌ಎಸ್ ನೇತೃತ್ವದಲ್ಲಿ ಹಲವು ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

Published by: K.Uma on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at : MNS Printers Private Limited, 345/4, Bhattarahalli, Old Madras Raad, Bengaluru, Karnataka - 560 049. Website: www.sucic.org & www.sucic-karnataka.org EDITOR: K.Uma